MYSORE LEGISLATIVE ASSEMBLY

FORTY-FIRST DAY

Saturday, 19th April 1958

The House met in the Assembly Hall, Vidhana Soudha, Bangalore, a One of the Clock.

MR. SPEAKER (SRI S. R. KANTHI, B.A., LL.B.) in the Chair.

BUDGET FOR 1958-59—DEMANDS FOR GRANTS

Demand No. 29—Civil Works.

50. Civil Works.

MR. SPEAKER.—Motion moved :

"That a sum not exceeding Rs. 9,01,92,600 be granted to the Government to defray the charges which will come in course of payment during the year ending 31st day of March 1959, in respect of 'Civil Works.'"

Demand No. 50—Appropriation to Irrigation and Power Development Fund

80–B. Appropriation to Irrigation and Power Development Fund.

MR. SPEAKER.—Motion moved :

"That a sum not exceeding Rs. 33,00,000 be granted to the Government to defray the charges which will come in course of payment during the year ending 31st day of March 1959, in respect of 'Appropriation to Irrigation and Power Development Fund.'"

Demand No. 51—Capital Outlay on Civil Works.

81. Capital Account of Civil Works outside the Revenue Account.

MR. SPEAKER.—Motion moved :

"That a sum not exceeding Rs. 4,04,45,800 be granted to the Government to defray the charges which will come in course of payment during the year ending 31st day of March 1959, in respect of 'Capital Account of Civil Works outside the Revenue Account.'"

Demand No. 53—Capital Account of other Works outside the Revenue Account.

82. Capital Account of other Works outside the Revenue Account.

MR. SPEAKER.—Motion moved :

"That a sum not exceeding Rs. 37,37,500 be granted to the Government to defray the charges which will come in course of payment during the year ending 31st day of March 1959, in respect of 'Capital Account of other Works outside the Revenue Account.'"

Demand No. 42—Working Expenses—Irrigation Works—Commercial.

XVII. I.N.E. and D. Works (Commercial)—Working Expenses.

MR. SPEAKER.—Motion moved :

That a sum not exceeding Rs. 85,68,000 be granted to the Government to defray the charges which will come in course of payment during the year ending 31st day of March 1959, in respect of 'I.N.E. and D. Works (Commercial)—Working Expenses'."

Demand No. 46—Capital Outlay on Irrigation.

68. Construction of Irrigation, Navigation, Embankment and Drainage Works (Commercial)

Mr. SPEAKER.—Motion moved :

"That a sum not exceeding Rs. 6,31,90,600 be granted to the Government to defray the charges which will come in course of payment during the year ending 31st day of March 1959, in respect of 'Construction of Irrigation, Navigation, Embankment and Drainage Works (Commercial).'"

Demand No. 47—Irrigation (Non-Commercial)

68-A. Construction of I.N.E. and D. Works (Non-Commercial.)

Mr. SPEAKER.—Motion moved :

"That a sum not exceeding Rs. 1,20,52,000 be granted to the Government to defray the charges which will come in course of payment during the year ending 31st day of March 1959, in respect of 'Construction of I.N.E. and D. Works—Non-Commercial.'"

Demand No. 10—Irrigation.

18. Irrigation—Other Revenue Expenditure financed from Ordinary Revenues.

Mr. SPEAKER.—Motion moved :

"That a sum not exceeding Rs. 91,72,000 be granted to the Government to defray the charges which will come in course of payment during the year ending 31st day of March 1959, in respect of 'Other Revenue Expenditure financed from Ordinary Revenues.'"

Demand No. 48—Capital Outlay on Improvement of Public Health.

70. Capital Outlay on Improvement of Public Health.

Mr. SPEAKER.—Motion moved :

"That a sum not exceeding Rs. 59,83,000 be granted to the Government to defray the charges which will come in course of payment during the year ending 31st day of March 1959, in respect of 'Capital Outlay on Improvement of Public Health.'"

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ರಾಜ್ಯ ಪುನರ್ ವಿಂಗಡನೆ ಆದನಂತರ ಮರಾಮತ್ತು ಇಲಾಖೆಯಲ್ಲಿ ಅತೃಪ್ತಿ ಮತ್ತು ಅಸಹಕಾರ ಉದ್ಭವಿಸಿರತಕ್ಕ ಕೆಲವು ಸಂದರ್ಭಗಳನ್ನು ಸಭೆಯ ಮುಂದೆ ತಂದರೆ ಬಹಳ ಉತ್ತಮ ಎಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಬಹಳ ಮುಖ್ಯವಾದದ್ದು ಎಂದರೆ ಇಂಟರ್ ಸ್ಟೇಟ್ ಸೀನಿಯಾರಿಟಿ ಲಸ್ಟನ್ನು ತಯಾರು ಮಾಡುವ ಸಂದರ್ಭದಲ್ಲಿ ಉಂಟಾಗಿರತಕ್ಕ ಅತೃಪ್ತಿ ಈ ಇಲಾಖೆಯಲ್ಲಿ ದಿನೇ ದಿನೇ ಹೆಚ್ಚುತ್ತಾ ಇದೆ. ಅದು ಹೇಗೆ ಎನ್ನುವುದನ್ನೂ ಈಗ ಸ್ವಲ್ಪ ಸಭೆಯ ಗಮನಕ್ಕೆ ತರುವುದು ದೇಶದ ಹಿತದೃಷ್ಟಿಯಿಂದ ಬಹಳ ಉತ್ತಮ. ಈ ಒಂದು ಇಲಾಖೆ ದೇಶದ ಒಂದು ಬೆಳವಣಿಗೆಯನ್ನು ಅಭಿವೃದ್ಧಿಯನ್ನು ಕಾಪಾಡಲಿಕ್ಕೆ ಅತ್ಯುತ್ತಮವಾದ ಕೆಲಸ ಮಾಡತಕ್ಕ ಇಲಾಖೆ. ಇಂಥಾ ಇಲಾಖೆಯಲ್ಲಿ ಅತೃಪ್ತಿ ಬೆಳೆದರೆ ದೇಶಕ್ಕೆ ಹಾನಿಕರ ಎಂಬುದನ್ನು ಸರ್ಕಾರ ಪೂರ್ಣವಾಗಿ ಮನಗಂಡಿರಬೇಕು.

ಈಗಾಗಲೇ ಕೆಲವು ವಿಷಯಗಳು ಸರ್ಕಾರದ ಗಮನಕ್ಕೆ ಬಂದಿದ್ದರೂ ಬಂದಿರಬಹುದು. ಹಳೆಯ ಮೈಸೂರು ಸಂಸ್ಥಾನದಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಟೆಕ್ನಿಕಲ್ ಪರ್ಸೊನೆಲ್ ಬಹಳ ಜನ ಸಿಕ್ಕುತ್ತಾ ಇದ್ದರು. ಬೊಂಬಾಯಿ, ಮದರಾಸು ಮತ್ತು ಸೌತ್ ಕೆನರಾದಿಂದ ಬಂದಿರತಕ್ಕ ಪ್ರದೇಶದಲ್ಲಿ ಅಂಥಾ ಟೆಕ್ನಿಕಲ್ ಪರ್ಸೊನೆಲ್ ಸಿಕ್ಕುವುದಕ್ಕೆ ಅಭಾವ ಇತ್ತು. ಟೆಕ್ನಿಕಲ್ ಪರ್ಸನ್ಸ್ ಸಿಕ್ಕದೇ ಇದ್ದುದರಿಂದ, ಹಳೇ ಮೈಸೂರಿನಲ್ಲಿ ಹೆಚ್ಚು ಜನ ಟೆಕ್ನಿಕಲ್ ಪರ್ಸನ್ಸ್ ಇದ್ದುದರಿಂದ ಯಾರ್ಯಾರಿಗೆ ಇಲ್ಲಿ ಕೆಲಸ ಸಿಕ್ಕಲಿಲ್ಲವೋ ಅವರೆಲ್ಲರೂ ಬೊಂಬಾಯಿ ಮತ್ತು ಇತರ ಪ್ರಾಂತ್ಯಗಳಲ್ಲಿ ಹೋಗಿ ಕೆಲಸಕ್ಕೆ ಸೇರಿದರು. ಈಗ ಉದ್ಭವಿಸಿರತಕ್ಕ ಕೆಲವು ವಿಷಯಗಳನ್ನು ನಾವು ಮನಗಾಣಬೇಕಾಗಿದೆ. ಇದರಿಂದ ಆಗಿರುವುದೇನೆಂದರೆ, 20-25 ವರ್ಷ ಸರ್ವೀಸ್ ಆಗಿರತಕ್ಕಂಥ ಹಳೇ ಮೈಸೂರಿನ ಅಧಿಕಾರಿಗಳ, ಹಿತಕ್ಕೆ ಧಕ್ಕೆ ಬಂದಿದೆ. ಅತೃಪ್ತಿ ಹೆಚ್ಚಾಗುತ್ತ ಇದೆ. ಇದು ಅಷ್ಟೇ ಅಲ್ಲ; ಸ್ಕೇಲ್ ಆಫ್ ಪೇ ವಿಷಯದಲ್ಲೂ ವ್ಯತ್ಯಾಸ ಇದೆ. ಹಳೇ ಮೈಸೂರಿನ ಅಧಿಕಾರಿಗಳಿಗೂ ಹೊಸ ಪ್ರಾಂತ್ಯದಿಂದ ಬಂದಿರತಕ್ಕ ಅಧಿಕಾರಿಗಳಿಗೂ ಸಂಬಳದಲ್ಲಿ ಅಜಗಜಾಂತರ ವ್ಯತ್ಯಾಸ ಕಾಣುತ್ತಾ ಇದೆ. Equal pay for equal work ಎನ್ನುವ ತತ್ವವನ್ನು ರಾಜ್ಯಾಂಗದ ನೀತಿಯನ್ನು ಸರ್ಕಾರ ಆದಷ್ಟು ಜಾಗ್ರತೆ ಅನುಸರಿಸಬೇಕು. ರಾಜ್ಯ ಪುನರ್ ವಿಂಗಡಣೆ ಸಂದರ್ಭದಲ್ಲಿ ಇಂಥಾ ತೊಡಕುಗಳು ಬರುವ ಸಂಭವ ಇದೆ. ಆದರೆ ಜಾಗ್ರತೆ ಇದನ್ನು ಪರಿಹಾರ ಮಾಡತಕ್ಕ ನೀತಿಯನ್ನು ಸರ್ಕಾರ ಕೈಕೊಳ್ಳಬೇಕು. ಕೈಗೊಳ್ಳದಿದ್ದರೆ ಇಂಥಾ ಒಂದು ಇಲಾಖೆಯಲ್ಲಿ ಅಪಾಯ ಬಹಳ ಹೆಚ್ಚು ಎಂದು ನಾನು ಸರ್ಕಾರದವರನ್ನು ಒತ್ತಾಯ ಪಡಿಸುತ್ತೇನೆ.

ಸೀನಿಯಾರಿಟಿ ಲಸ್ಟ್ ವಿಷಯದಲ್ಲಿ ಯಾವ ಒಂದು ಕೇಡರ್‌ನಲ್ಲಿ ಹೆಚ್ಚು ಅಶಾಂತಿ ಮತ್ತು ಅತೃಪ್ತಿ ಇದೆ

---

* Asterisk indicates that the remarks or speeches have not been revised by the member concerned.

ಎಂದರೆ, ಅಸಿಸ್ಟೆಂಟ್ ಇಂಜನಿಯರ ಕೇಡರ್‌ನಲ್ಲಿ. ಅದಕ್ಕೆ ಕಾರಣ ಹೀಗಿದೆ:—63 ಜನ ಅಸಿಸ್ಟೆಂಟ್ ಇಂಜನಿಯರುಗಳನ್ನು 1949ನೆಯ ಇಸವಿಯಲ್ಲಿ ಸೀನಿಯರ್ ಸೂಪರ್‌ವೈಸರ್ಸ್ ಗ್ರೇಡ್‌ನಿಂದ ಸೀನಿಯರ್ ಅಸಿಸ್ಟೆಂಟ್ ಇಂಜನಿಯರುಗಳನ್ನಾಗಿ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಶಿಫಾರಸು ಕಳುಹಿಸಲಾಯಿತು. 1949ನೆಯ ಇಸವಿಯಲ್ಲಿ ಆಗ ಅವರನ್ನು ಟೆಂಪೊರೆ ಅಸಿಸ್ಟೆಂಟ್ ಇಂಜನಿಯರುಗಳನ್ನಾಗಿ ತೆಗೆದುಕೊಂಡರು. . . . ; .

*ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಶಾಖಾ ಮಂತ್ರಿಗಳು).—ಹಾಗಲ್ಲ. ಆಗ ಗ್ರ್ಯಾಜ್ಯುಯೇಟ ಸೂಪರ್‌ವೈಸರ್ಸ್ ಎಂದು ಇದ್ದರು. ಆ ಗ್ರ್ಯಾಜ್ಯುಯೇಟ್ ಸೂಪರ್‌ವೈಸರುಗಳನ್ನು ಹಂಗಾಮಿ ಅಸಿಸ್ಟೆಂಟ್ ಇಂಜನಿಯರ್‌ಗಳೆಂದು ತೆಗೆದುಕೊಳ್ಳಲಾಗಿತ್ತು.

ಶ್ರೀ ಯು. ಎಂ. ಮಾದಪ್ಪ.—ಹೌದು. ಗ್ರ್ಯಾಜ್ಯುಯೇಟ್ ಸೂಪರ್‌ವೈಜರುಗಳನ್ನು ಟೆಂಪರರಿ ಅಸಿಸ್ಟೆಂಟ್ ಇಂಜನಿಯರುಗಳನ್ನಾಗಿ ಅಪಾಯಿಂಟ್ ಮಾಡಿದರು. ಹಾಗೆ ಅವರನ್ನು ಅಪಾಯಿಂಟ್ ಮಾಡಿಕೊಂಡನಂತರ ಅವರನ್ನು ಆ ಹುದ್ದೆಯಲ್ಲಿ ಕನ್‌ಫರ್ಮ್ ಮಾಡಲು ಸರ್ಕಾರಕ್ಕೆ ಕಳುಹಿಸಬೇಕಾಗಿ ಬಂತು. ಆದರೆ ಅವರನ್ನು 1956ರಲ್ಲಿ ರಾಜ್ಯಗಳ ಪುನರ್ ವಿಂಗಡಣೆ ಆಗುವ ತನಕ ಕನ್‌ಫರ್ಮ್ ಮಾಡಲೇ ಇಲ್ಲ. ಅವರನ್ನು ಸಕಾಲಕ್ಕೆ ಆಗಿದ್ದಂಥ ಸರ್ಕಾರದವರು ಕನ್‌ಫರ್ಮ್ ಮಾಡಿದ್ದರೆ ರಾಜ್ಯಗಳ ಪುನರ್ ವಿಂಗಡಣೆಯಾದ ನಂತರ ಇತರರಿಗೆ ಏನೇನು ಸೌಲಭ್ಯಗಳು ಸಿಕ್ಕಿದವೋ ಅವು ಇವರುಗಳಿಗೂ ಕೂಡ ಸಿಕ್ಕುತ್ತಿತ್ತು. ಹಾಗೆ ಆ ದಿವಸ ಇವರನ್ನೆಲ್ಲ ಕನ್‌ಫರ್ಮ್ ಮಾಡದೆ ಇದ್ದುದರಿಂದ ರಾಜ್ಯಗಳ ಪುನರ್ವಿಂಗಡಣೆಯಾದ ನಂತರ ಇಲ್ಲಿ ಅನೇಕ ತೊಂದರೆಗಳುಂಟಾಗತಕ್ಕ ಪರಿಸ್ಥಿತಿ ಉದ್ಭವವಾಗಲು ಅವಕಾಶವಾಯಿತೆಂದು ಹೇಳಲಿಚ್ಛಿಸುತ್ತೇನೆ. ಈ ದಿವಸ ಈ ಅಧಿಕಾರಿಗಳನ್ನು ಯಾವರೀತಿ ಕನ್‌ಫರ್ಮ್ ಮಾಡಬೇಕಾಗಿದೆ ಎಂದರೆ ಇವರನ್ನು ಯಾವ ಡೇಟಿನಲ್ಲಿ ಈ ಹುದ್ದೆಗಳಿಗೆ ನೇಮಕ ಮಾಡಲಾಯಿತೋ ಆ ಡೇಟಿನಿಂದಲೇ ಆ ಸ್ಥಾನಗಳಲ್ಲಿ ಅವರನ್ನು ಖಾಯಂ ಮಾಡಬೇಕೆಂದು ಹೇಳುತ್ತೇನೆ. ಹಾಗೆ ಮಾಡದೆ ಹೋದರೆ ಅವರಿಗೆ ಮುಂದೆ ದೊರೆಯಬೇಕಾಗಿರುವಂಥ ಪ್ರಮೋಷನ್‌ಗಳು ಅವರಿಗೆ ಸಿಕ್ಕುವುದಿಲ್ಲ. ಇದರಿಂದ ಇವರುಗಳಿಗೆಲ್ಲ ಬಹಳ ಅನ್ಯಾಯವಾಗುತ್ತದೆ. ಇತ್ತೀಚೆಗೆ ರಾಜ್ಯ ಪುನರ್ವಿಂಗಡಣೆಯಾದನಂತರ ಇಲ್ಲಿಗೆ ಬಂದಿರತಕ್ಕ ಈ ಇಲಾಖೆಯ ಅಧಿಕಾರಿಗಳಿಗೆ ಕೇವಲ ಎಂಟು ಹತ್ತು ವರ್ಷಗಳು ಸರ್ವೀಸಾಗಿದ್ದರೂ ಇವರು ಹಳೆಯ ಮೈಸೂರಿನಲ್ಲಿ 15-20 ವರ್ಷ ಸರ್ವೀಸಾಗಿರತಕ್ಕವರ ಮೇಲೆ ಬರುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—1947ರಿಂದ ಇಲ್ಲಿಗೆ 15-20 ವರ್ಷಗಳ ಸರ್ವೀಸ್ ಆಗಿ ಬಿಡುತ್ತದೆಯೇ ?

ಶ್ರೀ ಯು. ಎಂ. ಮಾದಪ್ಪ.—ನಾನೀಗ ಜನರಲ್ ಆಗಿ ಈ ವಿಚಾರಗಳನ್ನು ಹೇಳುತ್ತಿದ್ದೇನೆ. ಈ ದಿವಸ ಹೊರಗಡೆಯಿಂದ ಇಲ್ಲಿಗೆ ಬರತಕ್ಕ ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೂ ಇಲ್ಲಿರತಕ್ಕ ನಮ್ಮ ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೂ ಬಹಳ ವ್ಯತ್ಯಾಸವಿದೆ. ಅವರ ಕೆಲಸ ಮತ್ತು ದಕ್ಷತೆ ಇಬ್ಬರಲ್ಲೂ ಒಂದೇ ಆಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲಸ ಇಬ್ಬರದೂ ಒಂದೇ ಎಂಬುದೇನೋ ಸರಿ. ಆದರೆ ದಕ್ಷತೆಯಲ್ಲಿ ಹೇಗೆ ಅವರೂ ಇವರೂ ಒಂದೇ ಆಗಿರುತ್ತಾರೆಂದು ಹೇಳುತ್ತೀರಿ ?

ಶ್ರೀ ಯು. ಎಂ. ಮಾದಪ್ಪ.—ಹಳೆಯ ಮೈಸೂರಿನ ಇಂಜಿನಿಯರಿಂಗ್ ಇಲಾಖೆ ಎಷ್ಟು ಕೀರ್ತಿ ಪಡೆದಿದೆ ಎನ್ನುವುದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಈ ದಕ್ಷತೆ ಇಬ್ಬರಲ್ಲೂ ಒಂದೇ ಆಗಿದ್ದರೂ ನಮ್ಮ ಹಳೆಯ ಮೈಸೂರಿನವರ ದಕ್ಷತೆ ಒಂದು ಹಿರಿಮೆಯದಾಗಿರುತ್ತದೆ. ಆದರೆ ಈ ಹಿಂದೆ ಇವರನ್ನು ಇಲ್ಲಿ ಕನ್‌ಫರ್ಮ್ ಮಾಡಿ ಎಂತ ಹೇಳಿದಾಗ ಆಗಲೂ ಕನ್‌ಫರ್ಮ್ ಮಾಡಲಿಲ್ಲ. ಅಥವಾ ಹಾಗೆ ಖಾಯಂ ಮಾಡದೆ ಕೈಬಿಟ್ಟಂಥ ಕಾಲದಲ್ಲಿ ಇವರಾದರೂ ಏನೋ ರಾಜ್ಯಗಳ ಪುನರ್ವಿಂಗಡಣೆಯಾದನಂತರ ಮಾಡಬಹುದೆಂಬ ಒಂದು ಸದುದ್ದೇಶದಿಂದ ಗಲಾಟೆ ವಗೈರೆಗಳೇನನ್ನೂ ಮಾಡಲಿಲ್ಲ. ಆದ್ದರಿಂದ ಸರ್ಕಾರದವರು ಆ ದಿವಸ ಇವರೇನೂ ಅಂಥಾ ಒಂದು ಒತ್ತಾಯವನ್ನೇಕೆ ಮಾಡಬಾರದಾಗಿತ್ತೆಂಬ ನೆಪದ ಮೇಲೆ ಅವರ ಅಭಿವೃದ್ಧಿಯನ್ನು ಮೊಟಕು ಮಾಡುವುದು ಸರಿಯಲ್ಲ. ಹಾಗೆ ಮಾಡಬೇಡಿ. ಇವರು ಯಾವ ತಾರೀಖಿನಿಂದ ಈ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೋ ಆ ತಾರೀಖಿನಿಂದಲೇ ಇವರನ್ನು ಈ ಹುದ್ದೆಗಳಲ್ಲಿ ಖಾಯಂ ಮಾಡುವಂತೆ ತಾವು ಏರ್ಪಾಡು ಮಾಡಬೇಕು. ತಾವು ಹೀಗೆ ಮಾಡಿದರೆಯೆ ಈ ದಿವಸ ಇವರಲ್ಲಿರುವ ಅತೃಪ್ತಿ, ಅಸಮಾಧಾನ, ಅಸಹಕಾರ ಭಾವನೆಗಳನ್ನು ಕಡಮೆ ಮಾಡಲು ಸಾಧ್ಯವೆಂದು ಹೇಳುತ್ತೇನೆ.

ಈ ಇಲಾಖೆಯ ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಈ ದಿವಸ ಆರು ಜನ ಡೆಪ್ಯುಟಿ ಚೀಫ್ ಇಂಜಿನಿಯರುಗಳಿದ್ದಾರೆ. ಮೂರು ಹುದ್ದೆಗಳು ಜನರಲ್ ಬ್ರ್ಯಾಂಚಿಗೂ ಎರಡು ಹುದ್ದೆಗಳು ಇರಿಗೇಷನ್ ಬಾಬಿಗೂ ನೇಮಕವಾಗಿದ್ದು ಇನ್ನೊಂದು ಹುದ್ದೆ ಇನ್ನೂ ಭರ್ತಿ ಆಗದೆ ಹಾಗೇ ಉಳಿದಿದೆಯೆಂದು ತಿಳಿಯುತ್ತೇನೆ. ಈ ಖಾಲಿ ಬಿದ್ದಿರುವ ಸ್ಥಾನಕ್ಕೆ ಯಾರನ್ನೂ ಭರ್ತಿ ಮಾಡಬಾರದೆಂದು ಹೇಳುತ್ತೇನೆ. ಹೀಗೆ ಕಲ್ಪಿಸಿಕೊಂಡಿರತಕ್ಕ ಆರು ಹುದ್ದೆಗಳನ್ನು ಯಾವ ರೀತಿ ಇತ್ಯರ್ಥ ಮಾಡಬೇಕೆಂಬ ಬಗ್ಗೆ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ಇಲಾಖೆಯಲ್ಲಿ ಹೆಚ್ಚು ಕಡಿಮೆ ಎಲ್ಲ ವಿಚಾರಗಳಲ್ಲೂ ಚೀಫ್ ಇಂಜಿನಿಯರ್ ಅವರದೇ ಆಖೈರು ತೀರ್ಮಾನ. ಹೆಡ್‌ಕ್ವಾರ್ಟರಿನಲ್ಲಿ ಚೀಫ್ ಇಂಜಿನಿಯರ್‌ಗಳು ಇಲ್ಲದೆ ಇದ್ದಾಗ ಈ ಡೆಪ್ಯುಟಿ ಚೀಫ್ ಇಂಜಿನಿಯರುಗಳು ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಇವರಿಗೆ ಯಾವ ಅಂಥ ಅಧಿಕಾರಗಳೂ ಇರುವುದಿಲ್ಲ. ಇವರು ಕೇವಲ ಟಪ್ಪಾಲ್ ಮಾಸ್ತರುಗಳಂತೆ ಕೆಲಸಮಾಡುತ್ತಿರುತ್ತಾರೆ. ಇವರ ಕೆಳಗಿನ ದರ್ಜೆಯ ಅಧಿಕಾರಿಗಳಾದ ಸೂಪರಿಂಟೆಂಡಿಂಗ್ ಇಂಜಿನಿಯರು ಯಾವತ್ತೂ ಹೆಡ್ ಕ್ವಾರ್ಟರ್ಸಿನಲ್ಲಿದ್ದೇ ಇರುತ್ತಾರೆ. ಇಲಾಖೆಯ ಕೆಳ ದರ್ಜೆ ಅಧಿಕಾರಿಗಳಿಂದ ಚೀಫ್ ಇಂಜಿನಿಯರ್ ಅವರಿಗೆ ಹೋಗತಕ್ಕ ಎಸ್ಟಿಮೇಟ್, ಪ್ಲಾನ್, ಇತ್ಯಾದಿಗಳನ್ನೆಲ್ಲ ಈ ಹಂತದಲ್ಲಿ ಸ್ಕ್ರುಟಿನಿ ಮಾಡಲು ಸಾಧ್ಯವಿದೆ. ಆದಕಾರಣ ಈ ದಿವಸ ಈ ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಗೂ ಮತ್ತು ಚೀಫ್ ಇಂಜಿನಿಯರ್ ಹುದ್ದೆಗೂ ಮಧ್ಯೆ ಇರತಕ್ಕ ಡೆಪ್ಯುಟಿ ಚೀಫ್ ಇಂಜಿನಿಯರುಗಳ ಸ್ಥಾನವನ್ನು ಕಲ್ಪಿಸಿರುವುದರಿಂದ ಕೆಲಸ ಕಾರ್ಯಗಳು ಬೇಗ ನಡೆಯುವುದಕ್ಕೆ ಅಡ್ಡಿಯಾಗಿದೆ. ಈ ಡೆಪ್ಯುಟಿ ಚೀಫ್ ಇಂಜಿನಿಯರ್‌ಗಳಿಂದ ಕೆಲಸಗಳು ನಿಧಾನವಾಗಿ ಬೇಗ ವಿಲೇವಾರಿಯಾಗುವುದರ ಬಗ್ಗೆ ತುಂಬ ಅಡಚಣೆ ಮಾತ್ರ ಉಂಟಾಗಿದೆಯೇ ಶಿವಾಯಿ ಈ ಹುದ್ದೆಗಳನ್ನು ಕಲ್ಪಿಸಿದ್ದರಿಂದ ಏನೂ ಪ್ರಯೋಜನವಾಗಿಲ್ಲ. ಆದುದರಿಂದ ಈ ಹುದ್ದೆಗಳನ್ನು ಆದಷ್ಟೂ ಕಡಮೆ ಮಾಡಬೇಕು. ಮಾಡಿದರೆ ಕೆಲಸಗಳು ಬೇಗ

(ಶ್ರೀ ಯು. ಎಂ. ಮಾದಪ್ಪ)

ಬೇಗ ನಡೆಯಲು ಅನುಕೂಲವಾಗುವುದೇ ಅಲ್ಲದೆ ಮಿತವ್ಯಯ ದೃಷ್ಟಿಯಿಂದಲೂ ಅನುಕೂಲವಾಗುತ್ತದೆ. ತೀರಾ ಅಗತ್ಯದೆಂದರೆ ಜನರಲ್ ಮತ್ತು ಇರಿಗೇಷನ್ ಈ ಎರಡು ಬಾಬಿನಿಂದಲೂ ಒಂದು ಈ ಸ್ಥಾನ ಇಟ್ಟುಕೊಂಡರೆ ಸಾಕು. ಈಗ ಎಷ್ಟು ಈ ಸ್ಥಾನಗಳು ಖಾಲಿಯಿರುತ್ತವೋ ಅಂಥವುಗಳನ್ನು ಭರ್ತಿ ಮಾಡಕೂಡದೆಂದು ಹೇಳುತ್ತೇನೆ. ಇತ್ತೀಚೆಗೆ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳಿಗೆ ಹೆಚ್ಚು ಅಧಿಕಾರ ಕೊಟ್ಟಿದ್ದಾರೆ. ಆದಾಗ್ಯೂ ನಮ್ಮ ಜಿಲ್ಲೆಯಲ್ಲಿ ಅವರಿಗೆ ಕಳುಹಿಸಿರುವಂಥ ಅನೇಕ ಎಸ್ಟಿಮೇಟುಗಳು ಹಾಗೇ ನಿಂತಿರುತ್ತವೆ. ಅವರು ಅವರಿಗೆ ಕೊಟ್ಟಿರತಕ್ಕ ಅಧಿಕಾರವನ್ನೂ ಸಹ ಸರಿಯಾಗಿ ಉಪಯೋಗಿಸುತ್ತಿಲ್ಲ. ಹೀಗಾಗಿ ಈ ದಿವಸ ದೇಶದಲ್ಲಿ ನೇಷನ್ ಬಿಲ್ಡಿಂಗ್ ಆಕ್ಟಿವಿಟೀಸ್ ಬಹಳ ನಿಧಾನವಾಗುತ್ತವೆ. ಇವರು ಸ್ವಲ್ಪವಾದರೂ ಜವಾಬ್ದಾರಿಯನ್ನು ತೆಗೆದುಕೊಂಡು ಕೆಲಸ ಮಾಡುತ್ತಿಲ್ಲ. ಸಾಮಾನ್ಯವಾಗಿ ಈ ಇಲಾಖೆಯಲ್ಲಿ ಏನೇ ಕೆಲಸ ಕಾರ್ಯಗಳಾಗ ಬೇಕಾಗಿದ್ದರೂ ಲಂಚ ಕೊಡದೆ ಹೋದರೆ ಆ ಕೆಲಸಕಾರ್ಯಗಳೊಂದೂ ಆಗುವುದಿಲ್ಲವೆಂಬ ಒಂದು ಭಾವನೆ ಹುಟ್ಟಿ ಹೋಗಿದೆ. ಆದರೆ ಇದು ನೂರಕ್ಕೆ ನೂರು ಭಾಗ ನಿಜವಲ್ಲ. ಈ ಇಲಾಖೆಯಲ್ಲೂ ಸತ್ಯ ಧರ್ಮಗಳಿಂದ ಕೆಲಸ ಮಾಡತಕ್ಕಂಥ ದಕ್ಷರಾದ ಅಧಿಕಾರಿಗಳಿದ್ದಾರೆ. ಅಂಥವರಿಗೆ ಸರ್ಕಾರ ಸಾಕಷ್ಟು ಪ್ರೋತ್ಸಾಹ ನೀಡುತ್ತಿಲ್ಲ. ಯಾವತ್ತೂ ಈ ತೊಂದರೆ ತಾಪತ್ರಯಗಳು ಕೇವಲ ದುರ್ಜನರಾದಂಥ ಅಧಿಕಾರಿಗಳೊಬ್ಬರಿಗೇ ಅಲ್ಲದೆ ಸತ್ಯದಿಂದ ಕೆಲಸ ಮಾಡತಕ್ಕಂಥ ದಕ್ಷರಾದ ಅಧಿಕಾರಿಗಳಿಗೂ ತೊಂದರೆಗಳಾಗುತ್ತವೆ. ದಕ್ಷರಾಗಿರತಕ್ಕಂಥ ಅಧಿಕಾರಿಗಳು ಲಂಚ ರುಷವತ್ತು ತೆಗೆದುಕೊಳ್ಳದೆ ಇದ್ದಾಗ್ಯೂ ಅವರಿಗೆ ದೊರೆಯತಕ್ಕ ಪ್ರಮೋಷನ್ ಇತ್ಯಾದಿಗಳಲ್ಲಿ ಅನ್ಯಾಯ ನಡೆದು ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರಲ್ಲೂ ಅಶಾಂತಿ ಅತೃಪ್ತಿಗಳು ಮೂಡಿರುತ್ತವೆ. ಏಕೆಂದರೆ, ಇವರಿಗೆ ಲಂಚದ ವಾಸನೆಯೇ ಗೊತ್ತಿರುವುದಿಲ್ಲವಾದ್ದರಿಂದ ಇವರು ಕಂಟ್ರಾಕ್ಟರುಗಳಿಗೆ ಪಾವತಿ ಮಾಡತಕ್ಕ ಹಣದ ಬಗ್ಗೆ ಚೆಕ್ಕುಗಳನ್ನು ಅವರಿಗೆ ನೇರವಾಗಿ ಕಳುಹಿಸಿ ಬಿಡುತ್ತಾರೆ. ಮಧ್ಯೆ ದಲ್ಲಾಳಿಗಳಿಗೆ ಅವಕಾಶವಿರುವುದಿಲ್ಲ. ಇಂಥಾ ಅಧಿಕಾರಿಗಳೂ ಇದ್ದಾರೆ. ಇವರ ಬಗ್ಗೆ ಸರ್ಕಾರದವರು ಸಂಪೂರ್ಣ ಸಹಾನುಭೂತಿ ತೋರಿಸಲೇ ಬೇಕು. ಕೆಳಗಿನ ಅಧಿಕಾರಿಗಳಿಗೂ ಮೇಲಿನ ಅಧಿಕಾರಿಗಳಿಗೂ ಮಧ್ಯೆ ಇರತಕ್ಕವರ ಕೈವಾಡ ಕೆಲವುಕಡೆ ಉಂಟು. ಆದ್ದರಿಂದ ಸರ್ಕಾರದವರು ಈ ವಿಚಾರಗಳಲ್ಲೆಲ್ಲ ಕಣ್ಣಿಟ್ಟು ನೋಡಬೇಕಾಗಿದೆ. ಯಾರಯಾರ ಯೋಗ್ಯತೆ ಏನೆಂಬುದನ್ನು ತಿಳಿಯಲು ಸರ್ಕಾರ ಪ್ರಯತ್ನಪಡಬೇಕು. ದಕ್ಷರಾದಂಥ ಜನರಿಗೆ ಹೆಚ್ಚಿನ ಪ್ರೋತ್ಸಾಹ ನೀಡತಕ್ಕದ್ದರ ಮೂಲಕ ದೇಶಾಭಿವೃದ್ಧಿ ಕಾರಗಳು ಬೇಗ ನಡೆಯುವಂತೆ ಏನಾದರೂ ಒಂದು ಇಂಥ ಏರ್ಪಾಡನ್ನು ಮಾಡಲೇ ಬೇಕು. ಈ ವಿಚಾರದಲ್ಲಿ ಚೀಫ್ ಇಂಜಿನಿಯರ್ ಆದವರು ಪ್ರತಿಯೊಂದು ದಿನವೂ ಯಾರ್ಯಾರಿಂದ ಎಷ್ಟೆಷ್ಟು ಕೆಲಸ ನಡೆಯುತ್ತಿದೆ ಎಂಬುದನ್ನು ನೋಡುವಂಥ ಒಂದು ಅಭ್ಯಾಸವನ್ನು ಇಟ್ಟುಕೊಂಡಿರಬೇಕು. ಇಂಥ ಒಂದು ಕಂಟ್ರೋಲ್ ರೂಮನ್ನು ಸ್ಥಾಪನೆ ಮಾಡಿ ಪ್ರತಿಯೊಬ್ಬರ ಕೆಲಸಗಳ ಬಗ್ಗೆ ಎಷ್ಟೆಷ್ಟರ ಮಟ್ಟಿಗೆ ಪ್ರೋಗ್ರೆಸ್ ನಡೆಯುತ್ತಿದೆಯೆಂಬುದನ್ನು ಅವರು ಚೆಕ್ ಮಾಡುತ್ತಿರಬೇಕು. ಯಾವುದಾದರೊಂದು ಕೆಲಸವನ್ನು ಅವರು ಇಂತಿಷ್ಟು ದಿವಸಗಳಲ್ಲಿ ಮಾಡಬೇಕೆಂದು ನಿಗದಿ ಮಾಡಿದ್ದಾಗ ಅವರು ಆ ರೀತಿ ಆ ಕೆಲಸ ಮುಗಿಸದೆ ಹೋದರೆ ಅಂಥವರಿಗೆ ಸಲ್ಪ ಶಿಕ್ಷೆಮಾಡಲೇಬೇಕು. ಕೆಲವು ಸಣ್ಣ ಪುಟ್ಟ ಅಧಿಕಾರಿಗಳಿಗೆ ಕೆಲವು ಸಣ್ಣ ಪುಟ್ಟ ಶಿಕ್ಷೆಗಳನ್ನು ಕೊಡತಕ್ಕದ್ದು ಸೂಕ್ತವೆಂದು ಮನುಧರ್ಮ ಶಾಸ್ತ್ರದಲ್ಲೂ ಹೇಳಿದೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಂಥ ಬಾಬುಗಳಲ್ಲಿ ಈ ರೀತಿ ಒಂದು ಭಯವನ್ನಿಟ್ಟುಕೊಂಡಿರಬೇಕಾದ್ದು ಆವಶ್ಯಕ. ಈಗ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೇಜರ್, ಮೈನರ್ ಮತ್ತು ಮೀಡಿಯಂ ಇರಿಗೇಷನ್ ಯೋಜನೆಗಳ ಬಗ್ಗೆ ಐದು ಕೋಟಿ ರೂಪಾಯಿಗಳ ಒಂದು ಅಂದಾಜನ್ನಿಟ್ಟುಕೊಂಡಿದ್ದೇವೆ. ಇಲ್ಲಿಯವರೆಗೂ ಇದರಲ್ಲಿ ನಾಲ್ಕನೇ ಒಂದು ಭಾಗ ಕೂಡ ಖರ್ಚಾಗಿಲ್ಲ. ನನಗಾದರೋ ಅನಿಸುತ್ತಿದೆ—ಈ ಮೊಬಲಗು ಖಂಡಿತ ಪೂರ್ಣವಾಗಿ ಖರ್ಚಾಗುವುದಿಲ್ಲ ಎಂದು. ಸರ್ಕಾರದವರೇನಾದರೂ ಒಂದು ಸರ್‌ಪ್ಲಸ್ ಬಡ್ಜೆಟ್ಟನ್ನು ತೋರಿಸಬೇಕೆಂಬ ಉದ್ದೇಶದಿಂದ ಆ ಹಣವನ್ನೆಲ್ಲ ಪೂರ್ಣವಾಗಿ ಅವರಿಗೆ ಉಪಯೋಗ ಮಾಡಬೇಡಿ ಎಂಬುದಾಗಿ ತಿಳುವಳಿಕೆಯನ್ನೇನಾದರೂ ಕೊಟ್ಟಿದ್ದಾರೋ ಏನೋ ಎಂದು ನನಗೆನಿಸುತ್ತದೆ. ಏಕೆಂದರೆ, ದುಡ್ಡನ್ನೇನೋ ಆಥರೈಸು ಮಾಡುತ್ತೀರಿ. ಖರ್ಚು ಮಾತ್ರ ಆಗುವುದಿಲ್ಲ. ಏಕೆ ಆಗುತ್ತಿಲ್ಲ ಎನ್ನುವುದನ್ನು ಸರಿಯಾಗಿ ತನಿಖೆ ನಡೆಸುತ್ತಿಲ್ಲ. ಹೀಗಾಗಿ ಎಷ್ಟೋಕಡೆ ಕೆಲಸಗಳೇ ಆಗುತ್ತಿಲ್ಲ. ಎಷ್ಟೋ ಕಡೆ ಟೆಕ್ನಿಕ್ಯಾಲಿಟಿಗಳನ್ನೆಲ್ಲ ನೋಡಬೇಕೆಂದು ಕಾಗದಗಳು ನಿಧಾನವಾಗುತ್ತವೆ. ಇಂಜಿನಿಯರುಗಳು ಟೂರು ಹೋಗಿರುವವರು ಹೆಡ್‌ಕ್ವಾರ್ಟರುಗಳಿಗೆ ಬರುವವರೆಗೂ ಎಸ್ಟಿಮೇಟಿನ ಅಥವಾ ಬೇರೆ ಯಾವ ಕೆಲಸಗಳೂ ಆಗುವಂತಿಲ್ಲ ಮತ್ತು ಇದಕ್ಕಾಗಿ ನಿಧಾನವಾಗಬೇಕಾಗುತ್ತದೆ. ಹೀಗೆ ಸಬ್ ಡಿವಿಜನ್ನಿನಿಂದ ಎಕ್ಸಿಕ್ಯೂಟೀವ್ ಎಂಜಿನೀಯರಿಗೆ ಎಕ್ಸಿಕ್ಯೂಟೀವ್ ಇಂಜಿನೀಯರು ಆಫೀಸಿನಿಂದ ಅಸಿಸ್ಟೆಂಟು ಎಂಜಿನೀಯರು ಆಫೀಸಿಗೆ ಹೀಗೆ ಒಬ್ಬರಿಂದ ಒಬ್ಬರಿಗೆ ಫೈಲುಗಳು ಹೋಗುವುದು ಆಗಿದೆಯೇ ಹೊರತು, ಫೈಲುಗಳಲ್ಲಿ ಯಾವ ಫೈನಾಲಟಿ ಕೂಡ ಇಲ್ಲ. ಇದರಿಂದ ಒಂದು ರೀತಿ ಕನ್‌ಫ್ಯೂಷನ್ನು ಆಗಿ ಎಷ್ಟೋ ಕೆಲಸಗಳು ಆಗುವುದೇ ಇಲ್ಲ. ಈಗ ಉದಾಹರಣೆಯಾಗಿ ಚಿಕ್ಕಹೊಳೆ ಯೋಜನೆಯನ್ನೇ ತೆಗೆದುಕೊಳ್ಳಿ. ಇದಕ್ಕಾಗಿ 22ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಇದಕ್ಕಾಗಿ ಕಳೆದ ವರ್ಷ ನಾಲ್ಕು ಲಕ್ಷರೂಪಾಯಿಗಳನ್ನು ಕೊಟ್ಟಿರಿ. ಇದಾದ ಒಂದು ವರ್ಷದಲ್ಲೆ ಒಂದು ಲಕ್ಷರೂಪಾಯಿಗಳನ್ನು ಕೊಟ್ಟಿರಿ. ಇಷ್ಟು ಲಕ್ಷರೂಪಾಯಿಗಳನ್ನು ಕೊಟ್ಟರೂ ಕೂಡ ಸುಮಾರು ಮೂವ್ವತ್ತುಸಾವಿರ ರೂಪಾಯಿಗಳಷ್ಟು ಪ್ರಾಜೆಕ್ಟು ಕೆಲಸ ಆಗಿದೆ. ಈ ಯೋಜನೆಯನ್ನು 1956ರಲ್ಲೇ ಮಂಜೂರು ಮಾಡಲಾಗಿತ್ತು. ಅಲ್ಲಿಂದಲೂ ಹಾಗೆಯೇ ನಡೆದುಕೊಂಡು ಬರುತ್ತಿದೆ. ಈ ಕೆಲಸದಲ್ಲಿ ಎಷ್ಟು ವೇಸ್ಟು ಆಗುತ್ತಿದೆ ಎನ್ನುವುದನ್ನು ನೀವೇನೋಡಿ. ಇದರ ಎಸ್ಟಾಬ್ಲಿಷ್‌ಮೆಂಟು ಮತ್ತು ಇತರ ಕೆಲಸಗಳಿಗೋಸ್ಕರ ಎಂದು ಖರ್ಚು ಆಗುತ್ತಲೇ ಇದೆ, ಆದರೆ ಕೆಲಸವೇನೂ ಆಗುತ್ತಿಲ್ಲ. ಈಚೆಗೆ ಈ ಯೋಜನೆಯನ್ನು "ಜನರಲ್ ಡಿಸ್ಟ್ರೆಸ್ಸುರಿಲೀಫು ವರ್ಕುಗಳು" ಎನ್ನುವುದರಲ್ಲಿ ತೆಗೆದುಕೊಂಡು ಏನೋ ಸ್ವಲ್ಪ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಇದರಲ್ಲಿ ಕೂಡ ಎಸ್ಟಿಮೇಟುಗಳನ್ನು ಮಾಡಿ ಟೆಂಡರುಗಳನ್ನು ಕರೆಯುವುದರಲ್ಲಿ ಮತ್ತು ಪ್ಲಾನುಗಳನ್ನು

ಅಪ್ರೂವ್ ಮಾಡಿಸುವುದರಲ್ಲಿ ಬಹಳ ನಿಧಾನವಾಗುತ್ತಿದೆ. ಒಂದು ಕಡೆ ಚೀಫ್ ಇಂಜಿನೀಯರು ಇವನ್ನೆಲ್ಲ ಸರಿಯಾಗಿ ನೋಡಲು ಅವಕಾಶವಾಗಿಲ್ಲ ಎಂದು ನಿಧಾನವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಇಲ್ಲಿ ಅನುಸರಿಸುತ್ತಿರುವ ನೀತಿ ಒಂದು ಮಂದಗಾಮಿಯಾದ ನೀತಿಯ ಹಾಗೆ ಕಾಣುತ್ತಿದೆ. ನಮ್ಮ ಅಧಿಕಾರಿಗಳು ಬಹಳ ದಕ್ಷರು. ಹಾಗಿದ್ದರೂ ಕೂಡ ಏಕೆ ಹೀಗೆ ಆಗುತ್ತಿದೆಯೋ ನನಗೆ ಸರಿಯಾಗಿ ಗೋಚರವಾಗುತ್ತಿಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ನಿಮ್ಮ ತಕರಾರುಗಳು ಇರುತ್ತವಲ್ಲ.

ಶ್ರೀ ಯು. ಎಂ. ಮಾದಪ್ಪ.—ನಮ್ಮದೇನೂ ತಕರಾರುಗಳಿಲ್ಲ ಸ್ವಾಮಿ. ಎಲ್ಲ ನಿಮ್ಮದೇ ಆಗಿದೆ. ಆದ್ದರಿಂದ ನಾನು ಹೇಳುವ ಸಲಹೆ ಏನೆಂದರೆ, ಈಗ ನಮ್ಮಲ್ಲಿರುವ ಸೂಪರಿಂಟೆಂಡಿಂಗು ಎಂಜಿನೀಯರು ಮತ್ತು ಅವರ ಕೈಕೆಳಗಿನ ಅಧಿಕಾರಿಗಳಿಗೆ ಸರಿಯಾದ ಇನ್‌ಸ್ಟ್ರಕ್ಷನ್ನನ್ನು ಕೊಡಬೇಕು. ಪ್ರತಿವಾರದಲ್ಲಿಯೂ ಎಷ್ಟು ಕೆಲಸಗಳಾಗುತ್ತಿವೆ ಎನ್ನುವುದನ್ನು ರೆವ್ಯೂಮಾಡಿ ಸರಕಾರಕ್ಕೆ ರಿಪೋರ್ಟು ಮಾಡಬೇಕು. ಇದಕ್ಕಾಗಿ ''ಕಂಟ್ರೋಲ್ ರೂಂ'' ಎಂದು ಒಂದನ್ನು ನಮ್ಮ ಮಂತ್ರಿಗಳ ಇಲಾಖೆಯಲ್ಲಿ ಇಟ್ಟುಕೊಳ್ಳಬೇಕು. ಇದರಿಂದ ನಾವು ದೇಶಕ್ಕಾಗಿ ತೆಗೆದುಕೊಂಡಿರತಕ್ಕ ಹಣ ಮತ್ತು ಅದಕ್ಕಾಗಿ ನಡೆಯಬೇಕಾಗಿರುವ ಕೆಲಸಗಳು ಸರಿಯಾಗಿ ನಡೆಯುತ್ತಿವೆಯೇ ಇಲ್ಲವೇ ಎನ್ನುವುದನ್ನೆಲ್ಲ ನೋಡಲು ಅನುಕೂಲವಾಗುತ್ತದೆ. ನಾವು ತೆಗೆದುಕೊಂಡಿರತಕ್ಕ ಸಾಲದ ಹಣಕ್ಕಾಗಿ ಪ್ರತಿವರ್ಷವೂ ಬಡ್ಡಿಯನ್ನು ಕೊಡಬೇಕು. ಹೀಗೆ ಐದುವರ್ಷಗಳಿಗಾಗಿ ತೆಗೆದ ಕೊಂಡ ಕೆಲಸಗಳು ಹತ್ತಾರು ವರ್ಷಗಳು ನಿಧಾನವಾಗುತ್ತ ಹೋದರೆ ಇದರಿಂದ ದೇಶಕ್ಕೆ ಖರ್ಚು ಎಷ್ಟು ಜಾಸ್ತಿಯಾಗುತ್ತದೆ ಮತ್ತು ಸಾಲ ಎಷ್ಟು ಹೆಚ್ಚಾಗುತ್ತದೆ ಎನ್ನುವುದನ್ನೆಲ್ಲ ಯೋಚನೆಮಾಡಬೇಕು. ಇವತ್ತಿನ ದಿವಸ ಅಧಿಕಾರಿಗಳ ಕೈಗೆ ರಾಜ್ಯ ಭಾರವನ್ನು ಬಿಟ್ಟುಕೊಟ್ಟಿದ್ದೀರಿ. ಆದರೆ ಈ ಅಧಿಕಾರಿಗಳ ಕೈಗೆ ರಾಜ್ಯವನ್ನು ಕೊಡದೆ ಅವರ ಕೆಲಸಗಳನ್ನು ಸಮರ್ಪಕವಾಗಿ ಮಾಡುವ ಶಕ್ತಿಯನ್ನು ನಿಮ್ಮಲ್ಲಿ ಇಟ್ಟುಕೊಂಡು ಅವರನ್ನು ಕಂಟ್ರೋಲುಮಾಡಿ ಕೆಲಸಮಾಡಬೇಕು. ಆದರೆ ಈಗ ಕಂಟ್ರೋಲು ಮಾಡುವ ಶಕ್ತಿಯನ್ನೂ ಕಳೆದುಕೊಂಡಿದ್ದೀರೋ ಏನೋ ಎನ್ನುವಂತಿದೆ.

ಸ್ಪೆಷಲ್ ಮೈನರು ಇರಿಗೇಷನ್ನಿಗಾಗಿ ಎಂದು ಕೇಂದ್ರ ಸರಕಾರದವರು ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ಸಬ್‌ವೆನ್‌ಷನ್ ರೂಪವಾಗಿ ಕೊಟ್ಟಿದ್ದಾರೆ. ನಮ್ಮ ಸರಕಾರದವರು ಐವತ್ತು ಲಕ್ಷ ರೂಪಾಯಿಗಳನ್ನು ಒಂದು ಕಡೆ, ಇನ್ನೊಂದು ಕಡೆ ಸುಮಾರು ಇಪ್ಪತ್ತೈದುಲಕ್ಷ ರೂಪಾಯಿಗಳನ್ನು Construction of New Minor Tanks and other things, ಗೋಸ್ಕರ ಎಂದು ಕೊಟ್ಟಿದ್ದಾರೆ. For Special Irrigation, special interest is needed and special attention is also needed. ನಾವು ಹೋದವರ್ಷ ಕೆಲವು ಕೆಲಸಗಳಿಗಾಗಿ ಕೊಟ್ಟಂತಹ ಹಣ ಇನ್ನೂ ಖರ್ಚಾಗುವುದಕ್ಕೆ ಅವಕಾಶವಿಲ್ಲ. ನಮ್ಮ ನಂಜನಗೂಡು ಕಡೆ ಇರುವ ಒಂದು ಸಬ್ ಡಿವಿಜನ್ನಿನಲ್ಲಿ ಅಸಿಸ್ಟೆಂಟು ಇಂಜನೀಯರಿಗೂ ಮತ್ತು ಎಕ್ಸಿಕ್ಯೂಟೀವ್ ಇಂಜನೀಯರಿಗೂ ಒಂದು ರೀತಿಯಾದ ಅಸಹಕಾರವಿರುವುದರಿಂದ ಅಲ್ಲಿ ಕೆಲಸಗಳು ನಿಧಾನವಾಗುತ್ತಿವೆ. ಏಕೆಂದರೆ, ಈ ಅಸಿಸ್ಟೆಂಟು ಇಂಜನೀಯರಿಗೆ ಬರತಕ್ಕ ಮಾಮೂಲುಗಳು ಕಡಮೆಯಾಯಿತು. ಏಕೆಂದರೆ ಹಿಂದೆ ಎಸ್ಟಿಮೇಟು ಮಾಡಿ ಟೆಂಡರುಗಳನ್ನು ಕರೆದು ಕೆಲಸಗಳನ್ನು ಕೊಡುತ್ತಿದ್ದರು. ಈಗ ಪೀಸ್‌ವರ್ಕುಗಳಾಗಿ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಈ ರೀತಿ ಕೆಲಸಗಳನ್ನು ಪೀಸುವರ್ಕುಗಳಾಗಿ ಮಾಡಿಸುವುದು ನಿಜವಾಗಿಯೂ ಸ್ವಾಗತಾರ್ಹವಾದ ವಿಷಯ. ಏಕೆಂದರೆ, ಈ ಪೀಸುವರ್ಕುಗಳಲ್ಲಿ ಮಣ್ಣಿನ ಮತ್ತಿತರ ಕೆಲಸಗಳನ್ನು ಮಾಡುವ ಕೂಲಿಗಳಿಗೆ ಕೆಲಸ ಸಿಕ್ಕುತ್ತದೆ; ಮತ್ತು ಸಣ್ಣ ಪುಟ್ಟ ಕಂಟ್ರಾಕ್ಟರುಗಳಿಗೂ ಕೆಲಸ ಸಿಗುತ್ತದೆ ಮತ್ತು ಇದರಿಂದ ಸರಕಾರದ ಕೆಲಸ ಬೇಗನೆ ಆಗಲು ಅನುಕೂಲವಾಗುತ್ತದೆ. ಹೀಗೆ ಸರಕಾರದಿಂದ ಕೊಡುವ ಹಣ ಯಾವನೋ ಒಬ್ಬ ಐಶ್ವರ್ಯವಂತನಿಗೇ ಸಿಗುವ ಬದಲು ಎಲ್ಲ ರೀತಿಯ ಜನಗಳಿಗೂ ಸಮಾನವಾಗಿ ಹಂಚಿಕೆಯಾಗಲು ಅವಕಾಶವಾಗುತ್ತದೆ. ಎಸ್ಟಿಮೇಟುಗಳ ಮೂಲಕ ಮಾಡಿಸುವುದರಿಂದ ಕಂಟ್ರಾಕ್ಟರುಗಳಿಗೆ ಹೆಚ್ಚಿನ ಉಪಯೋಗ ದೊರೆಯುತ್ತಿತ್ತು. ಹಿಂದೆ ಈ ರೀತಿ ಟೆಂಡರನ್ನು ಕರೆಯುವುದನ್ನು ತಪ್ಪಿಸಬೇಕೆಂದು ನಾವು ಹೇಳಿದ್ದನ್ನು ಪರಿಶೀಲಿಸಿ ಈ ಸಾರಿ ಚೀಫ್ ಇಂಜನೀಯರವರು ಪೀಸ್‌ವರ್ಕಿನ ಮೇಲೆ ಕೆಲಸಗಳನ್ನು ಮಾಡಲು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಕೆಲವು ಕಡೆ ಚೆನ್ನಾಗಿ ಕೆಲಸವನ್ನೂ ಮಾಡಿದ್ದಾರೆ. ಹಿಂದೆ ಕಂಟ್ರಾಕ್ಟರುಗಳಿಂದ ಆದ ಕೆಲಸಕ್ಕೆ ಎರಡರಷ್ಟು ಕೆಲಸ ಈಗ ಆಗಿದೆ. ಆದ್ದರಿಂದ ಸರಕಾರದವರು ಇನ್ನು ಮುಂದೆ ಎಸ್ಟಿಮೇಟುಗಳನ್ನುಮಾಡಿ ಟೆಂಡರ್ ಕರೆದು ಕೆಲಸ ಮಾಡಿಸುವುದಕ್ಕೆ ಬದಲಾಗಿ ಈ ರೀತಿ ಪೀಸುವರ್ಕು ಕೆಲಸಗಳನ್ನು ಮಾಡಿಸುವ ಒಂದು ನೀತಿಯನ್ನು ಪೂರ್ಣವಾಗಿ ಜಾರಿಗೆ ತರಬೇಕೆಂದು ನಾನು ಸಲಹೆ ಮಾಡಲು ಇಷ್ಟಪಡುತ್ತೇನೆ.

ಇನ್ನು ರೋಡುಗಳ ವಿಷಯ. ಈ ರೋಡುಗಳ ವಿಚಾರದಲ್ಲಿ ಹಳೆಯ ಮೈಸೂರಿನ ಒಂದು ವೈಶಿಷ್ಟ್ಯವನ್ನು ತಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ಹಿಂದೆ ಎಂದರೆ, ಸುಮಾರು 1952ನೇ ಇಸವಿಗೂ ಹಿಂದೆ, ಎತ್ತಿನ ಗಾಡಿಗಳೂ ಹೋಗಲು ಅನುಕೂಲವಿಲ್ಲದಂತಹ ರಸ್ತೆಗಳು ಇದ್ದವು ಮತ್ತು ಅದರಿಂದ ಜನಗಳಿಗೆ ಓಡಾಡಲು ಕೂಡ ತೊಂದರೆಗಳಾಗಿತ್ತು. ಈಚೆಗೆ ಎಷ್ಟೋ ರಸ್ತೆಗಳನ್ನು ಓಡಾಡಲು ಅನುಕೂಲವಾಗುವಂತೆ ಮಾಡಿಸಿಕೊಂಡು ಬಂದಿದ್ದೀರಿ. ಆದರೆ ಇತ್ತೀಚೆಗೆ ಈ ರೋಡುಗಳ ಸ್ಥಿತಿಯನ್ನು ನೋಡುವುದಕ್ಕೆ ನನಗೇಕೋ ಭಯವಾಗುತ್ತಿದೆ. ಎಲ್ಲಿ ಹಿಂದಿನ 1952ರ ಸ್ಥಿತಿಗೆ ಹೋಗುತ್ತದೋ ಎನ್ನುವ ಅನುಮಾನಕ್ಕೆ ಕಾರಣವಾಗಿದೆ. ಹೀಗೆ ಹಿಂದಿನ ಗತವೈಭವಕ್ಕೆ ಹೋಗುವುದು ಬೇಡ. ಎಷ್ಟೋ ಕಡೆ ರೋಡು ಮತ್ತು ಕಮ್ಯೂನಿಕೇಷನ್ನಿಗಾಗಿ ತಾವು ಒಂದೊಂದು ಡಿವಿಜನ್ನನ್ನೂ ಮಾಡುತ್ತಿದ್ದೀರಿ. ಈ ರೀತಿ ಪ್ರತ್ಯೇಕವಾಗಿ ಡಿವಿಜನ್ನುಗಳನ್ನು ಮಾಡುವುದು ಬೇಡ. ಈಗ ಒಂದೊಂದು ಡಿವಿಜನ್ನಿಗೂ ನೀವು ಕೊಡುವ ಅಲಾಟ್‌ಮೆಂಟುಗಳನ್ನು ಒಂದೇ ಸಮನಾಗಿ ಹಂಚುತ್ತಿಲ್ಲ. ಹೀಗೆ ವ್ಯತ್ಯಾಸಗಳನ್ನು ಮಾಡದೆ ಪರಿಸ್ಥಿತಿಯನ್ನು ಸರಿಯಾಗಿ ಯೋಚನೆಮಾಡಿ ಕೊಡುವುದು ಉತ್ತಮ. ಎಲ್ಲರೂ ದೇಶ ಸರ್ವತೋಮುಖವಾಗಿ ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಕೆಲಸಮಾಡಬೇಕು, ಇಲ್ಲದಿದ್ದರೆ ದೇಶದಲ್ಲಿ ಒಂದು ರೀತಿಯಾದ ಅಶಾಂತಿ ಮೂಡುವುದಕ್ಕೆ ಅವಕಾಶವಾಗುತ್ತದೆ. ಆ ರೀತಿಯಾಗಲು ಅವಕಾಶ ಕೊಡಬೇಡಿ ಎಂದು ನಾನು ಹೇಳಲು ಇಷ್ಟಪಡುತ್ತೇನೆ. ಈ ರೋಡುಗಳನ್ನು ಹೆಚ್ಚಾಗಿ ಟಾರು ರೋಡುಗಳಾಗಿ ''ಎ''ಕ್ಲಾಸು ರೋಡುಗಳಂತೆ ಮಾಡ

(ಶ್ರೀ ಯು. ಎಂ. ಮಾದಪ್ಪ)

ಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ವರ್ಷೇ ವರ್ಷೇ ರಿಪೇರಿಗಾಗಿ ಹೆಚ್ಚಿನ ಖರ್ಚು ಆಗುವುದಿಲ್ಲ. ಹತ್ತಾರು ವರ್ಷಗಳ ಕಾಲ ಮೇಂಟೆನನ್ಸು ಕಡಮೆಯಾಗುತ್ತದೆ ಅಲ್ಲದೆ ಮೇಂಟೆನೆನ್ಸಿಗಾಗಿ ಗ್ರಾಂಟುಗಳನ್ನು ಕೊಡುವುದನ್ನು ಕಡಮೆ ಮಾಡಬಹುದು. ಹೀಗೆ ಮಾಡುವುದರಿಂದ ದೇಶದಲ್ಲಿ ಜನಗಳಿಗೆ ಅನುಕೂಲವಾಗುತ್ತದೆ. ಈ ರೋಡುಗಳಿಗಾಗಿ ಒಂದು "ರೋಡು ಫಂಡು" ಎಂದು ಸ್ಥಾಪನೆಮಾಡಬೇಕು. ಇದಕ್ಕೆ ಅವಕಾಶ ಇದೆ. ಈ ಫಂಡನ್ನು ಏತಕ್ಕೆ ಸ್ಥಾಪನೆ ಮಾಡಿಲ್ಲವೋ ಗೊತ್ತಿಲ್ಲ. ಇದು ಬರೀ ಲೆಕ್ಕದಲ್ಲಿದೆ. ಈಗ ರೋಡು ಸೆಸ್ಸು ಎಂದು-ವಸೂಲುಮಾಡುವ ಹಣವನ್ನು ಒಂದು ಫಂಡುಮಾಡಿ ಏತಕ್ಕೆ ಈ ರೋಡುಗಳಿಗೇ ಉಪಯೋಗಿಸಬಾರದು! ಈ ರೀತಿ ಒಂದು ಖಾಯಂ ಆದ ರೋಡು ಫಂಡು ಇರಬೇಕು. ಹೀಗೆ ಮೇಂಟೆನೆಸ್ಸು ಫಂಡು ಪ್ರತ್ಯೇಕವಾಗಿದೆ ಎಂಬ ಖಾತ್ರಿ ಇಲ್ಲದಿದ್ದರೆ ಈ ರೋಡಿನ ಕೆಲಸಗಳು ಹೇಗೆ ನಡೆಯುತ್ತವೆ? ಯಾವ ಒಂದು ಪ್ಲಾನೂ, ಕ್ರಮವೂ ಇಲ್ಲದೆ ನಡೆಯುತ್ತಿದ್ದರೆ ಇದನ್ನು ಹೇಗೆ ಸರಿಪಡಿಸಬೇಕೋ ನನಗೆ ತಿಳಿಯುವುದಿಲ್ಲ, ದೇವರಲ್ಲಿ ಪ್ರಾರ್ಥನೆಮಾಡಬೇಕು, ಅಷ್ಟೇ.

ಇನ್ನು ಬಿಲ್ಡಿಂಗುಗಳ ವಿಚಾರ. ಬಿಲ್ಡಿಂಗುಗಳನ್ನೇನೋ ಕಟ್ಟಿಸುತ್ತಿದ್ದಾರೆ. ಆದರೆ ಆದಷ್ಟು ಕಡಮೆ ವೆಚ್ಚದಲ್ಲಿ ಕಟ್ಟಿಸಬೇಕೆಂಬ ಒಂದು ನೀತಿಯನ್ನು ಹಾಕಿಕೊಂಡು ಕಟ್ಟಡಗಳನ್ನು ಕಟ್ಟಿಸಬೇಕು. ಈಗೇನೋ ದೊಡ್ಡ ದೊಡ್ಡ ಬಿಲ್ಡಿಂಗುಗಳನ್ನು ಮತ್ತು ಬಹಳ ಬೆಲೆಬಾಳುವ ಬಿಲ್ಡಿಂಗುಗಳನ್ನು ಕಟ್ಟಿಸುತ್ತಿದ್ದಾರೆ. ಇದರ ಎಸ್ಟಿಮೇಟು ಹೇಗಿದೆ ಎನ್ನುವುದನ್ನು ಸರಿಯಾಗಿ ಆ ಇಲಾಖೆಯ ಅಧಿಕಾರಿಗಳು ಸ್ಕ್ರೂಟಿನಿ ಮಾಡುತ್ತಿಲ್ಲ. ದೇಶಾಭಿಮಾನದಿಂದ ನಮ್ಮ ಸರಕಾರದಲ್ಲಿರುವ ಅಧಿಕಾರಿಗಳು ಕೆಲಸಮಾಡಬೇಕು. ನೀವು ಗ್ರೋಮೋರ್ ಫುಡ್ ಎನ್ನುವ ಸ್ಲೋಗನ್ನನ್ನು ಮಾತ್ರ ಹೇಳುತ್ತಿದ್ದೀರಿ, ಆದರೆ ಕಾರ್ಯತಃ ಏನೂ ಮಾಡುತ್ತಿಲ್ಲ. ಮನಸ್ಸಿಗೆ ಬಂದ ರೀತಿಯಲ್ಲಿ ಕೆಲಸಗಳಾಗುತ್ತಿವೆ. ಹಾಗೆ ಮಾಡದೆ ಹೆಚ್ಚಿಗೆ ಬೆಳೆಯಲು ಸಾಕಷ್ಟು ಕೆಲಸಗಳನ್ನು ವರ್ಷ ವರ್ಷೇ ಹೆಚ್ಚಿಗೆ ಮಾಡುತ್ತಾ ಹೋಗಬೇಕೆಂದು ಒತ್ತಾಯ ಮಾಡುತ್ತೇನೆ.

1-30 P.M.

ಸರ್ವೆ ಶಾಖೆ ಸರಿಯಾಗಿ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕಾಗಿದೆ. ಪ್ರತಿಯೊಂದು ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸಿನಲ್ಲಿಯೂ ಸರ್ವೆ ಶಾಖೆ ಇದೆ. ಅದು ನಿದ್ದೆ ಮಾಡುತ್ತಿದೆ. ನಿದ್ದೆ ಮಾಡುವವರನ್ನು ಚಾವಟಿಯಿಂದ ಎಚ್ಚರಿಸಬೇಕು. ದೇವರ ಅನುಗ್ರಹದಿಂದ ನಮಗೆ ಬಂದಿರತಕ್ಕ ಸಣ್ಣ ಸಣ್ಣ ಕಾಲುವೆಗಳು, ಸಣ್ಣ ಸಣ್ಣ ತೊರೆಗಳು ಇವುಗಳಿಂದ ಅನೇಕ ಅನುಕೂಲಗಳನ್ನು ಪಡೆಯುವುದಕ್ಕೆ ಮನುಷ್ಯನಿಗೆ ಅವಕಾಶವಿದೆ. ಸರ್ವೆ ಇಲಾಖೆಯವರು, ಅರ್ಜಿ ಬರಲಿ, ಬಾರದೆ ಇರಲಿ ಎಲ್ಲಕಡೆಯೂ, ದೇಶಾದ್ಯಂತ ಹೋಗಿ ಸರ್ವೆ ಮಾಡಬೇಕು. ಇಂಥಿಂಥ ಕಡೆ pick ups ಹಾಕಬೇಕು, ಕೆರೆಗಳನ್ನು ಕಟ್ಟಬೇಕು, ಅಣೆಕಟ್ಟುಗಳನ್ನು ಕಟ್ಟಬೇಕು, ಎನ್ನುವುದನ್ನು ಸರ್ಕಾರಕ್ಕೆ ತಾವಾಗಿಯೇ ತಿಳಿಸುತ್ತ ಇರಬೇಕು. ತಾನೇತಾನಾಗಿ ಕೆಲಸ ಮಾಡತಕ್ಕ, independence ಇರತಕ್ಕ ದೇಶಾಭಿಮಾನವಿರತಕ್ಕ ಇಲಾಖೆಯನ್ನು ತಾವು ಎಚ್ಚರಿಸಬೇಕು. ಸೂಪರಿಂಟೆಂಡಿಂಗ್ ಇಂಜಿನಿಯರ್ ಬೇಕಾದರೆ ಇವರನ್ನು ಕಳುಹಿಸಬಹುದು, ಇಲ್ಲದೆ ಇದ್ದರೆ ಇಲ್ಲ. ಇವರು ಯಾವ ಕೆಲಸಕ್ಕಾಗಿ ನೇಮಕವಾಗಿದ್ದಾರೆಯೋ ಅದೇ ಕೆಲಸಕ್ಕೆ ಅವರನ್ನು ಮೀಸಲಾಗಿಡಬೇಕು, ಆಫೀಸಿನಲ್ಲಿ ನಿತ್ಯಚರಿ ಕೆಲಸಗಳಿಗೆ ಅವರನ್ನು ಉಪಯೋಗಿಸಿಕೊಳ್ಳಬಾರದೆಂದು ಒತ್ತಾಯಪಡಿಸುತ್ತೇನೆ.

ಮಾನ್ಯ ಮುಖ್ಯ ಮಂತ್ರಿಗಳು ಚಾಮರಾಜನಗರ ತಾಲ್ಲೂಕಿಗೆ ಪ್ರವಾಸ ಬಂದಿದ್ದಾಗ ಯಡಿಯೂರು ಹತ್ತಿರ ಹರಿಯುವ ಒಂದು ಹಳ್ಳಕ್ಕೆ ಸೇತುವೆ ಕಟ್ಟಿಸಬೇಕೆಂದು ರೈತರು ಮುಖ್ಯ ಮಂತ್ರಿಗಳಿಗೆ ಅರ್ಜಿ ಕೊಟ್ಟರು. ಆ ಕಾರ್ಯವನ್ನು ಕೈಗೊಳ್ಳಲು ಏರ್ಪಾಡು ಮಾಡುವುದಾಗಿ ಹೇಳಿದರು. ರೈತರು ಕೊಟ್ಟ ಅರ್ಜಿ ಎಲ್ಲಿ ಹೋಯಿತೋ ಮಂತ್ರಿಗಳು ಹೇಳಿದಮಾತು ಎಲ್ಲಿ ಹೋಯಿತೋ ಪತ್ತೆ ಇಲ್ಲ. ಈಗ ಏನಾಗಿದೆ ಎಂದರೆ, ಮಂತ್ರಿಗಳು ಪ್ರವಾಸ ಮಾಡುವಾಗ ಎಷ್ಟೋ ಆಶ್ವಾಸನೆಗಳನ್ನು ಕೊಡುತ್ತಾರೆ. ಆದರೆ ಅವನ್ನು ಡೈರಿಯಲ್ಲಿ ಗುರ್ತುಹಾಕಿಕೊಂಡು ಅವರು ಪ್ರವಾಸದಿಂದ ವಾಪಸು ಬಂದ ಮೇಲೆ ತಾವು ಪ್ರವಾಸ ಕಾಲದಲ್ಲಿ ಕೊಟ್ಟಿದ್ದ ಆಶ್ವಾಸನೆಗಳ ಬಗ್ಗೆ ಏನೇನು ಕೆಲಸವಾಗಿದೆ ಎಂಬುದರ ಬಗ್ಗೆ progress report ತರಿಸತಕ್ಕ ಪದ್ಧತಿ ಇಲ್ಲದೆ, ಇರುವುದರಿಂದ ಇಷ್ಟು ಕಷ್ಟವಾಗಿದೆ. ಅಧಿಕಾರಿಗಳ ಹತ್ತಿರ ಕೇಳಲು ಹೋದರೆ ಏನು ಹೇಳುತ್ತಾರೆಂದರೆ, ಮಂತ್ರಿಗಳು ಬಂದಾಗ ಒಂದು ಅರ್ಜಿಯನ್ನು ಕೊಟ್ಟರೆ ಅದು ಮತ್ತೆ ನಮಗೇ ಬರುತ್ತದೆ. ನಾವು ಅದನ್ನು ಇಲ್ಲಿ ಇಟ್ಟುಬಿಟ್ಟರೆ ಮಾತೇಇಲ್ಲ, ಯಾರು ಕೇಳುವವರು ನಮ್ಮನ್ನು ಎಂದು ಹೇಳುವ ಪರಿಸ್ಥಿತಿ ಬಂದಿದೆ!

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನೀವೇ ಹೇಳಿಕೊಟ್ಟಿದ್ದೀರಿ.

ಶ್ರೀ ಯು. ಎಂ. ಮಾದಪ್ಪ.—ತಾವೇ ಹೇಳುತ್ತೀರಿ, ನಿಮ್ಮಿಂದಲೇ ಎಲ್ಲ ಆಗಿದೆ ಎಂದು ಭಾವಿಸುತ್ತೇನೆ. ಪ್ರತಿವಾರವೂ progress report ಕಳುಹಿಸಬೇಕು ಎಂದು ಸೂಚನೆಕೊಡಬೇಕು. ಮಂತ್ರಿಗಳಾಗಿ ನೀವು ಕೊಟ್ಟಿರತಕ್ಕ ಸಲಹೆಯನ್ನೇ ಅವರು ಕಾರ್ಯಗತಮಾಡದೆ ಇದ್ದರೆ, ಸಾಮಾನ್ಯ ರೈತ, ಕಂಬಳಿಯನ್ನು ಹೊದ್ದಿರತಕ್ಕ ರೈತ ಏನಾದರೂ ಅರ್ಜಿ ಕೊಟ್ಟರೆ ಅದರ ಗತಿ ಏನಾದೀತು ಎಂದು ಯೋಚನೆ ಮಾಡಬೇಕು.

ಒಂದು ವರ್ಷದ ಹಿಂದೆ ಮಂತ್ರಿಗಳಿಗೆ ಒಂದು ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಅರ್ಜಿಯನ್ನು ಕೊಟ್ಟಿದ್ದರಮೇಲೆ ಅದರ ಸರ್ವೆ ಕೆಲಸ ನಡೆಯಬೇಕಾಗಿತ್ತು. ಆದರೆ ಸರ್ವೆ ಇಲಾಖೆಯವರು ಸರ್ವೆ ಮಾಡಲಿಲ್ಲ. ಸೂಪರಿಂಟೆಂಡಿಂಗ್ ಇಂಜಿನಿಯರು, ತಮ್ಮ ಕೈಕೆಳಗೆ ಸರ್ವೆ ವಿಭಾಗವಿದ್ದರೂ ಅರ್ಜಿಯನ್ನು ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕಳುಹಿಸಿದ್ದಾರೆ. ಅವರ ಕೈಕೆಳಗೆ ಸರ್ವೆ ಇಲಾಖೆ ಇಲ್ಲದೆ ಇರುವುದರಿಂದ ಹೇಗೆತಾನೇ ಅವರು ಸರ್ವೆ ಕೆಲಸಮಾಡಿಸಲು ಸಾಧ್ಯವೆಂಬುದನ್ನು ಯೋಚಿಸಬೇಕು. ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಅರ್ಜಿಯನ್ನು ಕಳುಹಿಸಿದ್ದೇವೆ, ಅವರು ಇನ್ನೂ ರಿಪೋರ್ಟ್ ಕಳುಹಿಸಿಲ್ಲವೆಂದು ಸೂಪರಿಂಟೆಂಡಿಂಗ್ ಇಂಜಿನಿಯರ್ ಬರೆದಿದ್ದಾರೆ. ಇದು ಏನು ಬುದ್ಧಿವಂತಿಕೆಯ ಮಾತು? ಸರ್ವೆ ಇಲಾಖೆ ಇರುವುದು ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸಿನಲ್ಲಿ. ಹೀಗಿರುವಾಗ ಅವರು ಎಕ್ಸಿಕ್ಯೂಟಿವ್ ಇಂಜಿನಿಯರಿಗೆ

ಅರ್ಜಿಯನ್ನು ಕಳುಹಿಸಿದುದರ ಅರ್ಥವೇ ತಿಳಿಯುವುದಿಲ್ಲ. ಮಾನ್ಯ ಮಂತ್ರಿಗಳು ಇದನ್ನೆಲ್ಲ ಕೂಲಂಕಷವಾಗಿ ಯೋಚನೆಮಾಡಿ, ಸರ್ವೆ ಮಾಡಿಸಿ ಕೆಲಸ ಕಾರ್ಯಗತವಾಗುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ ಈ ಇಲಾಖೆಯಲ್ಲಿ ಅತೃಪ್ತಿ ಮತ್ತು ಅಸಹಕಾರವಿಲ್ಲದೆ ಇರಬೇಕಾದರೆ equal pay for equal work ಎನ್ನುವುದು ಇರಬೇಕು. ಅದನ್ನು ಪೂರ್ಣವಾಗಿ ಕಾರ್ಯಗತಮಾಡಬೇಕು. ಮೊದಲು ಇಂಡಿಯಾ ಸರ್ಕಾರದಲ್ಲಿ ಒಂದು ರೀತಿಯ ಸ್ಕೇಲೂ, ಮೈಸೂರು ಸಂಸ್ಥಾನದಲ್ಲಿ ಒಂದು ರೀತಿಯ ಸ್ಕೇಲೂ ಇತ್ತು. ಆಗಲೇ ಸ್ವಲ್ಪಮಟ್ಟಿಗೆ ಅಸಹಕಾರವಿತ್ತು. ಈಗ ಒಂದೇ ಆಫೀಸಿನಲ್ಲಿ, ಒಂದೇ ಕೊಠಡಿಯಲ್ಲಿ ಕೆಲಸ ಮಾಡುವವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ scales of pay ಇದೆ. ಇದರಿಂದ ಅತೃಪ್ತಿ ಮತ್ತು ಅಸಹಕಾರ ಹೆಚ್ಚಿದೆ. ಆದುದರಿಂದ ಸರ್ಕಾರಿ ಅಧಿಕಾರಿಗಳ ಸಂಬಳ ಸಾರಿಗೆಗಳಲ್ಲಿರತಕ್ಕ ವ್ಯತ್ಯಾಸವು ಶೀಘ್ರವಾಗಿ ಕೊನೆಗಾಣಬೇಕು, ಇದು ಜಾಗ್ರತೆಯಾಗಿ ಕೈಗೂಡುವುದಕ್ಕೆ ಏರ್ಪಾಡು ಮಾಡಬೇಕು. ಉದಾಹರಣೆಗೆ ಹಳೇ ಮೈಸೂರು ದೇಶದಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿರುವವರು ಚೀಫ್ ಇಂಜಿನಿಯರ್ ಆಗಿ ಬಡ್ತಿಹೊಂದಬೇಕಾದರೆ ಅವರು 800 ರೂಪಾಯಿ ಸಂಬಳದಲ್ಲ start ಆಗುತ್ತಾರೆ. ಅದೇ ಬೊಂಬಾಯಿ ಭಾಗದಿಂದ ಬಂದಿರುವ ಸೂಪರಿಂಟೆಂಡಿಂಗ್ ಇಂಜಿನಿಯರ್ ಚೀಫ್ ಇಂಜಿನಿಯರ್ ಆಗಬೇಕಾಗಿದ್ದರೆ start ಆಗುವುದು 1,300 ರಿಂದ ಮತ್ತು 1,600 ರೂಪಾಯಿವರೆಗೂ ಹೋಗುತ್ತಾರೆ. ಒಂದೇ ರೀತಿಯ ಕೆಲಸ, ಒಂದೇ ರೀತಿಯ ದಕ್ಷತೆ ಇದ್ದು, ಸರ್ವಿಸ್ ಜಾಸ್ತಿ ಆಗಿದ್ದು ಕಡಮೆ ಸಂಬಳದಲ್ಲಿ ಪ್ರಾರಂಭವಾದರೆ ಯಾರಿಗೆತಾನೆ ತೃಪ್ತಿ ಇರುತ್ತದೆ, ಯಾರಿಗೆತಾನೇ ಅಸಮಾಧಾನ ಭರುವುದಿಲ್ಲ, ಹೇಳಿ. ಎಕ್ಸಿಕ್ಯೂಟಿವ್ ಇಂಜಿನಿಯರರದೂ ಅದೇ ಪ್ರಶ್ನೆ. ಬೊಂಬಾಯಿ ಭಾಗದವರ ಸ್ಕೇಲಿಗೂ, ಹಳೇ ಮೈಸೂರಿನವರ ಸ್ಕೇಲಿಗೂ ಹೋಲಿಸಿ ನೋಡಿದರೆ ಅಜಗಜಾಂತರವಿದೆ. ಇದನ್ನೆಲ್ಲ ಕೊನೆಗಾಣಿಸಲೇಬೇಕು ಎಂದು ಒತ್ತಾಯಪಡಿಸುತ್ತೇನೆ.

Sri S. D. KOTHAVALE (Chikodi).—What is the remedy suggested for equalising it? It requires higher taxation. Are you ready to pay higher taxes?

ಶ್ರೀ ಯು. ಎಂ. ಮಾದಪ್ಪ.—ಎರಡಕ್ಕೂ ಇರುವ ಅಂತರವನ್ನು ಕಡಮೆಮಾಡಬೇಕು. ಸರ್ಕಾರ ನಿಮ್ಮ ಕೈಯಲ್ಲಿದೆ. ಆಡಳಿತದಲ್ಲಿ ನೀವೇ ಇದ್ದುಕೊಂಡು ಹೇಗೆ ಮಾಡುವುದು ಎಂದು ನಿಮ್ಮ ಅಸಹಾಯಕತೆಯನ್ನು ತೋರಿಸಿದರೆ ನಾವು ಏನು ಹೇಳುವುದು? ನಮಗೆ ಅಧಿಕಾರವನ್ನು ಬಿಟ್ಟುಕೊಡಿ, ನಾವು ಮಾಡುತ್ತೇವೆ. ಇಷ್ಟೊಂದು huge machinery ಇಟ್ಟುಕೊಂಡು, ಹೇಗೆಮಾಡುವುದು, ಯಾವರೀತಿ ಸರ್ಕಾರಿ ಅಧಿಕಾರಿಗಳ ಸಂಬಳ ಸಾರಿಗೆಗಳಲ್ಲಿರುವ ಅಂತರವನ್ನು ಕಡಮೆಮಾಡಬೇಕು ಎಂದರೆ ನಾವು ಏನು ಹೇಳುವುದಕ್ಕಾಗುತ್ತದೆ? ನಿಮ್ಮ ಕೈಯಲ್ಲಿ ಆಗದೆ ಇದ್ದರೆ ನಮಗೆ ಪೂರ್ಣ ಅವಕಾಶವನ್ನು ಕೊಟ್ಟರೆ ಮಾಡಿತೋರಿಸುತ್ತೇವೆ.

ಒಬ್ಬ ಸದಸ್ಯರು.—ಕೊಡಿ ಎಂದು ಹೇಳುತ್ತಾರೆ. ಆಧರೆ ತೆಗೆದುಕೊಳ್ಳುವುದಕ್ಕೆ ಮಾತ್ರ ಸಾಧ್ಯವಿಲ್ಲ

ಶ್ರೀ ಯು. ಎಂ. ಮಾದಪ್ಪ.—ಅದು ಮುಂದೆ ಗೊತ್ತಾಗುತ್ತದೆ. ಹೀಗೆಯೇ ಹೊರಟರೆ ನಿಮ್ಮ ರಾಜ್ಯಭಾರ ಎಲ್ಲಿಯವರೆಗೆ ಮುಂದುವರಿಯುತ್ತದೆಂದು ತಿಳಿದುಕೊಳ್ಳಿ. ನಾನು ಅದನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ.

*ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).—ಅಧ್ಯಕ್ಷರೇ, ಈ ದಿನ ನಮ್ಮ ಮುಂದೆ ಇರುವ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನು ಸಮರ್ಥಿಸುತ್ತ ಈ ಇಲಾಖೆಗೆ ಕೊಡುವ ಹಣ ಸರಿಯಾಗಿ ಖರ್ಚಾಗುತ್ತದೆಯೇ ಇಲ್ಲವೇ ಎನ್ನುವುದಕ್ಕೆ ನಾನು ಒಂದೆರಡು ಸೂಚನೆಗಳನ್ನು ಕೊಡಬೇಕಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯು ಬಹಳ ನಿಧಾನವಾಗಿ ಕೆಲಸ ಮಾಡುತ್ತದೆಂದು ನನ್ನ ಭಾವನೆ. ಈ ಇಲಾಖೆಯಲ್ಲಿ ಒಂದು ಎಸ್ಟಿಮೇಟ್ ಆಗಬೇಕಾದರೆ ಒಂದುವರ್ಷ, ಎರಡುವರ್ಷ, ಮೂರುವರ್ಷ ಆಗುತ್ತದೆ. ಸಬ್‌ಡಿವಿಷನ್‌ಗಳು ಕೆಲವು ದೊಡ್ಡವಿವೆ. ಈ ಇಲಾಖೆಯನ್ನು ಪುನರ್‌ವ್ಯವಸ್ಥೆ ಮಾಡಬೇಕು

ಸಿರಗುಪ್ಪ ಹತ್ತಿರ ತುಂಗಭದ್ರ ನದಿಗೆ ಸೇತುವೆ ಕಟ್ಟುವುದಕ್ಕೆ ಮಂಜೂರುಮಾಡಿದ್ದಾರೆ. ಈವರ್ಷವಾದರೂ ಕೆಲಸವನ್ನು ಷುರುಮಾಡುತ್ತಾರೆಂದು ಭಾವಿಸಿಕೊಳ್ಳುತ್ತೇನೆ. ಈ ಕೆಲಸಕ್ಕೆ ಬೇಕಾದ ಹಣವನ್ನು ಮಂಜೂರುಮಾಡಿದ್ದಾರೆ. ಆದರೆ ಎಲ್ಲಿ ಸೇತುವೆಯನ್ನು ಕಟ್ಟಬೇಕು, ಸ್ಥಳಯಾವುದು ಎನ್ನುವುದನ್ನೇ ನಿರ್ದಿಷ್ಟಮಾಡಿರುವುದಿಲ್ಲ. ಇದುವರೆಗೂ, ಎರಡುವರ್ಷಗಳಾದರೂ ಇನ್ನೂ investigation ಮಾಡುತ್ತಿದ್ದಾರೆ, ಇನ್ನೂ ಇಂಥಲ್ಲಿಯೇ ಸೇತುವೆಯನ್ನು ಕಟ್ಟಬೇಕೆಂದು ಸ್ಥಳವನ್ನು ನಿರ್ದಿಷ್ಟಮಾಡಿಲ್ಲ. ಆದಷ್ಟು ಜಾಗ್ರತೆ ಸೇತುವೆ ಕಟ್ಟುವ ಸ್ಥಳವನ್ನು ನಿರ್ದಿಷ್ಟಮಾಡಿ, ಈ ವರ್ಷವಾದರೂ ಕೆಲಸವನ್ನು ಷುರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಸೇತುವೆಯನ್ನು ಕಟ್ಟುವುದರಿಂದ ಬಿದರೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳ ಜನರು ಬೆಂಗಳೂರಿಗೆ ಬರಲು ಬಹಳ ಅನುಕೂಲವಾಗುತ್ತದೆ. ಕರ್ಣಾಟಕದ ಬಹು ಭಾಗಗಳಿಂದ ಬೆಂಗಳೂರಿಗೆ ಬರುವುದಕ್ಕೆ ಇದು ಅತ್ಯಂತ ಸಮೀಪವಾದ ಮಾರ್ಗವಾಗುತ್ತದೆಂದು ಹೇಳುತ್ತೇನೆ. ಬಳ್ಳಾರಿಯಿಂದ ರಾಯಚೂರುವರೆಗೆ ರಸ್ತೆಯನ್ನು ಪೂರ್ಣಮಾಡಿ, road bridge ಆದಷ್ಟು ಜಾಗ್ರತೆ ಮಾಡಿದರೆ, ಇದು ಒಂದು ದೊಡ್ಡ national highway ಆಗುತ್ತದೆ. ಇದಕ್ಕೆ ಕೂಡಲೇ ಗಮನಕೊಟ್ಟು, ಚೀಫ್ ಇಂಜಿನಿಯರ್ ಈ ಸ್ಥಳಕ್ಕೆ ಜಾಗ್ರತೆ ಭೇಟಿಕೊಟ್ಟು, ಇದೇ ವರ್ಷವೇ ಸೇತುವೆ ಕೆಲಸಕ್ಕೆ ಷುರುಮಾಡಲು ಏರ್ಪಾಡುಮಾಡಬೇಕು ಎಂದು ಹೇಳುತ್ತೇನೆ

ಬಳ್ಳಾರಿ ಜಿಲ್ಲೆಯು ಬಹಳ ಹಿಂದುಳಿದಿದೆ. ಅಲ್ಲಿ ಇದುವರೆಗೂ ಒಂದು ಹೊಸರಸ್ತೆಯಾಗಿಲ್ಲ, ಹೊಸದಾಗಿ ರಿಪೇರಿ ಕೆಲಸವನ್ನು ತೆಗೆದುಕೊಂಡಿಲ್ಲವೆಂದು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಏಕೆಂದರೆ 1953ರಲ್ಲಿ ಬಳ್ಳಾರಿಯು ಮೈಸೂರಿನಲ್ಲಿ ಸೇರಿತು. ಆಗಿನಿಂದ ಅಲ್ಲಿ ಏನು ಕೆಲಸವೂ ಆಗಿರುವುದಿಲ್ಲ. ಬಡ್ಜೆಟ್ಟಿನಲ್ಲಿ ಅಲಾಟ್ ಆಗಿರುವ ಹಣ ಖರ್ಚಾಗಿರುವುದಿಲ್ಲ. ಇದಕ್ಕೆ ಕಾರಣವೇನು, ಯಾರು ಜವಾಬ್ದಾರರು ಎಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರದವರು ಇತ್ತಕಡೆ ಗಮನ ಕೊಡಬೇಕು.

ತುಂಗಭದ್ರ ಪ್ರಾಜೆಕ್ಟಿನಿಂದ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ 90ಸಾವಿರ ಎಕರೆ ನೀರಾವರಿಯಾಗುತ್ತದೆ. ಆದರೆ ಇದುವರೆಗೂ ಆ ಪ್ರದೇಶ ಅಭಿವೃದ್ಧಿಯಾಗಿಲ್ಲ. ಅಲ್ಲಿಗೆ ಮಾನ್ಯ ವ್ಯವಸಾಯ ಮಂತ್ರಿಗಳೂ, ಪಬ್ಲಿಕ್‌ವರ್ಕ್ಸ್ ಶಾಖೆಯ ಮಂತ್ರಿಗಳೂ

(ಶ್ರೀ ಬಿ. ಇ. ರಾಮಯ್ಯ)

ಬಂದಿದ್ದಾರು. ಹೆಚ್ಚು ಆಹಾರವನ್ನು ಬೆಳೆಯಬೇಕು ಎಂದು ಹೇಳುವಾಗ ಈ ಭಾಗದಲ್ಲಿ ಅಭಿವೃದ್ಧಿ ಏಕೆ ಆಗಿಲ್ಲವೆಂದು ಯೋಚನೆಮಾಡುವುದಿಲ್ಲ. ಈ ಪ್ರದೇಶದ ಆಯಾಕಟ್ಟು develop ಆಗಿಲ್ಲವೆಂದು ಹೇಳುತ್ತೇನೆ. ಮಳೆಗಾಲದಲ್ಲಿ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಬೇಕಾದರೆ ಬಹಳ ಕಷ್ಟವಿದೆ. ತುಂಗಭದ್ರ ಡೆವಲಪ್‌ಮೆಂಟ್ ಕಮಿಟಿಯವರು ಕೂಡ 50 ಲಕ್ಷರೂಪಾಯಿಗಳ ಅಂದಾಜನ್ನು ಮಾಡಿದ್ದಾರೆ.

ಡೆವಲಪ್‌ಮೆಂಟ್ ಕಮಿಟಿಯವರು inter-village communicationಗಾಗಿ 80 ಲಕ್ಷ ರೂಪಾಯಿಗಳ ಅಂದಾಜುಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇದೇ ವರ್ಷವೇ ಇದನ್ನು ಷುರುಮಾಡಬೇಕು. ಇಲ್ಲದಿದ್ದರೆ ಆ ಆಯಕಟ್ಟು ಅಭಿವೃದ್ಧಿಯಾಗುವುದಿಲ್ಲವೆಂದು ಹೇಳುತ್ತೇನೆ.

ಅಮೇಲೆ, ಸಿರಗುಪ್ಪ ಬಹಳ ಹಿಂದುಳಿದ ತಾಲ್ಲೂಕಾಗಿದೆ. ಮಾನ್ಯ ಪಬ್ಲಿಕ್‌ವರ್ಕ್ಸ್ ಮಂತ್ರಿಗಳೂ ಅಲ್ಲಿಗೆ ಬಂದು ಬುದ್ದು ಅಲ್ಲಿನ ಪರಿಸ್ಥಿತಿಯನ್ನು ಅರಿತಿದ್ದಾರೆ. ಆ ತಾಲ್ಲೂಕಿನಲ್ಲಿ ಅರ್ಚಳ್ಳಿ ಎಂಬ ಫಿರ್ಕಾ ಇದೆ. ಮಳೆಗಾಲದಲ್ಲಿ ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ. ಸುತ್ತಲೂ ನೀರು ನಿಂತು ಒಂದು ದ್ವೀಪದಂತಾಗಿರುತ್ತದೆ. ಅಲ್ಲಿನವರು ಕೆಲವರು ಬಸ್ಸುಗಳನ್ನು ಕೂಡ ನೋಡಿಲ್ಲವೆನ್ನಬಹುದು. ಅಷ್ಟು ಹಿಂದುಳಿದ ಪ್ರದೇಶ ಅದು. 1942ನೆಯ ಇಸವಿಯಲ್ಲಿ ಅರ್ಚಳ್ಳಿ ರಸ್ತೆ ತಯಾರಾದ್ದು ಇಲ್ಲಿನವರೆಗೂ ಅದು ಸ್ವಲ್ಪವೂ ರಿಪೇರಿಯಾಗದೇ ಬಿದ್ದಿದೆ. ಈಗ ರಿಪೇರಿಮಾಡಬೇಕೆಂದರೂ 50,000 ರೂಪಾಯಿಗಳು ಖರ್ಚಾಗುತ್ತವೆ. ಒಂದೊಂದು ಮೈಲಿಗೆ ಏನಿಲ್ಲವೆಂದರೂ 10,000 ರೂಪಾಯಿ ಖರ್ಚಾಗುತ್ತದೆ. ಕ್ಷಾಮ ನಿವಾರಣಾ ರಸ್ತೆ ಅದು. ಈಗಲಾದರೂ ಅದನ್ನು ರಿಪೇರಿ ಮಾಡಿಸಬೇಕು. ಈ ಊರು ಫಿರ್ಕಾ Headquarter ಆಗಿದ್ದರೂ ಜನ ಹೋಗಿ ಬರುವುದಕ್ಕಾಗುವುದಿಲ್ಲ.

ಕಂಪ್ಲಿಯೆಂಬುದು ಇನ್ನೊಂದು ಮುಖ್ಯವಾದ ಊರು. ಅದು ಕಬ್ಬು ಬೆಳೆಯುವ ಮುಖ್ಯ ಕೇಂದ್ರ. ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯಿದೆ. ಅಲ್ಲಿಗೊಂದು ರಸ್ತೆ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಅಚ್ಚಳ್ಳಿಯಿಂದ ಬೀರಳ್ಳಿಗೆ ಹೋಗುವ ರಸ್ತೆಯಿದೆ. ಇದು 1942ನೆಯ ಇಸವಿಯಲ್ಲಿ ಮಾಡಿದ್ದು. ಈಗ ತೀರಾ ಕೆಟ್ಟುಹೋಗಿದೆ. ಕ್ಷಾಮಕಾಲದಲ್ಲಿ ಮಾಡಿದ್ದು ಈಗಲಾದರೂ ರಿಪೇರಿ ಮಾಡಿಸಬೇಕೆಂದು ಹೇಳುತ್ತೇನೆ

ಸಿರಗುಪ್ಪಾ ಹತ್ತಿರ ಒಂದು ಅಣೆಕಟ್ಟಿದೆ. ಅದರಿಂದ ಸುಮಾರು ಮೂರು ನಾಲ್ಕು ಸಾವಿರ ಎಕರೆಗೆ ಆಗುವಷ್ಟು ನೀರು ಹರಿಯುತ್ತಿರುತ್ತದೆ, ಅಲ್ಲಿ. ಬೇಸಿಗೆಯಲ್ಲಿ ಬಟ್ಟರೆ ಸದಾಕಾಲದಲ್ಲಿಯೂ ಈಗ 300-400 ವರ್ಷದಿಂದ ನೀರು ತಪ್ಪುವುದಿಲ್ಲ. ಇದನ್ನು ರಿಪೇರಿ ಮಾಡಿಸದೆ ಇದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ.

ದೇಶಿನೂರ್‌ನಲ್ಲಿಯೂ ಇದೇರೀತಿಯಿದೆ. ಅದರ ವಿಚಾರದಲ್ಲಿಯೂ ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು equation of posts ಮತ್ತು seniority ಲಿಸ್ಟ್ ಸಂಬಂಧವಾಗಿ ಮಾತನಾಡುತ್ತಾ P.W.D. ಇಲಾಖೆಯಲ್ಲಿ ಬಹಳ ಅನ್ಯಾಯಗಳು ನಡೆದಿವೆಯೆಂದು ತಿಳಿದು ಬಂದಿದೆ. ಅಧಿಕಾರಿ-ನೌಕರ ವರ್ಗದಲ್ಲಿ ಹೆಚ್ಚಿನ ಅಸಂತೃಪ್ತಿಗೆ ಇದು ಕಾರಣವಾಗಿದೆಯೆಂದು ನಾನು ಹೇಳಬಯಸುತ್ತೇನೆ. ನಾವು ಮೂರುವರ್ಷ ಮೊದಲು ಸೇರಿದೆವು. ಇಷ್ಟು ದಿವಸಗಳಾದರೂ ಅಲ್ಲಿನವರಿಗೆ ಆಗಿರುವ ಅನ್ಯಾಯವನ್ನು ಪರಿಶೀಲನೆಮಾಡಿಲ್ಲ. ಅಲ್ಲಿ ಡಿಪ್ಲೋಮಾ ಹೋಲ್ಡರುಗಳನ್ನು ಸೂಪರ್‌ವೈಸರ್‌ಗಳೆಂದು ಮಾಡಿ confirmಮಾಡಿದ್ದರೂ, ಅಂಥವರನ್ನೀಗ ಸಬ್‌ಓವರ್ಸಿಯರುಗಳೆಂದು ಕರೆದಿದ್ದಾರೆ. ಇದು ಅವರಿಗೆಷ್ಟು ಅಸಂತೃಪ್ತಿಯಾಗಬೇಕು, ನೀವೇ ಯೋಚಿಸಿ. S.R.C ರಿಪೋರ್ಟಿನಲ್ಲಿ ಖಚಿತವಾಗಿ ಹೇಳಿದೆ, ಈ ರೀತಿ ಅನ್ಯಾಯಮಾಡಬಾರದು ಎಂದು. ಈಗಲೂ ಸರ್ಕಾರದವರು ಪರಿಶೀಲನೆಮಾಡಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳುತ್ತೇನೆ. ಬಳ್ಳಾರಿ ಜಿಲ್ಲೆ ಬಹಳ ದೊಡ್ಡಜಿಲ್ಲೆ. ಅದನ್ನು ಒಂದೇ ಒಂದು ಡಿವಿಜನ್ ಎಂದು ಮಾಡಿದ್ದಾರೆ. ಇದರಿಂದಾಗಿ ಕೆಲಸ ಸರಿಯಾಗಿ ಆಗುವುದಿಲ್ಲ. ಇದನ್ನು ಎರಡಾಗಿ ಮಾಡಬೇಕೆಂದು ಹೇಳುತ್ತೇನೆ.

T.V.P. ಅಣೆಕಟ್ಟಿನಿಂದ 60,000 ಎಕರೆಗಳಿಗೆ ಮಾತ್ರ ಈಗ ನೀರು ಕೊಟ್ಟಿದ್ದಾರೆ. ಇನ್ನೂ 30,000 ಎಕರೆಗಳಿಗೆ ಕೊಟ್ಟಿಲ್ಲ. ಇದನ್ನು ಕೂಡ ಜಾಗ್ರತೆಮಾಡಬೇಕೆಂದು ಹೇಳುತ್ತೇನೆ.

ನೀರುಸರಬರಾಯಿ ಮತ್ತು ಡ್ರೈನೇಜುಸ್ಕೀಮನ್ನು ನೋಡುತ್ತಾ ಹೋದರೆ, ತಾವು ಬಳ್ಳಾರಿಯನ್ನೇ ಮರೆತಿರುವಂತೆ ಕಾಣುತ್ತದೆ. ಮುಖ್ಯ ಮಂತ್ರಿಗಳು 1958ನೆಯ ಇಸವಿಯಲ್ಲಿ ಈ ಯೋಜನೆಯನ್ನು ಕೈಕೊಳ್ಳುವುದಾಗಿ ಹೇಳಿದ್ದರು. ಆದರೆ ಈ ವರ್ಷದ ಬಡ್ಜೆಟ್ಟನ್ನು ನೋಡಿದರೆ ಅದರ ವಿಚಾರವೇ ಕಾಣುವುದಿಲ್ಲ. ಅದರ ಬಗ್ಗೆ estimate ಕೂಡ ತಯಾರಾಗಿದೆ. ಒಬ್ಬೊಬ್ಬರಿಗೆ 15ಗ್ಯಾಲನ್ ಸರಬರಾಯಿ ಮಾಡುವ ಯೋಚನೆ ಮಾಡಿದ್ದಾರೆ. ಈಗಂತೂ ಅಲ್ಲಿನ ನೀರಿನ ಸರಬರಾಯಿಯ ವ್ಯವಸ್ಥೆ ಇಲ್ಲವೇ ಇಲ್ಲ. ಆದಷ್ಟು ಜಾಗ್ರತೆ ಈ ಕೆಲಸವನ್ನು ಷುರುಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿ ಹೊಸಪೇಟೆಗೆ ಕೂಡ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಅಧ್ಯಕ್ಷರೇ, ಈದಿವಸ ನಮ್ಮ ಮುಂದಿರತಕ್ಕ ಸುಮಾರು 18ಕೋಟಿ ರೂಪಾಯಿಗಳ ಬಡ್ಜೆಟ್ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಲಕ್ಕೆ ನಾನು ನಿಂತಿದ್ದೇನೆ

ಮೊದಲನೆಯದಾಗಿ, ನನ್ನ ಸ್ನೇಹಿತರು ಸೀನಿಯಾರಿಟಿ ಲಿಸ್ಟ್ ವಿಚಾರ ಹೇಳಿದರು. 63ಜನ ಅಸಿಸ್ಟೆಂಟ್ ಎಂಜನಿಯರಿಗೆ ಅನ್ಯಾಯವಾಗಿರುವುದು ಬಹುಶಃ ಮಂತ್ರಿಗಳಿಗೂ ಗೊತ್ತಿರಬಹುದು. ಅವರ ವಿಚಾರದಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಬಿಟ್ಟಿರುವುದು ಯೋಗ್ಯವಲ್ಲವೆಂದು ಹೇಳುತ್ತೇನೆ ಏಕೆಂದರೆ ಎಲ್ಲಿ ನೋಡಿದರೂ ಇದೇ ಮಾತಾಗಿದೆ. ಬಸ್‌ನಲ್ಲಿ ಕುಳಿತರೂ ಅದೇ ; ಮನೆಯಲ್ಲಿದ್ದರೂ ಅದೇ. ಅವರು ನಮಗೆ ಹೇಳುತ್ತಿದ್ದಾರೆ ''ನಮ್ಮ ಕೈಯಲ್ಲಿದೆ ಏನು ಮಾಡಬೇಕು'' ಎಂಬುದು ಎಂದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಮನೆಗೆ ಹೋಗುತ್ತಾರೆ, ಹಾಗೆ ಹೇಳಿದರೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಅದು ಅಷ್ಟು ಸುಲಭವಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಮಾಡುವವರು ಹೋಗಿಯೇ ಹೋಗುತ್ತಾರೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ನ್ಯಾಯವಾಗಿಲ್ಲದಿದ್ದರೆ, ಅವರನ್ನು ಮನೆಗೆ ಕಳುಹಿಸೋಣ. ಮನೆಗೆ ಕಳುಹಿಸುವ ರೀತಿ ನ್ಯಾಯವಾಗಿದೆಯೇ ಎಂಬುದನ್ನು ತಾವು ಯೋಚನೆಮಾಡಬೇಕಾಗಿದೆ. 1946ರಿಂದ 1949ರವರೆಗೂ ಸೂಪರ್‌ವೈಸರ್ಸ್ ಇನ್‌ಚಾರ್ಜ್

ಅಸಿಸ್ಟೆಂಟ್ ಇಂಜಿನಿಯರಾಗಿ ಕೆಲಸಮಾಡಿದ್ದಾರೆ. 1948ನೆಯ ಇಸವಿಯಲ್ಲಿ ಅವರನ್ನು confirm ಮಾಡಿ ಎಂದು ಸರ್ಕಾರಕ್ಕೆ ಬರೆದಿದ್ದಾರೆ. 1950ನೆಯ ಇಸವಿಯಲ್ಲಿ ಯಾವಾಗಿನಿಂದ confirm ಮಾಡಬೇಕೆಂದು ಕೇಳಿ ಅಲ್ಲಿಗೇ ನಿಂತುಹೋಗಿದೆ. ಇದರಿಂದೇನಾಯಿತು ? ಇಂಟೆಗ್ರೇಷನ್ ಬಂದಮೇಲೆ, ಅಲ್ಲಿರತಕ್ಕ ಜನರು—ಇಲ್ಲಿ ಕೆಲಸ ಸಿಕ್ಕದೆ ಹೊರಗೆ ಹೋದವರು—ಇವರಮೇಲೆ ಬಂದರು. ಮೇಲೆ ಬಂದರೇನೂ ಹೊಟ್ಟೆ ಕಿಚ್ಚಿಲ್ಲ. ಆದರೆ ನಮಗೆ ಕೊಡುವುದನ್ನು ಕೊಡಿ ಎಂದು ಮಾತ್ರ ಹೇಳುತ್ತಿದ್ದಾರೆ. ಇದು ಅನ್ಯಾಯವೆಂದು ಸರ್ಕಾರಕ್ಕೂ ಗೊತ್ತಿದೆ. ಆದ್ದರಿಂದ ನ್ಯಾಯವಾಗಿ, ಈ 63 ಜನರನ್ನು confirm ಮಾಡಿದರೆ ಸಾಕು. ಸಂಬಳವೇನೂ ಜಾಸ್ತಿ ಕೊಡಬೇಕಾಗಿಲ್ಲ. ವಿರೋಧಪಕ್ಷದವರು ಹೇಳಿದ್ದಾರೆಂದು ನಾವು ಕಡೆಗಣಿಸಕೂಡದು. ನ್ಯಾಯವಾಗಿದ್ದುದನ್ನು ನಾವೂ ಹೇಳಲೇಬೇಕಾಗುತ್ತದೆ. ಸರ್ಕಾರದವರು ಜಾಗ್ರತೆ ಇದನ್ನು ಇತ್ಯರ್ಥಮಾಡಬೇಕು. ಅಗ್ರಿಕಲ್ಚರಲ್ ಡೈರೆಕ್ಟರ ಆಫೀಸಿನಲ್ಲಿ ಅಸಿಸ್ಟೆಂಟ್ ಇಂಜಿನಿಯರೆಂದು integration ಆದಮೇಲೆ ಕೂಡ confirm ಮಾಡಿದ್ದಾರೆ. ಅವರಿಗೊಂದು ಇವರಿಗೊಂದಲ್ಲ. ಆದ್ದರಿಂದ ಸುಮ್ಮನೆ ಇವರನ್ನು ವಜಾಮಾಡುತ್ತೇವೆ, ಶಿಕ್ಷೆಗೆ ಗುರಿಮಾಡುತ್ತೇವೆ ಎಂದು ಹೇಳುವುದರಿಂದ ಪ್ರಯೋಜನವಿಲ್ಲ. ಅವರು ಕೆಲಸವಾಡುತ್ತಿಲ್ಲವೆಂದು ಹೇಳಲಿಲ್ಲ, ಮುಂದಕ್ಕೂ ಹಿಂದಕ್ಕೂ ಸುಮ್ಮನೆ ಕಾಗದವನ್ನು ಓಡಾಡಿಸುತ್ತಾರೆ ಅಷ್ಟೆ. ಆದ್ದರಿಂದ ಕೂಡ್ಲೆ ಮಾಡಬೇಕೆಂದು ಹೇಳುತ್ತೇನೆ.

ಇವೊತ್ತು P.W.D. ಡಿಮ್ಯಾಂಡ್ ಇದೆ. ಇಂಥ ದಿನ ಸಾಮಾನ್ಯವಾಗಿ ಆ ಇಲಾಖಾ ಎಂಜಿನಿಯರು, ಸೆಕ್ರಿಟೆರಿಯವರು ಇಲ್ಲಿ ಇರಬೇಡವೇ ? ಆದರೆ ಇಲ್ಲಿ ನೋಡಿದರೆ P.W.D. ಎಂಜಿನಿಯರೂ ಇಲ್ಲ, ಸೆಕ್ರಿಟೆರಿಯವರೂ ಇಲ್ಲ. ಅವರಿಗಿರುವ ಅಸಂತೃಪ್ತಿ ಇದರಿಂದಲೇ ಕಾಣುತ್ತದೆ. ಇದು ಏನು ತೋರಿಸುತ್ತದೆ ? ಇದಕ್ಕೆ ಒಂದು ಕಾರಣವಿದೆಯೆಂದು ಕಾಣಿಸುತ್ತದೆ. ಹಿಂದೆ ಚೀಫ್ ಇಂಜನಿಯರು ಸರ್ಕಾರದ ಪಿ.ಡಬ್ಲ್ಯು.ಡಿ. ಜಾಯಿಂಟ್ ಸೆಕ್ರೆಟೆರಿಯಾಗಿದ್ದರು. ಈ ಪದ್ಧತಿ ಯಾವಾಗ್ಲೂ ಒಳ್ಳೆಯದು. ಏಕೆಂದರೆ ಚೀಫ್ ಎಂಜಿನಿಯರಿಗೆ ಅವರ ಇಲಾಖೆಯಲ್ಲಿ ಯಾವ ಕೆಲಸ ಜಾಗ್ರತೆ ಆಗಬೇಕು ಎಂದು ಗೊತ್ತಿರುತ್ತದೆ. ಅವುಗಳನ್ನು ಜಾಗ್ರತೆ ಮಾಡಿಸಲು ಚೀಫ್ ಇಂಜನೀಯರನ್ನು ಜಾಯಿಂಟ್ ಸೆಕ್ರೆಟೆರಿಯಾಗಿ ಮಾಡತಕ್ಕದ್ದು. ಸರ್ಕಾರಕ್ಕೆ ಸಂಬಂಧಪಟ್ಟ ಎಸ್ಟಿಮೇಟ್, ವಗ್ಯೆರೆ ಕಾಗದಗಳೂ ಬೇಗ ಮುಟ್ಟುತ್ತವೆ. ಇಲ್ಲದೆಹೋದರೆ ಕಾಗದಗಳು ಕೆಳಕ್ಕೆ ಮೇಲಕ್ಕೆ ಹೋಗುವುದರಲ್ಲಿಯೇ ಕಾಲ ವಿಳಂಬವಾಗುತ್ತೆ.

ಸ್ಯಾಂಕ್ಷನ್ ಆದ ದುಡ್ಡನ್ನೆಲ್ಲಾ ಇಲಾಖೆಯವರು ಖರ್ಚುಮಾಡುತ್ತಾ ಇಲ್ಲ. ಕೆಲಸ ಆಗುತ್ತಿರುವುದೂ ಬಹಳ ಕಡಮೆ. ಟೆಂಡರು ಕರೆಸುತ್ತೀರಿ. ಘಂಟೆಗೆ ಇಷ್ಟು, ಘಳಿಗ್ಗೆ ಇಷ್ಟು ಎಂದು ಕಡಮೆ ಕೊಡುತ್ತೀರಿ. ಪರ್‌ಸೆಂಟೇಜ್ ಮೇಲೆ ಕಡಿಮೆ ಹಾಕಿಸುವುದು ಒಳ್ಳೆಯದು. ಕೊಟ್ಟಿರತಕ್ಕಂಥ ಕೊಟೇಷನ್‌ಗಳಮೇಲೆ ರಗಳೆ ರಾಧ್ಯಾಂತವಾಗಿರುವುದು ಸರ್ಕಾರಕ್ಕೆ ಗೊತ್ತಿದೆ. ಪರ್‌ಸೆಂಟೇಜ್ ಪ್ರಕಾರ ಹಾಕಿಬಿಡಿ. ಇಲ್ಲದೆ ಹೋದರೆ ಯಥಾಪ್ರಕಾರ ಎಕ್ಸಿಕೂಟೀವ್ ಇಂಜನಿಯರ್, ಗುಮಾಸ್ತರು ಇವರುಗಳಲ್ಲೇ ಕಾಗದ ಮೇಲಕ್ಕೆ ಕೆಳಕ್ಕೆ ಓಡಾಡುತ್ತದೆ.

ಸ್ಪೆಷಲ್ ಮೈನರ್ ಇರಿಗೇಷನ್‌ಗೆ 12½ ಲಕ್ಷ ರೂಪಾಯಿ ಕೊಟ್ಟು, ತುಮಕೂರಿಗೆ ಒಂದು ಸ್ಪೆಷಲ್ ಸಬ್‌ಡಿವಿಜನ್ ಕೊಟ್ಟಿದ್ದಾರೆ. ಆ ಸಬ್ ಡಿವಿಷನ್‌ಗೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರೂ ಇದ್ದಾರೆ; ಸಬ್ ಓವರ್‌ಸೀರುಗಳು, ಸೂಪರ್‌ವೈಸರೂ ಇದ್ದಾರೆ. ಇವರುಗಳಿಗೆ ಕೆಲಸ ಎಲ್ಲಿದೆ, ಯಾವ ಹೋಬಳಿಯಲ್ಲಿದೆ ಎಂದು ಜಾಗ ತೋರಿಸಬೇಕಾದರೆ ಯಥಾಪ್ರಕಾರ ಪಿ.ಡಬ್ಲ್ಯು.ಡಿ. ಯಲ್ಲಿರುವ ಸಬ್ ಓವರ್ಸೀಯರೇ ಕೆಲಸ ತೋರಿಸಬೇಕು. ಮಂತ್ರಿಗಳಿಗೆ ಈ ವಿಚಾರದಲ್ಲಿ ಉದಾಹರಣೆಯೊಡನೆ ಬರೆದುಕೊಟ್ಟಿದ್ದೇನೆ. ಸ್ಪೆಷಲ್ ಸಬ್‌ಡಿವಿಷನ್ ಇದ್ದೂ ಏನೂ ಕೆಲಸವಾಗಿಲ್ಲ. ನನ್ನ ಕ್ಷೇತ್ರದಲ್ಲಿ ಏನು ಕೆಲಸವಾಗಿದೆ ಎಂದರೆ 8,000 ರೂಪಾಯಿ ಒಂದು ಕೆಲಸಮಾತ್ರವಾಗಿದೆ. ಇದಕ್ಕೋಸ್ಕರ ಒಂದು ಸ್ಪೆಷಲ್ ಸಬ್‌ಡಿವಿಜನ್ ಅಂದರೆ ನನಗಂತೂ ಅರ್ಥವಾಗುತ್ತಿಲ್ಲ. ಹೆಚ್ಚಿಗೆ ಕೆಲಸವನ್ನು ತೆಗೆದುಕೊಳ್ಳಬೇಕು. ಇಲ್ಲದೆಹೋದರೆ ದುಡ್ಡು ಅನ್ಯಾಯವಾಗುತ್ತದೆ.

ನಮ್ಮ ಸ್ನೇಹಿತರು ಒಬ್ಬೊಬ್ಬ ಸರ್ವೇಯರನ್ನು ಜಿಲ್ಲಾವಾರು ಪಿ.ಡಬ್ಲ್ಯು.ಡಿ. ಇಲಾಖೆಗೆ ಕೂಡ ಕೊಟ್ಟಿದ್ದಾರೆಂದು ಹೇಳಿದರು. ತುಮಕೂರು ವಾಟರ್ ಸಪ್ಲೈ ಸರ್ವೆ ನಡೆದು ನಾಲ್ಕೈದು ವರ್ಷಗಳಾದುವು. ಸರ್ವೇಯರು ಕೂಡಾ ಎಲ್ಲಿದ್ದಾರೋ ಗೊತ್ತಿಲ್ಲ. ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ಸಂಬಳ ತೆಗೆದುಕೊಳ್ಳುತ್ತಾರೋ ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟಿನಲ್ಲಿ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಸರ್ವೇಯರ್ ಇರತಕ್ಕಂಥಾದ್ದು ಎಷ್ಟೋ ಸೂಪರಿಂಟೆಂಡೆಂಟ್ ಇಂಜಿನಿಯರುಗಳಿಗೆ ಗೊತ್ತಿಲ್ಲ. ಆ ಇಲಾಖೆ ಸಮುದ್ರವಾಗಿದೆ. ಮೈದಾಳ ಕೆರೆಯ ಸರ್ವೆಕೆಲಸ ಆಗಿ ನಾಲ್ಕು ವರ್ಷವಾಯಿತು. ಕೆಲಸ ಇನ್ನೂ ತೆಗೆದುಕೊಳ್ಳುವುದರಲ್ಲಿದ್ದಾರೆ. ಸ್ಪೆಷಲ್ ಸಬ್ ಡಿವಿಜನ್ ಕೊಟ್ಟಿರುವುದರಲ್ಲಿ ಸರ್ಕಾರದ ಉದ್ದೇಶವೇನು ? ಅವರಿಗೆ ಏನೂ ಕೆಲಸ ಕೊಟ್ಟಿಲ್ಲ. ಕೆಲಸ ಹಂಚಿಕೊಡಿ. ಕೆಲಸ ಮಾಡಲಿಕ್ಕೆ ಒಂದು ಸಬ್‌ಡಿವಿಜನ್ನು, ಎಸ್ಟಿಮೇಟುಗಳು ಮತ್ತು ಸ್ಕ್ರೂಟಿನಿ ಮಾಡಲಿಕ್ಕೆ ಒಂದು ಸಬ್‌ಡಿವಿಜನ್ ಕೊಡಿ. ಹೀಗೆ ಎರಡು ಸಬ್‌ಡಿವಿಜನ್ನುಗಳನ್ನು ಕೊಟ್ಟು ಕೆಲಸ ಬೈಫರ್‌ಕೇಟ್ ಮಾಡಿದರೆ ಕೆಲಸವಾಗುತ್ತೆ.

ಕಡೆಯದಾಗಿ, ಒಂದು ಕಡೆಯಿಂದ ಕೆರೆಗಳನ್ನೆಲ್ಲಾ ಸ್ಯಾಂಕ್ಷನ್ ಮಾಡಿಕೊಂಡು ಹೋಗುತ್ತಾ ಇದ್ದೀರಿ. ಒಂದುಕಡೆಯೂ ಕೆರೆ ಕೆಲಸ ಆಗುತ್ತಾ ಇಲ್ಲ. ಒಂದು ಕಡೆ ಹುರಿ ಹೊಸೆದುಕೊಂಡು ಇನ್ನೊಂದುಕಡೆ ಹುರಿಯನ್ನು ಬಿಚ್ಚಿಕೊಂಡು ಹೋದಹಾಗೆ ಆಗಿದೆ. ಕೆಲವು ಕೆರೆಗಳನ್ನು ಮಂಜೂರು ಮಾಡಿದ್ದೀರಿ. ಸತ್ಯಾಗ್ರಹ ಹೂಡಿದರೆ ಏನಾದರೂ ಅವುಗಳನ್ನು ಮಾಡುತ್ತೀರೋ ಏನೋ. ಬರೆದೂ ಬರೆದೂ ರೈತರಿಗೆ ಏನೂ ಪ್ರಯೋಜನವಾಗಿಲ್ಲ. ಮೈದಾಳ್ ಟ್ಯಾಂಕಿನ ಚರಿತ್ರೆ ದೇಶದಲ್ಲಿ ಗೊತ್ತಿಲ್ಲದೆ ಇರುವವರು ಯಾರೂ ಇಲ್ಲ. ಅಲ್ಲಿ ರೈತರಿಗೂ ತುಮಕೂರು ಮುನಿಸಿಪಾಲಿಟಿಯವರಿಗೂ ಒಂದು ದೊಡ್ಡ ಘರ್ಷಣೆ ಆಗಿದೆ. ರೈತರಿಗೆ ಬೆಳೆಯಾಗುತ್ತಿಲ್ಲ. ಮುನಿಸಿಪಾಲಿಟಿಗೆ ನೀರು ಸಾಕಾಗುವುದಿಲ್ಲ. ಈಗ್ಗೆ ಐದನೇ ವರ್ಷದಲ್ಲಿ ಸರ್ಕಾರದವರು ಮೈದಾಳ್ ಟ್ಯಾಂಕ್ ಎನ್‌ಕ್ವೈರಿ ಕಮಿಟಿ ಎಂದು ಮಾಡಿದರು. ಆ ಸಮಿತಿಯ ರಿಪೋರ್ಟ್ ಸರ್ಕಾರಕ್ಕೆ ಬಂದು ನಾಲ್ಕು ವರ್ಷವಾಗಿದೆ. ಸರ್ಕಾರದವರು ಅದರಮೇಲೆ ಒಂದು ಡಿಸಿಷನ್ ತೆಗೆದುಕೊಂಡಿಲ್ಲ. ಅಚ್ಚುಕಟ್ಟು ಜಾಸ್ತಿಯಾಗಿದೆ. ಬೆಳೆ ಒಣಗುತ್ತಾ ಇರುತ್ತದೆ. ಅಚ್ಚುಕಟ್ಟನ್ನು ಕಡಿಮೆಮಾಡಿ ಮುನಿಸಿಪಾಲಿಟಿಯಿಂದ ರೈತರಿಗೆ ಕಾಂಪೆನ್‌ಸೇಷನ್ ಕೊಡಿಸಿ. ಅದೂ ಇಲ್ಲ, ಇದೂ ಇಲ್ಲ. ಹೀಗಾಗಿ ಬಹಳ ತೊಂದರೆ

(ಶ್ರೀ ಕೆ. ಎಲ್. ನರಸಿಂಹಯ್ಯ)

ಯಾಗಿದೆ. ಕುಡಿಯುವುದಕ್ಕೆ ಸಹ ನೀರು ಸಾಲುತ್ತಿಲ್ಲ. ಅಲ್ಲಿ ಜಮೀನುಗಳ ಬೆಲೆ ಒಂದು ಸಾವಿರ ಚಿಲ್ಲರೆಯಾಗಿದೆ. ಸಮಿತಿಯ ವರದಿಯನ್ನು ಬಹಳ ಶೀಘ್ರದಲ್ಲಿ ಹೊರಡಿಸಬೇಕೆಂದು ಪದೇ ಪದೇ ಸರ್ಕಾರಕ್ಕೆ ಅರಿಕೆ ಮಾಡಿದ್ದೇವೆ. ಇನ್ನೂ ಆ ವರದಿಯನ್ನು ಹೊರಡಿಸುವ ಗೋಜಿಗೆ ಹೋಗಿಲ್ಲ. ನಮ್ಮ ರೈತರಿಗೆ ಅನುಕೂಲ ವಾಗತಕ್ಕಂಥಾದ್ದನ್ನು ಯೋಚಿಸಬೇಕು. ಒಂದೂ ಡಿಸ್ಟ್ರಿ ಬ್ಯೂಟರಿ ಚಾನಲ್ಲು ಇಲ್ಲ. ಎಲ್ಲಾ ಛಾನಲ್ಲುಗಳನ್ನು ಗೇಯಿಕೊಂಡು ರೈತರು ಇಲ್ಲದಹಾಗೆ ಮಾಡಿಕೊಂಡಿ ದ್ದಾರೆ. ಅರ್ಜಿಕೊಟ್ಟರೆ ಯಾರೂ ವಿಚಾರಿಸುವುದಿಲ್ಲ. ರೆವೆನ್ಯೂ ಡಿಪಾರ್ಟ್‌ಮೆಂಟಿನವರು ನಮ್ಮ ಕೆಲಸವಲ್ಲ ಅನ್ನುತ್ತಾರೆ. ಪಿ.ಡಬ್ಲ್ಯು.ಡಿ. ಅವರು ನಮ್ಮದು ಅಲ್ಲ ಅನ್ನುತ್ತಾರೆ. ಸರ್ವೆ ಇಲಾಖೆಯವರು ನಮ್ಮದು ಅಲ್ಲ ಅನ್ನುತ್ತಾರೆ. ಇದನ್ನೆಲ್ಲಾ ಸರಿಪಡಿಸಬೇಕು ಎಂದು ಇಷ್ಟು ವಿಚಾರ ಹೇಳಿ ನನ್ನ ಭಾಷಣವನ್ನು ಮುಗಿ ಸುತ್ತೇನೆ.

ಶ್ರೀ ಎ. ಎಂ. ಬಸವೇಗೌಡ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದಿಟ್ಟಿರುವ ಪಿ.ಡಬ್ಲ್ಯು.ಡಿ, ಡಿಮ್ಯಾಂಡಿನಮೇಲೆ ಎರಡು ಮಾತು ಗಳನ್ನು ಆಡಬೇಕೆಂದು ಇದ್ದೇನೆ. ಪಿ.ಡಬ್ಲ್ಯು.ಡಿ. ಬಹಳ ಮುಖ್ಯವಾದ ಇಲಾಖೆ ಎಂಬುದು ಎಲ್ಲರೂ ಅರಿ ತಿರುವ ವಿಷಯ. ಏಕೆಂದರೆ ಈ ಡಿಪಾರ್ಟ್‌ಮೆಂಟಿನ ಕೆಲಸಗಳು ಹಿಂದೆಬಿದ್ದರೆ ಅನೇಕ ಡಿಪಾರ್ಟ್‌ಮೆಂಟುಗಳ ಕೆಲಸ ಕಾರ್ಯಗಳು ಹಿಂದೆ ಬೀಳುತ್ತವೆ. ಈ ಡಿಪಾರ್ಟ್ ಮೆಂಟಿನ ದಕ್ಷತೆ ಕಡಮೆಯಾದರೆ ಇನ್ನುಳಿದ ಡಿಪಾರ್ಟ್ ಮೆಂಟುಗಳ ದಕ್ಷತೆಯೂ ಕಡಮೆಯಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಏಕೆಂದರೆ ಈ ಡಿಪಾರ್ಟ್‌ಮೆಂಟನ್ನು ಮುಖ್ಯವಾಗಿ ಎಜುಕೇಷನ್, ಪಬ್ಲಿಕ್ ಹೆಲ್ತ್, ಮೆಡಿಕಲ್ ಮತ್ತು ಇನ್ನೂ ಕೆಲವು ಡಿಪಾರ್ಟ್‌ಮೆಂಟುಗಳು ನೆಚ್ಚಿಕೊಂಡಿವೆ. ಪಿ.ಡಬ್ಲ್ಯು.ಡಿ. ಸರಿಯಾಗಿ ಕೆಲಸ ಮಾಡದಿದ್ದಲ್ಲಿ ಬಾಕಿ ಡಿಪಾರ್ಟ್ ಮೆಂಟುಗಳ ಕೆಲಸ ಸರಿಯಾಗಿ ನಡೆಯುವುದಿಲ್ಲ.

ಈ ಸಂದರ್ಭದಲ್ಲಿ ನನ್ನದು ಒಂದು ಸೂಚನೆ ಇದೆ. ಸೂಪರಿಂಟೆಂಡಿಂಗ್ ಇಂಜಿನೀಯರ್ ಹುದ್ದೆ ಗಳಿಂದ ಅನುಕೂಲವಾಗುವುದಕ್ಕಿಂತ ಹೆಚ್ಚಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಅವುಗಳನ್ನು ವಜಾಮಾಡಬೇಕು. ಅವರುಗಳಿಂದ ಸರಿಯಾಗಿ ಕೆಲಸ ವಾಗುತ್ತಿಲ್ಲ. ಉದಾಹರಣೆಗೆ ನಮ್ಮ ಚಿಕ್ಕ ಮಗಳೂರು ಆಸ್ಪತ್ರೆಗೆ 30,000 ರೂಪಾಯಿ ಹೋದವರ್ಷ ಬಡ್ಜೆಟ್ಟಿನಲ್ಲಿಯೇ ಸ್ಯಾಂಕ್ಷನ್ ಮಾಡಿ ದ್ದಾರೆ. ಇವತ್ತಿನವರೆಗೂ ಕಟ್ಟಡದ ಕೆಲಸ ಏನೂ ಆಗಿಲ್ಲ. ಈ ಸೂಪರಿಂಟೆಂಡಿಂಗ್ ಇಂಜಿನೀಯರು ಇದ್ದು ಅವರಿಂದ ಜನಗಳಿಗೆ ಏನು ಪ್ರಯೋಜನ ? ಅವರು ಕೆಲಸಗಳಿಗೆ ಬಹಳ ಅಡ್ಡಿ ಅಡಚಣೆ ತರುತ್ತಿದ್ದಾರೆ.

ಪಿ.ಡಬ್ಲ್ಯು.ಡಿ. ಯಲ್ಲಿ ರೀಆರ್ಗನೈಸೇಷನ್ ಆಗ ಬೇಕು. ರೂರಲ್ ಕಮ್ಯೂನಿಕೇಷನ್ಸ್ ಸಂಬಂಧದಲ್ಲಿ ಒಂದು ಸರಿಯಾದ ಪ್ಲಾನ್‌ಇಲ್ಲ. ಒಂದು ಪಂಚವಾರ್ಷಿಕ ಯೋಜನೆ ಹಾಕಬೇಕು. ಒಂದ ನಿಗದಿಯಾದ ಕಾಲ ದಲ್ಲಿ ರೂರಲ್ ಕಮ್ಯುನಿಕೇಷನ್ಸ್ ಕೆಲಸವನ್ನು ತೆಗೆದು ಕೊಳ್ಳಬೇಕು. ಶಿಸ್ತು, ದಕ್ಷತೆ ಇಲ್ಲದೆ ಕೆಲಸ ಮಾಡಿ ದರೆ ಜನಗಳಿಗೆಯಾವ ತರಹ ಅನುಕೂಲವೂ ಆಗುವು ದಿಲ್ಲ. ಈ ವರ್ಷ ಕೇಂದ್ರಸರ್ಕಾರದವರು ಹತ್ತು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಏನೂ ಕೊಟ್ಟಂತೆ ಕಾಣುವುದಿಲ್ಲ. ರಾಜ್ಯ ಸರ್ಕಾರ ಇದಕ್ಕೆ ಹತ್ತು ಲಕ್ಷ ರೂಪಾಯಿ ಕೊಟ್ಟು ಈ ಗ್ರಾಮಾಂತರ ರಸ್ತೆ ಕೆಲಸವನ್ನು ಜಾಗ್ರತೆ ನಡೆಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಪಬ್ಲಿಕ್ ವರ್ಕ್ಸ್ ಇಲಾಖೆಯ ಸಂಬಂಧದಲ್ಲಿ ಬರುವುದಿಲ್ಲ.

ಶ್ರೀ ಎ. ಎಂ. ಬಸವೇಗೌಡ.—ಅದಕ್ಕೆ ಅಂದಾಜು ತಯಾರಾಗಬೇಕಾದರೆ ಪಬ್ಲಿಕ್ ವರ್ಕ್ಸ್ ಇಲಾಖೆಗೇ ಬರಬೇಕು.

ಪ್ರತಿವರ್ಷವೂ ಇಷ್ಟು ಕೆಲಸ ಆಗಬೇಕೆಂದು ನಿಗದಿ ಯಾಗಬೇಕು. ಇಲ್ಲದಿದ್ದರೆ ಸರಿಯಾಗಿ ಕೆಲಸ ನಡೆಯುವುದಿಲ್ಲ, ಜನರಿಗೆ ಅನುಕೂಲವಾಗುವುದಿಲ್ಲ.

ಜಿಲ್ಲೆಗಳಿಗೆ ಕೊಡುವ ಗ್ರ್ಯಾಂಟು ಸಮನಾಗಿ ಹಂಚಿಕೆಯಾಗಬೇಕು. ಹಿಂದುಳಿದ ಜಿಲ್ಲೆಗಳಿಗೆ ಬೇಕಾದರೆ ಸ್ಪೆಷಲ್ ಗ್ರ್ಯಾಂಟ್ ಕೊಡಲಿ. ಇದು ಬಿಟ್ಟು ಒಂದೊಂದು ಜಿಲ್ಲೆಗೆ ಒಂದೊಂದು ರೀತಿ ಗ್ರ್ಯಾಂಟ್ ಕೊಡಬಾರದು, ಒಂದೇರೀತಿ ಇರಬೇಕು.

West coast communicationsಗೆ ಕೇಂದ್ರ ಸರ್ಕಾರದವರು 47 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದನ್ನುಪಯೋಗಿಸಿ ಆ ಪ್ರದೇಶವನ್ನು ಮುಂದೆ ತರು ವುದಕ್ಕೆ ಏರ್ಪಾಡು ಮಾಡಬೇಕು. ಒಳಪ್ರದೇಶ ಗಳಿಗೂ ಪಶ್ಚಿಮ ತೀರಕ್ಕೂ ಸಂಬಂಧವುಂಟಾಗುವಂತೆ ಮಾಡಬೇಕು.

ಮಲೆನಾಡು ಮತ್ತು ಬೈಲು ಸೀಮೆ ಎರಡರಲ್ಲೂ ರಸ್ತೆಗಳಿಗೆ ಮೈಲಿಯೊಂದಕ್ಕೆ ಸಾವಿರ ರೂಪಾಯಿ ಕೊಡಲಾಗಿದೆ. ಮಲೆನಾಡಿನ ರಸ್ತೆಗಳಿಗೆ ಸಾವಿರ ರೂಪಾಯಿ ಸಾಕಾಗುವುದಿಲ್ಲವಾದುದರಿಂದ ಆ ರಸ್ತೆ ಗಳಿಗೆ ಹೆಚ್ಚಿನ ಗ್ರ್ಯಾಂಟ್ ಕೊಡಬೇಕು, ಜಿಲ್ಲಾ ಬೋರ್ಡ್ ರಸ್ತೆಗಳನ್ನು ಸರ್ಕಾರ ವಹಿಸಿಕೊಳ್ಳುವ ವಿಚಾರದಲ್ಲಿ ಮೊದಲು ಜಿಲ್ಲೆಗೆ 250 ಮೈಲಿ ಎಂದು ತೀರ್ಮಾನಮಾಡಿ ಈಗ 100 ಮೈಲಿಗೆ ಇಳಿಸಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ 200 ಮೈಲಿ ರಸ್ತೆ ಯನ್ನಾದರೂ ತೆಗೆದುಕೊಂಡು ಉತ್ತಮಪಡಿಸ ಬೇಕೆಂದು ಸೂಚಿಸುತ್ತೇನೆ.

ಹಿಂದೆ ಮಲೆನಾಡು ಅಭಿವೃದ್ಧಿ ಯೋಜನೆ ಎಂದು ಮಾಡಿದ್ದರು. ಅದರಲ್ಲಿ ಅನೇಕ ಕೆಲಸಗಳನ್ನು ಮಾಡಿದರು. ಅವುಗಳಲ್ಲಿ ಎಷ್ಟೋ ಕೆಲಸಗಳು ಅಪೂರ್ಣವಾಗಿ ನಿಂತಿವೆ. ಲಕ್ಷಾಂತರ ರೂಪಾಯಿ ಖರ್ಚುಮಾಡಿ ಕೆಲಸ ಪೂರ್ತಿಮಾಡಿಲ್ಲ. ಮಲೆನಾಡಿಗೆ ಗ್ರ್ಯಾಂಟ್ ಕೊಟ್ಟು ಅವುಗಳನ್ನು ಸಂಪೂರ್ಣಮಾಡ ಬೇಕೆಂದು ಹೇಳುತ್ತೇನೆ. ಅಲ್ಲದೆ ಮಲೆನಾಡು ಅಭಿ ವೃದ್ಧಿ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಅದನ್ನು ಐದು ವರ್ಷದ ಯೋಜನೆ ಯಂತೆ ಮಾಡಬೇಕು. ಈಗ ಶಿವಮೊಗ್ಗ ಒಂದೇ ಮಲೆನಾಡು ಎನ್ನುವರೀತಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಚಿಕ್ಕಮಗಳೂರು, ಹಾಸನ, ಸಕಲೇಶ ಪುರ ಮುಂತಾದ ಕಡೆ ಏನೂ ಮಾಡಿಲ್ಲ. ಇದರಿಂದ ನಮಗೆಲ್ಲ ಬಹಳ ಅನಾನುಕೂಲವಾಗಿದೆ ಎಂದು ಖಡಾಖಂಡಿತವಾಗಿ ಹೇಳಬೇಕಾಗಿದೆ. ಯಾವ ಕೆಲಸ ವನ್ನೇ ಆಗಲಿ ಜಾಗ್ರತೆಯಾಗಿ ಮಾಡುತ್ತಿಲ್ಲ. ಉದಾ ಹರಣೆಗೆ ಒಂದು ರಸ್ತೆಯಲ್ಲಿರುವ ಕಲ್ವರ್ಟಿನ ಕೆಲಸ ವನ್ನು ಪ್ರಾರಂಭಮಾಡುತ್ತಾರೆ, ಮೂರು ತಿಂಗಳು ಆರು ತಿಂಗಳಾದರೂ ಅದನ್ನು ಪೂರೈಸುವುದಿಲ್ಲ. ಯಾವ ಕೆಲಸವಾದರೂ ಇಷ್ಟು ಕಾಲದಲ್ಲಿ ಮಾಡ ಬೇಕೆಂದು ನಿಗದಿಮಾಡಬೇಕು, ನಿಧಾನವೇಕಾಯಿ ತೆಂದು ಕೇಳಿದರೆ ಅನೇಕ ಕಾರಣಗಳನ್ನು ಹೇಳು ತ್ತಾರೆ. ಟೆಕ್ನಿಕಲ್ ಸ್ಯಾಂಕ್ಷನ್ ಆಗಿಲ್ಲ, ಅಡ್ಮಿನಿ

ಸ್ಟ್ರೇಟಿವ್ ಸ್ಯಾಂಕ್ಷನ್ ಆಗಿಲ್ಲ ಮುಂತಾದ ಕಾರಣಗಳನ್ನು ಹೇಳುತ್ತಾರೆ. ಇನ್ನು ಕೆಲವುವೇಳೆ ಸೂಪರಿಂಟೆಂಡಿಂಗ್ ಇಂಜಿನೀಯರಿಗೆ ಹೋಗಿದೆ, ಚೀಫ್ ಇಂಜಿನಿಯರ್‌ಗೆ ಹೋಗಿದೆ ಎಂದು ಹೇಳುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ನಾನಾ ಕೆಲಸಗಳಿಗಾಗಿ 9,90,06,000 ರೂಪಾಯಿ ಖರ್ಚುಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಒದಗಿಸುವ ಹಣದಲ್ಲಿ ಎಷ್ಟು ಖರ್ಚಾಯಿತು, ಎಷ್ಟು ಖರ್ಚಾಗದೆ ಲ್ಯಾಪ್ಸ್ ಆಯಿತು, ಎನ್ನುವುದನ್ನು ಬಡ್ಜೆಟ್ಟಿನ ಜೊತೆಗೆ ಕೊಟ್ಟರೆ ಆಗ ಎಷ್ಟುಮಟ್ಟಿಗೆ ಪ್ರಗತಿಯಾಗಿದೆ ಎಂಬುದು ಗೊತ್ತಾಗುತ್ತದೆ.

ಮೈನರ್ ಇರಿಗೇಷನ್ ಯೋಜನೆಯನ್ನು ಉಪೇಕ್ಷೆ ಮಾಡಿದ್ದಾರೆ. ಇಲಾಖೆಯಲ್ಲಿ ಕೆಲಸಮಾಡುವ ಅಧಿಕಾರಿಗಳಲ್ಲಿ ತೃಪ್ತಿಯಿಲ್ಲದಿದ್ದರೆ ಕೆಲಸಗಳು ಸರಿಯಾಗಿ ಆಗುವುದಿಲ್ಲ. ಇದರಿಂದ ಒದಗಿಸಿದ ಹಣ ಲ್ಯಾಪ್ಸ್ ಆಗುತ್ತದೆ. ಉದಾಹರಣೆಗೆ 1949ರಲ್ಲಿ ಅನೇಕರನ್ನು ಅಸಿಸ್ಟೆಂಟ್ ಇಂಜಿನೀಯರ್ ಆಗಿ ಮಾಡಿದ್ದಾರೆ. ಅವರನ್ನು ಇದುವರೆಗೂ ಖಾಯಂಮಾಡಿಲ್ಲ. ಹೀಗಾದರೆ ಅವರಲ್ಲಿ ಹೇಗೆ ತೃಪ್ತಿ ಬರುತ್ತದೆ, ಅವರು ಯಾವ ರೀತಿ ಕೆಲಸಮಾಡುತ್ತಾರೆ? 200 ವೇಕೆನ್ಸಿಗಳು ಇರುವಾಗ 63 ಜನರನ್ನು ಖಾಯಂಮಾಡುವುದಕ್ಕೆ ಏನು ಕಷ್ಟ? ಕೆಲಸ ಕಾರ್ಯಗಳು ಸರಿಯಾಗಿ ಆಗಬೇಕೆಂಬ ಉದ್ದೇಶದಿಂದ ಇವರನ್ನು ಖಾಯಂಮಾಡಬೇಕು. ಪ್ರೊಬೇಷನರ್‌ಗಳನ್ನು ತೆಗೆದುಕೊಳ್ಳುವ ಹಾಗಿದ್ದರೆ ಅವರನ್ನು ಬೇಗ ನೇಮಕಮಾಡಿ ಕೆಲಸಗಳು ಸರಿಯಾಗಿ ನಡೆಯುವಂತೆ ಮಾಡಬೇಕು.

ಶ್ರೀ ಮಾದಪ್ಪನವರು ಹೇಳಿದಹಾಗೆ ಟೆಂಡರ್‌ಗಳನ್ನು ಪೀಸ್ ಮೀಲ್ ಕೊಡುವುದೇ ಉತ್ತಮ. ಒಟ್ಟಾಗಿ ಒಬ್ಬೊಬ್ಬರಿಗೇ ಕೊಟ್ಟರೆ ವರ್ಷಗಟ್ಟಲೆ ಕೆಲಸಗಳಾಗುವುದಿಲ್ಲ. ಸಾಮಾನ್ಯವಾಗಿ ಒಬ್ಬರಿಗೆ ಟೆಂಡರ್ ಕೊಟ್ಟಮೇಲೆ ಅದನ್ನು ರದ್ದುಮಾಡುವುದಕ್ಕೆ ಟೆಕ್ನಿಕಲ್ ಅಬ್ಜೆಕ್ಷನ್ ಇರುತ್ತದೆ. ಕೆಲಸ ಪೂರ್ತಿಯಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಪಾಲಿ ಟೆಕ್ನಿಕ್ ಸ್ಕೂಲಿಗೆ 45,000 ರೂಪಾಯಿ ಕೊಟ್ಟಿದ್ದಾರೆ. ಖಂಡಿತವಾಗಿ ಅದನ್ನು ಬೇಗಕಟ್ಟಿ ಪೂರೈಸುವುದಕ್ಕೆ ಏರ್ಪಾಡು ಮಾಡಬೇಕು.

Unsanctioned worksಗೆ ಏಳು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದನ್ನೇಕೆ ಇಟ್ಟುಕೊಳ್ಳಬೇಕೊ ಅರ್ಥವಾಗುವುದಿಲ್ಲ. ಕೊನೆಯಲ್ಲಿ ತಮಗೆ ಹೆಚ್ಚು ಒತ್ತಾಯ ಮಾಡಿದವರ ಕೆಲಸಗಳನ್ನು ಮಂಜೂರು ಮಾಡಬೇಕೆಂಬ ಉದ್ದೇಶವೋ ಅಥವಾ ಯಾರು ಪ್ರಭಾವ ಬೀರುತ್ತಾರೋ ಅವರ ಕೆಲಸಗಳನ್ನು ಮಂಜೂರು ಮಾಡಬೇಕೆಂಬ ಉದ್ದೇಶವೋ ಗೊತ್ತಾಗುವುದಿಲ್ಲ.

Water supply ಅಥವಾ ನೀರು ಸರಬರಾಜಿಗೆ ಬೇರೆ ಒಬ್ಬರು ವಿಶೇಷ ಇಂಜಿನೀಯರನ್ನು ನೇಮಕ ಮಾಡಿದರೆ ಅನುಕೂಲವಾಗುತ್ತದೆ. ಈಹೊತ್ತು ಎಲ್ಲ ಪಟ್ಟಣಗಳಲ್ಲಿಯೂ ನೀರಿನ ಅಭಾವವಿದೆ. ನಮ್ಮ ಜಿಲ್ಲೆಯ ವಿಚಾರ ಹೇಳುವುದಾದರೆ, ಅಂದಾಜು ಮಂಜೂರಾಗಿದೆ. ಟೆಂಡರುಗಳನ್ನು ಕರೆದು ಒಬ್ಬ ಕಂಟ್ರಾಕ್ಟರಿನ ಟೆಂಡರನ್ನು ಒಪ್ಪಿ ಆತನಿಗೆ ಕೆಲಸವನ್ನು ಒಪ್ಪಿಸಿದರು. ಆದರೆ ಆತನಿಗೆ ಆ ಕೆಲಸ ಮಾಡುವುದಕ್ಕೆ ಯೋಗ್ಯತೆಯಿಲ್ಲ. ಒಂದೂವರೆ ವರ್ಷದಿಂದ ಕೇವಲ ನಾಲ್ಕು ಸಾವಿರ ರೂಪಾಯಿನ ಕೆಲಸವನ್ನು ಮಾಡಿದ್ದಾನೆ. ಹೀಗಾಗುವುದನ್ನು ತಪ್ಪಿಸಲು ನೀರು ಸರಬರಾಜು ಶಾಖೆಯನ್ನೇ ಬೇರೆಮಾಡಿ, ಪ್ರತ್ಯೇಕ ಡಿವಿಜನ್ ಮಾಡಿ, ಒಬ್ಬ ಡೆಪ್ಯುಟಿ ಚೀಫ್ ಇಂಜಿನಿಯರನ್ನಾದರೂ ನೇಮಿಸಬೇಕು. ಜಿಲ್ಲಾ ನೀರು ಸರಬರಾಜು ಕಾರ್ಯಗಳನ್ನು ನೋಡಿಕೊಳ್ಳಲು ಒಂದು ಸಮಿತಿಯನ್ನು ನೇಮಕ ಮಾಡಬೇಕು. ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು, ಯಾವ ಯಾವುದು ಬೇಡ ಎಂಬುದನ್ನು ತೀರ್ಮಾನ ಮಾಡುವ ಅಧಿಕಾರ ಈ ಸಮಿತಿಗಿರಬೇಕು.

ಕೊನೆಯದಾಗಿ, ಗ್ರಾಮಾಂತರ ರಸ್ತೆಗಳನ್ನು ಒಂದು planned basis ಮೇಲೆ ಮಾಡಬೇಕು. ಇಲ್ಲದಿದ್ದರೆ ಕೆಲಸವಾಗುವುದಿಲ್ಲ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಈ ವರ್ಷ ಒಂದು ರಸ್ತೆಯನ್ನು ಪ್ರಾರಂಭಿಸಿ ಮೂರು ಮೈಲಿಗಳಷ್ಟು ಮಾಡುತ್ತಾರೆ, ಮುಂದಿನ ವರ್ಷ ಇನ್ನು ಮೂರು ಮೈಲಿ ಮಾಡುತ್ತಾರೆ. ಹೀಗೆಯೇ ಹೋಬಳಿ ಹೆಡ್ ಕ್ವಾರ್ಟರುಗಳಿಗೆ inter-hobli communications ರಸ್ತೆಗಳನ್ನು ಮಾಡುವುದಕ್ಕೆ ಪ್ರಾರಂಭಿಸಬೇಕು. ಇದರಿಂದ ಗ್ರಾಮಾಂತರದ ಜನರಿಗೆ ಅನುಕೂಲವಾಗುತ್ತದೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಟಿ. ಡಿ. ಮಾರಣ್ಣ (ಮಾಗಡಿ).—ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿರುವ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯ ಬಗ್ಗೆ ನಾಲ್ಕು ಮಾತುಗಳನ್ನಾಡಿ ಒಪ್ಪಿಗೆಯನ್ನು ಕೊಡಬೇಕೆಂದು ನಿಂತಿದ್ದೇನೆ. ಸಾಮಾನ್ಯವಾಗಿ ಪಬ್ಲಿಕ್ ವರ್ಕ್ಸ್ ಇಲಾಖೆ ಯಾವುದೇ ಒಂದು ದೇಶದ ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಅತ್ಯಂತ ಮಹತ್ವ ಸ್ಥಾನವನ್ನು ಹೊಂದಿದೆ. ಇಷ್ಟೊಂದು ಮಹತ್ವಪೂರಿತವಾದ ಇಲಾಖೆ ದೇಶದ ಹಿತವನ್ನು ಸಾಧಿಸಬೇಕಾದರೆ, ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಡೆಸಬೇಕಾದರೆ ಈ ಇಲಾಖೆ ಬಹಳಮಟ್ಟಿನ ಮುತುವರ್ಜಿಯಿಂದಲೂ ದಕ್ಷತೆಯಿಂದಲೂ ಸತ್ಯಸಂಧತೆಯಿಂದಲೂ ಕೆಲಸ ಮಾಡಬೇಕಾದುದು ದೇಶದ ಹಿತದೃಷ್ಟಿಯಿಂದ ಬಹಳ ಅಗತ್ಯ. ಆದರೆ ಅದೃಷ್ಟವಶಾತ್ ಅಥವ ದುರದೃಷ್ಟವಶಾತ್ ನಮ್ಮ ದೇಶದ ಹಾಗೂ ಇಡೀ ಪ್ರಪಂಚದ ಎಲ್ಲ ದೇಶಗಳ ಪಬ್ಲಿಕ್ ವರ್ಕ್ಸ್ ಇಲಾಖೆ ಕೆಲಸವನ್ನು ಅವಲೋಕನೆ ಮಾಡುವುದಾದರೆ, ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿದೆ ಎನ್ನುವುದು ಅರ್ಥವಾಗುತ್ತದೆ. ರೈತರ ಸಹಾಯ ಕಾರ್ಯದಲ್ಲಿ ಮಹತ್ವಪೂರಿತ ಕೆಲಸ ಕಾರ್ಯಗಳು ಈ ಇಲಾಖೆಯ ಮೂಲಕವೇ ನಡೆಯಬೇಕಾಗಿವೆ. ಕ್ರಮಾನುಸಾರವಾಗಿ ಲೋಪದೋಷಗಳಿಲ್ಲದೆ ಕೆಲಸ ಪ್ರಾರಂಭವಾಗಬೇಕಾದರೆ, ಅದಕ್ಕೆ ಮೊದಲು ನೂರೆಂಟು objections, querriesಗಳು ಒಂದು ಗಂಟು ಪ್ರಾರಂಭವಾಗಿ ಕೆಲಸವಾಗುವುದು ನಿಧಾನವಾಗುತ್ತದೆ.

2 P.M.

ಇದು ನಮ್ಮ ನಿತ್ಯ ಅನುಭವದ ಮಾತಾಗಿದೆ. ಮಾಗಡಿ ತಾಲ್ಲೂಕಿನ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಕುದೂರು ಹೋಬಳಿ, ಕನ್ನಸಂದ್ರ ಗ್ರಾಮದಲ್ಲಿ ಒಂದು ಕೆರೆ ಆಗಬೇಕೆಂದು ಸರ್. ಮಿರ್ಜಾರವರು ದಿವಾನರಾಗಿದ್ದಾಗ ಒಂದು ಅರ್ಜಿಕೊಟ್ಟರು. ಆ ಲಾಗಾಯ್ತು ಇದುವರೆಗೂ ಆ ಕೆರೆ ಕೆಲಸ ನಡೆದಿಲ್ಲ. ಒಬ್ಬ ಪಟೇಲ ಸತ್ತುಹೋಗಿ ಇನ್ನೊಬ್ಬ ಪಟೇಲ ಬಂದ. ಆ ಕೆರೆ ರಿಕಾರ್ಡು ಸರ್ಕಾರದ ಎದುರಿಗೆ ನಾಲ್ಕುಸಲ ಬಂದು ವಾಪಸು ಹೋಗಿ ಈಗ ಎಗ್ಜಿಕ್ಯುಟಿವ್ ಇಂಜಿನಿಯರ ಆಫೀಸಿನಲ್ಲಿ ಕೊಳೆಯುತ್ತಿದೆ. ಪಬ್ಲಿಕ್‌ವರ್ಕ್ಸ್ ಇಲಾಖೆಗೆ, ಅಲ್ಲಿನ ಅಧಿಕಾರಿಗಳಿಗೆ ಅದರ ಕಥೆ ಚೆನ್ನಾಗಿ ಗೊತ್ತು. ಇದಕ್ಕೇನು ಕಾರಣವೆಂದರೆ ನಮ್ಮಲ್ಲಿ ಪ್ರಜಾ ಸರ್ಕಾರ ಸ್ಥಾಪನೆಯಾಗಿದೆ, ಪ್ರಜಾಪ್ರಭುತ್ವ

(ಶ್ರೀ ಟಿ. ಡಿ. ಮಾರಣ್ಣ)

ನಡೆಸುತ್ತಿದ್ದೇವೆ. ಆದರೆ ನಿತ್ಯವೂ ನಡೆಯುವ ಆಡಳಿತ ಪದ್ಧತಿ, ಹಿಂದೆ ಬ್ಯೂರೋಕ್ರಾಟಿಕ್ ಸರ್ಕಾರವಿದ್ದಾಗ ಯಾವ ರೀತಿಯಿತ್ತೋ ಅದೇ ರೀತಿಯಿದೆ, ಕಾರ್ಯಾನುಸರಣೆಯಲ್ಲಿ ಬದಲಾವಣೆಯಾಗಿಲ್ಲ. ಹಿಂದೆ ಇದ್ದಂತೆಯೇ ಇಂದೂಕೂಡ ಇದೆ. ಈ ಕಾರ್ಯಾನುಸರಣೆಯಲ್ಲಿ ಬದಲಾವಣೆಯಾಗದ ಹೊರತು, ಹಿಂದಿನಿಂದ ಬಂದಿರುವ ಪದ್ಧತಿ ಬದಲಾವಣೆಯಾಗದ ಹೊರತು ಜಾಗ್ರತೆ ಜನರಿಗೆ ಅನುಕೂಲವಾಗುವುದಿಲ್ಲ. ಅದು ಬದಲಾವಣೆಯಾಗದಿರುವುದರಿಂದ ಈ ದಿವಸ ಸರ್ಕಾರ, ಇಲಾಖೆ ಇಷ್ಟೊಂದು ಟೀಕೆ ಟಿಪ್ಪಣಿಗಳಿಗೆ ಒಳಗಾಗಿದೆ ಎಂದು ಸರ್ಕಾರದ ಗಮನಕ್ಕೆ ಈ ಮೂಲಕ ತರುತ್ತೇನೆ.

ಅದೇ ರೀತಿಯಾಗಿ ಇನ್ನೊಂದು. ನಮ್ಮ ತಾಲ್ಲೂಕು ಹುಳ್ಳೇನಹಳ್ಳಿ ಅಣೆಕಟ್ಟಿನಿಂದ ಸುಮಾರು 200 ಎಕರೆ ನೀರಾವರಿಯಾಗುತ್ತದೆ. ಆ ಅಣೆಕಟ್ಟು ಸುಮಾರು ಹತ್ತು ವರ್ಷಗಳಿಂದ ಆಗುವುದರಲ್ಲೇ ಇದೆ. ಮೊನ್ನೆ ಒಬ್ಬ ಇಂಜಿನಿಯರು ಬಂದು ಸರ್ವೆಮಾಡಿ 20 ಸಾವಿರ ರೂಪಾಯಿಗಳಿಗೆ ಅಂದಾಜುಮಾಡಿ ಮಂಜೂರಾತಿಗೆ ಕಳುಹಿಸಿದಾಗ ರಾಕಿ ಪ್ಲೇಸ್ ಸಿಕ್ಕಿಲ್ಲ, ಹೆಚ್ಚು ಹಣ ಬೇಕು, ಎಸ್ಟಿಮೇಟ್ ಪುನಃ ಮಾಡಬೇಕು ಎಂದು ಹೇಳಿದ್ದಾರೆ. ಈ ಹುಳ್ಳೇನಹಳ್ಳಿ ಪಿಕಪ್ ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಹೋಬಳಿಯಲ್ಲಿದೆ.

ಇದೇರೀತಿ ನೆಲಮಂಗಲ—ಮಾಗಡಿ ಬಾರ್ಡರಿನಲ್ಲಿರುವ ಮಹದೇವಪುರದ ಕೆರೆ 20 ವರ್ಷಗಳಿಂದ ಆಗುವುದರಲ್ಲೇ ಇದೆ, ಇದುವರೆಗೂ ಆಗಿಲ್ಲ.

ಮರಾಮತ್ ಇಲಾಖೆಯಲ್ಲಿ ಈಗ ಸುಧಾರಣೆಯಾಗಿದೆ. ಕೆರೆಗಳಲ್ಲಿ ಎಕ್ಕಲು ತುಂಬ ನಿಂತು ಸರ್ಕಾರದವರು ಒಂದು ವರ್ಷದಿಂದ ಡೀಸಿಲ್ಟಿಂಗ್ ಮಾಡಲು ಪ್ರಾರಂಭ ಮಾಡಿದ್ದಾರೆ. ಯಾವ ತಾಂತ್ರಿಕ ವಿಜ್ಞಾನಿ ಅಥವಾ ನಿಪುಣ ಡೀಸಿಲ್ಟಿಂಗ್ ಮಾಡುವಂತೆ ಸರ್ಕಾರಕ್ಕೆ ಸಲಹೆ ಕೊಟ್ಟಿನೋ ಅರ್ಥವಾಗುವುದಿಲ್ಲ. ಡೀಸಿಲ್ಟಿಂಗ್ ಮಾಡುವುದನ್ನು ಸಾಮಾನ್ಯವಾಗಿ ಇಂಜಿನಿಯರಿಂಗ್ ಇಲಾಖೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಒಪ್ಪುವುದಿಲ್ಲ. ಕಾರಣ ಡೀಸಿಲ್ಟಿಂಗ್ ಮಾಡುವುದರಿಂದ ಕೆರೆ ಉದ್ಧಾರವಾಗುವುದಿಲ್ಲ. ಎಷ್ಟೇ ಡೀಸಿಲ್ಟ್ ಮಾಡಿದರೂ ಮುಂದೆ ಬರುವ ನೀರಿನಿಂದ ಒಂದು ವರ್ಷದೊಳಗಾಗಿ ತೆಗೆದ ಮಣ್ಣು ಪುನಃ ತುಂಬಿಕೊಳ್ಳುತ್ತದೆ. ಪೂರ್ವದಲ್ಲಿ ಲಕ್ಕಿ ಗಿಡಗಳನ್ನು ಸಿಲ್ಟ್ ತಡೆಯುವುದಕ್ಕಾಗಿ ಕೆರೆ ಅಂಗಳಗಳಲ್ಲಿ ಬೆಳೆಸುತ್ತಿದ್ದರು. ಅಂಥ ಪದ್ಧತಿ ಈಗ ಹೋಗಿ ಅದಕ್ಕೆ ಬದಲಾಗಿ ಸಾಮಾನ್ಯವಾಗಿ ಸಿಲ್ಟ್‌ಟ್ರ್ಯಾಪ್ಸ್ ಕಟ್ಟುವುದು, ಡೀಸಿಲ್ಟ್‌ಮಾಡುವುದು ಮುಂತಾದ್ದನ್ನು ಮಾಡುತ್ತಿದ್ದಾರೆ. ಡೀಸಿಲ್ಟಿಂಗ್ ಸಹಸ್ರಬಾರಿ ಮಾಡುವುದಕ್ಕೆ ಬದಲಾಗಿ ಲಕ್ಕಿಗಿಡ ನೆಡುವುದು ಸುಲಭ, ಡೀಸಿಲ್ಟಿಂಗ್ ಮಾಡುವುದರಿಂದ ವಿಶೇಷ ಹಣ ವ್ಯರ್ಥವಾಗುತ್ತದೆ ಎಂದು ಸಲಹೆಮಾಡುತ್ತೇನೆ. ಈಗಿರುವ ಯೋಜನೆಯಂತೆ ಯಾವ ಕೆರೆಯಲ್ಲೂ ಡೀಸಿಲ್ಟಿಂಗ್ ಮಾಡಬೇಡಿ, ಹಣ ಪೋಲುಮಾಡಬೇಡಿ ಎಂದು ಪ್ರಾರ್ಥನೆಮಾಡುತ್ತೇನೆ.

ಆಮೇಲೆ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಕೆಲವರು ಸೆಕೆಂಡ್ ಡಿವಿಜನ್ ಕ್ಲಾರ್ಕುಗಳು 15—20 ವರ್ಷಗಳಿಂದ ಕನ್‌ಫರ್ಮೇಷನ್ ಆಗದೆ ಕೆಲಸಮಾಡುತ್ತಿದ್ದಾರೆ, ಹೀಗೆ ಆಕರ್ಷಣೆಯಿಲ್ಲದೆ ಈ ಇಲಾಖೆಯಲ್ಲಿ ಮುಂದುವರೆಯುತ್ತಿದ್ದಾರೆ. ಅವರಿಗೆ ಕನ್‌ಫರ್ಮ್ ಮಾಡುವುದು ಸರ್ಕಾರದ ಆದ್ಯಕರ್ತವ್ಯ, ಮಾಡಬೇಕು ಎಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಟ್ಯಾಂಕ್ ಮೈಂಟೆನೆನ್ಸ್ ಸಮಸ್ಯೆ. ಒಂದು ಸಲ ಕೆರೆಗಳನ್ನು ಮೈಂಟೈನ್‌ಮಾಡುವ ಕೆಲಸವನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಕೊಟ್ಟಿದ್ದರು, ಆಮೇಲೆ ಆ ಕೆಲಸವನ್ನು ರೆವೆನ್ಯೂ ಇಲಾಖೆಗೆ ವಹಿಸಿದರು. ಈ ದಿವಸ ಕೂಡ ಕಾನೂನು ಪ್ರಕಾರ ರೆವೆನ್ಯೂ ಇಲಾಖೆಯವರೇ ಆ ಕೆಲಸ ನಿರ್ವಹಿಸಬೇಕು. ಆದರೆ ನನಗೆ ತಿಳಿದಹಾಗೆ ರೆವೆನ್ಯೂ ಇಲಾಖೆ ಆ ಕೆಲಸಕ್ಕೆ ಗಮನಕೊಡುತ್ತಿಲ್ಲ. ಏಕೆಂದರೆ ರೆವೆನ್ಯೂ ಇಲಾಖೆಯಲ್ಲಿ ಇಲಾಖಾ ಕೆಲಸಕಾರ್ಯ ಹೆಚ್ಚಾಗಿ ಅಮಲ್ದಾರರು, ಸಬ್‌ಡಿವಿಜನ್ ಆಫೀಸರು ಮತ್ತು ಡೆಪ್ಯುಟಿ ಕಮಿಷನರು ಮುಂತಾದವರಿಗೆ ಪುರಸೊತ್ತೇ ಇರುವುದಿಲ್ಲ, ಸಾಲದ್ದಕ್ಕೆ ಸಮಾರಂಭಗಳಲ್ಲಿ ಓಡಾಡುವುದು ಬೇರೆ. ಇದೇ ಅವರಿಗೆ ಸಾಕಾಗಿ ಹೋಗುತ್ತದೆ, ರೆವೆನ್ಯೂ ಇಲಾಖೆ ಕೆಲಸ ನೋಡಿಕೊಳ್ಳುವುದಕ್ಕೇ ಅವರಿಗೆ ಸಾಕಾದಷ್ಟು ಕಾಲಾವಕಾಶವಿರುವುದಿಲ್ಲವೆಂದು ಕಾಣುತ್ತದೆ. ಹಿಂದೆ ಕೆರೆ ಸಾಲಾಬಾದು ಕಾಂಗಾರಿ ವರ್ಷೇ ವರ್ಷೇ ರೈತರಿಗೆ ಉತ್ತೇಜನಕೊಟ್ಟು ಅವರಿಂದ ಮಾಡಿಸುತ್ತಿದ್ದರು. ಈಗ ಅದು ಹೋಗಿ ಸರ್ಕಾರ ಆ ಕೆಲಸ ರೆವೆನ್ಯೂ ಇನ್ಸ್‌ಪೆಕ್ಟರ ಮೂಲಕ ಮಾಡಿಸಬೇಕಾಗಿದೆ. ರೈತರು ವರ್ಷೇವರ್ಷೇ ಮೈಂಟೆನೆನ್ಸ್ ಮಾಡುವುದು ನಿಂತು ಎಷ್ಟೋ ವರ್ಷವಾಗಿದೆ. ಕೆರೆ ರಿಪೇರಿಯಾಗಬೇಕೆಂದು ರೈತರಿಂದ ಅರ್ಜಿಬಂದರೆ ಅದಕ್ಕೆ ಅಂದಾಜುಮಾಡಿ ಆ ಬಗ್ಗೆ ಬೇಕಾಗಿರುವ ಹಣವನ್ನು ರೈತರಿಂದ ವಸೂಲುಮಾಡುವುದು ಈಗಿರುವ ಪದ್ಧತಿ. ಇದಕ್ಕಾಗಿ ಒಂದೇ ಸಾರಿ ಸಹಸ್ರಾರು ರೂಪಾಯಿಗಳನ್ನು ವಸೂಲು ಮಾಡುವುದಾದರೆ ಕೊಡಲು ರೈತರಿಗೆ ಬಹಳ ಕಷ್ಟವಾಗುತ್ತದೆ. ವರ್ಷೇ ವರ್ಷೇ ರಿಪೇರಿಮಾಡಿದರೆ ಅಗಾಧವಾದ ಹಣ ಖರ್ಚು ಮಾಡಬೇಕಾದದ್ದು ತಪ್ಪುತ್ತದೆ. ಪಬ್ಲಿಕ್‌ವರ್ಕ್ಸ್ ಇಲಾಖೆಯಾಗಲಿ ಅಥವಾ ರೆವೆನ್ಯೂ ಇಲಾಖೆಯಾಗಲಿ ಯಾವುದೇ ಕೆಲಸ ಮಾಡಿದರೂ ಪರಿಪೂರ್ಣವಾಗಿ ಮಾಡಬೇಕು. ಉದಾಸೀನಮಾಡಿದರೆ ಇರುವ ಹಳೆಯ ಕೆರೆಗಾಗಲಿ ಅಥವಾ ಹೊಸ ಕೆರೆಕಟ್ಟುವುದಕ್ಕಾಗಲಿ ಅಗಾಧವಾದ ಹಣ ವ್ಯಯವಾಗುತ್ತದೆ. ಸರಿಯಾಗಿ ಕೆಲಸ ಸಕಾಲದಲ್ಲಾಗಬೇಕಾದರೆ ಇರುವ ಕೆರೆಗಳನ್ನು ಮೈನ್‌ಟೈನ್ ಮಾಡುವುದನ್ನು ರೆವೆನ್ಯೂ ಇಲಾಖೆಯಿಂದ ಪೂರ್ಣವಾಗಿ ತಪ್ಪಿಸಿ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವಹಿಸಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ.

ಈ ಇಲಾಖೆಯಲ್ಲಿರುವ ಕೆಲವು ಮೀನಿಯಲ್ಸ್ ಮತ್ತು ಕೆಳದರ್ಜೆನೌಕರರ ವಿಚಾರ. ಮೇಸ್ತ್ರಿ ಇತ್ಯಾದಿ ನೌಕರರು ಕೆಲಸ ಖಾಯಂ ಆಗದೆ ಹಂಗಾಮಿಯಾಗಿ ಸಹಸ್ರಾರು ಮಂದಿ ಇದ್ದಾರೆ. ಅವರು 20 ವರ್ಷಗಳಿಂದ ಸೇವೆ ಮಾಡಿದ್ದರೂ ಇದುವರೆಗೂ ಅವರಿಗೆ ಕನ್‌ಫರ್ಮೇಷನ್ ಆಗಿಲ್ಲ. ಅವರಿಗೆ ಟೆಂಪೊರೆರಿ ಸ್ಟ್ಯಾಫ್ ಎಂದು ಹೆಸರಿಟ್ಟು ಯಾವುದೋ ಒಂದು ಬಾಬಿನಿಂದ ಸಂಬಳ ಕೊಡುತ್ತಿದ್ದಾರೆ. ಅವರಿಗೆ ಏನಾದರೂಮಾಡಿ ಗ್ರಾಚ್ಯುಯಿಟಿ, ಪ್ರಾವಿಡೆಂಟ್ ಫಂಡ್ ಸೌಕರ್ಯ ಅಥವಾ ಖಾಯಂ ನೌಕರರಿಗಿರುವಂತೆ ಪೆನ್‌ಷನ್ ಸೌಕರ್ಯ ಕಲ್ಪಿಸಿಕೊಡಬೇಕು, ಅದು ಸೂಕ್ತ ಎಂದು ಸರ್ಕಾರದಲ್ಲಿ ಮನವಿಮಾಡುತ್ತೇನೆ.

ಇವತ್ತು ರಾಷ್ಟ್ರ ಪುನರ್ರಚನಾ ಕಾರ್ಯ, ರಾಷ್ಟ್ರದ ಬೃಹದ್ಯೋಜನೆ, ಪ್ರಥಮ ಪಂಚವಾರ್ಷಿಕಯೋಜನೆ, ದ್ವಿತೀಯ ಪಂಚವಾರ್ಷಿಕಯೋಜನೆ ಮುಂತಾದ ಕಾರ್ಯಗಳನ್ನು ಕೈಕೊಳ್ಳಬೇಕಾಗಿರುವುದರಿಂದ

ಪಬ್ಲಿಕ್ ವರ್ಕ್ಸ್ ಇಲಾಖೆ ಹೆಚ್ಚು ಮುತವರ್ಜಿ ವಹಿಸ ಬೇಕಾಗಿರುವುದರಿಂದ, ಈ ಇಲಾಖೆಯ ಮಹತ್ವವೇನೆಂದು ಅರ್ಥಮಾಡಿಕೊಂಡು ಇಲಾಖೆ ಕೆಲಸ ಸರಿಯಾಗಿ ಪ್ರತಿಯೊಬ್ಬರೂ ಮಾಡಬೇಕು, ಒಂದು ಧರ್ಮ ದೃಷ್ಟಿಯಿಂದ ಕೆಲಸಮಾಡಬೇಕು, ದೇಶಕ್ಕಾಗಿ ಶ್ರಮಿಸಬೇಕು, ದೇಶದ ಪುನರ್‍ರಚನೆಗಾಗಿ ಸೇವೆ ಸಲ್ಲಿಸಬೇಕು, ಅದಕ್ಕೆ ತಕ್ಕ ಉದಾರ ಬುದ್ಧಿ ಇಲಾಖಾ ಅಧಿಕಾರಿಗಳಿಗೆ ದೇವರು ಕೊಡಲಿ ಎಂದು ಪ್ರಾರ್ಥನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಇಷ್ಟು ಹೆಚ್ಚಿನ ಹಣ ಖರ್ಚುಮಾಡತಕ್ಕಂಥ ಈ ಜನೋಪಕಾರಿ ಖಾತೆ ಎಷ್ಟರಮಟ್ಟಿಗೆ ಜನಗಳಿಗೆ ಸಹಾಯ ಮಾಡುವುದರಲ್ಲಿ ಮುಂದಕ್ಕೆ ಹೆಜ್ಜೆ ಇಟ್ಟಿದೆ ಎಂದು ಹೇಳಿದರೆ ನಿಜವಾಗಿ ನನ್ನ ಸ್ನೇಹಿತರು ಹೇಳಿದ ಹಾಗೆ ಮೊದಲು ತಳಪಾಯದಲ್ಲಿಯೇ ಎಲ್ಲವೂ ಕೆಟ್ಟು ಹೋಗಿದೆ. ಇಂಜಿನ್ ಕೆಲಸಮಾಡಬೇಕಾದರೆ ಅದರಲ್ಲಿರ ತಕ್ಕ ಪ್ರತಿಯೊಂದು ಭಾಗವೂ ಸರಿಯಾದ ಸ್ಥಿತಿಯಲ್ಲಿರಬೇಕು. ಒಂದು ವೇಳೆ ಯಾವೊಂದು ಭಾಗವಾದರೂ ಅದರಲ್ಲಿ ಔರನ್ ಔಟ್ ಆಗಿದ್ದರೆ ಅದು ಕೆಲಸಮಾಡುವುದಕ್ಕಾಗುವುದಿಲ್ಲ. ಹಾಗೆಯೇ ಈ ಖಾತೆಯಲ್ಲಿ ಕೆಳಗಿನಿಂದ ಮೇಲಿನವರೆಗೆ ಅಧಿಕಾರವರ್ಗದಲ್ಲಿ ಸಮಾಧಾನವಿದ್ದರೆ ಸರ್ಕಾರದವರು ಮಾಡತಕ್ಕಂಥ ಕೆಲಸದಿಂದ ಜನ ನಿರೀಕ್ಷಣೆಮಾಡಿದಂಥ ಫಲ ದೊರೆಯುತ್ತದೆಯೇ ಹೊರತು ಅಧಿಕಾರವರ್ಗದಲ್ಲಿ ಸಮಾಧಾನ ಇಲ್ಲದೇ ಹೋದರೆ ಸರ್ಕಾರದವರು ಕೋಟಿಗಟ್ಟಲೆ ರೂಪಾಯಿಗಳನ್ನು ಒದಗಿಸಿಕೊಟ್ಟರೂ ಜನಗಳಿಗೆ ಅವರು ನಿರೀಕ್ಷಿಸಿದಷ್ಟು ಸಹಾಯವಾಗುವುದಿಲ್ಲ. ನಾವು ದಕ್ಷರು, ಜನಪ್ರೇಮಿಗಳು, ನಮ್ಮಿಂದ ದೇಶಕ್ಕೆ ಒಳ್ಳೆಯದಾಗುತ್ತಿದೆ, ನಾವು ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ, ಎಂದು ಹೇಳುವುದೆಲ್ಲಾ ನಿಜವಾಗಿ ಬರೀ ಪುಸ್ತಕದಲ್ಲಿರುತ್ತದೆ ಮತ್ತು ಭಾಷಣದಲ್ಲಿರುತ್ತದೆ. ಇದರಿಂದ ದೇಶ ಕಟ್ಟುವುದಕ್ಕೆ ಸಾಧ್ಯವಿಲ್ಲ. ಈ ಖಾತೆಯಲ್ಲಿರತಕ್ಕ ಅಸಮಾಧಾನವನ್ನು ಹೋಗಲಾಡಿಸಿ. ಈಗ ನೀವು ಮಾಡತಕ್ಕ ಕೆಲಸ, ಹೇಳತಕ್ಕ ವಚನ ಇವುಗಳಿಂದ ಜನರಿಗೆ ಫಲ ದೊರೆಯದೆ ಅವರು ಕಷ್ಟಕ್ಕೀಡಾಗಿದ್ದಾರೆ. ಅದರಿಂದ ದೇಶದಲ್ಲಿ ಯಾವ ಅಭಿವೃದ್ಧಿಯೂ ಆಗುವುದಿಲ್ಲ. ಸರ್ಕಾರದ ಆಡಳಿತ ಯಂತ್ರದಲ್ಲಿ ತೊಡಕಿದೆ. ಲೋಪವಿದೆ. ಆದ್ದರಿಂದ ಇನ್ನುಮುಂದೆ ಸರ್ಕಾರದವರು ಜನರು ನಿರೀಕ್ಷಿಸಿದಷ್ಟು ಫಲ ದೊರಕುವಂತೆ ಮಾಡುತ್ತಾರೆಂದು ನಾನು ತಿಳಿದಿದ್ದೇನೆ. ಹೋದಸಾರಿಯೇ ಹೇಳಿದ್ದೇನೆ. ಈ ಖಾತೆಯಲ್ಲಿ ಎಲ್ಲಿ ನೋಡಿದರೂ ಲಂಚರುಷುವತ್ತು ಇದೆಯೆಂದು ಮಾನ್ಯ ಸಚಿವರು ಮೇಲಿಂದಮೇಲೆ ಉತ್ತರ ಹೇಳಿದ್ದಾರೆ. ನಿಜವಾಗಿ ಲಂಚ ಇಲ್ಲವೆಂದು ಅವರು ಹೇಳುವುದಿಲ್ಲ. ಅದನ್ನು ಕಡಮೆಮಾಡಿದ್ದೇವೆ. ಅದನ್ನು ತೀವ್ರವಾಗಿ ಪರಿಶೋಧನೆಮಾಡಿ ಅಂತಹ ದುಷ್ಕೃತ್ಯವನ್ನು ತಡೆಗಟ್ಟುವುದಕ್ಕೆ ಸರ್ವಸನ್ನಾಹ ಮತ್ತು ಸರ್ವ ಪ್ರಯತ್ನಮಾಡುತ್ತೇವೆ. ಖಾತೆಗೆ ಬಂದಿರತಕ್ಕ ಕೆಟ್ಟ ಹೆಸರನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ ಎಂದು ಹೇಳಿದ್ದಾರೆ. ನಿಜ. ಮಾತಿಗೆ ಸರಿಯಾಗಿ ನಡೆಯುವುದಾದರೆ ಸರಿ. ತಾವು ತಿಳಿದವರು. ರೈತನ ಹೊಟ್ಟೆಯಲ್ಲಿ ಹುಟ್ಟಿ ಬೆಳೆದವರು. ಇಂದು ಸಮಾಜದಲ್ಲಿರತಕ್ಕ ಲಂಚಕೋರತನವನ್ನು ತಾವು ಹಿಡಿದಿರತಕ್ಕ ಖಾತೆಯಲ್ಲಿ ಹೋಗಲಾಡಿಸಿದರೆ, ನಾವು ನಿಜವಾಗಿ ಚಿರಋಣಿಗಳಾಗಿರಬೇಕು. ಏಕೆಂದರೆ ತಮಗೆ ಇರುವ ಖಾತೆಯಲ್ಲಿ ಬಹಳಮಟ್ಟಿಗೆ ಅನ್ಯಾಯ ಮಾಡುತ್ತಿದ್ದಾರೆ. ಕಣ್ಣಾಮುಚ್ಚಾಲೆ ಆಡಿ ಜೋಪಿ ಹಾಕಿ ದುಡ್ಡನ್ನು ಹೊಡೆಯುವ ಮಾರ್ಗ ಈ ಖಾತೆಯಲ್ಲಿದೆ. ಆ ಖಾತೆಯಲ್ಲಿರುವ ಜನರೂ ನಮ್ಮ ಸಂಸ್ಥಾನದವರು. ದೇಶಕ್ಕೆ ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ, ಒಂದು ಫಲ ಸಾಧನವಾಡಿದರೆ, ಅದು ಮುಂದಿನ ಪೀಳಿಗೆಗೆ, ನಮ್ಮ ಜನಗಳಿಗೆ ಅನುಕೂಲವಾಗುತ್ತದೆ. ಅದಕ್ಕೋಸ್ಕರವಾಗಿ ಇಂತಹ ಒಳ್ಳೆಯ ಕೆಲಸಮಾಡುವ ಮಾರ್ಗದಲ್ಲಿ ಕೈಯನ್ನು ಕಲುಷಿತಮಾಡಿಕೊಳ್ಳಬಾರದು. ಕೈಗೆ ಕಲ್ಮಷ ಹತ್ತಿಕೊಳ್ಳದೇ ಇರತಕ್ಕ ಮಾರ್ಗವನ್ನನುಸರಿಸಬೇಕು. ಹಿಂದೆ ಈ ಮರಾಮತ್ತು ಶಾಖೆಯನ್ನು ಶ್ರೀ ಸಿ. ರಾಜಗೋಪಾಲಚಾರಿಯವರು 'ಎರಡನೆಯ ಎಸಿಮಿ' ಎಂದು ಹೇಳಿದರು. ನಾನು ಹೇಳುವುದು ಏನೆಂದರೆ, ಅದು ಮರಾಮತ್ತು ಶಾಖೆಯಲ್ಲ; ಮಲಾಮತ್ತು ಶಾಖೆಯಾಗಿದೆ. ಇಂತಹ ಕೆಟ್ಟ ಹೆಸರನ್ನು ನಮ್ಮ ಸರ್ಕಾರದವರು ತೊಡೆದುಹಾಕುವುದಕ್ಕೆ ಸರ್ವ ಪ್ರಯತ್ನಮಾಡಬೇಕು.

ಶ್ರೀ ಟಿ. ಡಿ. ಮಾರಣ್ಣ.—ಮಲಾಮತ್ತು ಎಂಬ ಪದ, is it parliamentary ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ಪಾರ್ಲಿಮೆಂಟರಿ, ಅನ್ ಪಾರ್ಲಿಮೆಂಟರಿ ಪ್ರಶ್ನೆ ಬರುವುದಿಲ್ಲ. ಈ ಇಲಾಖೆಗೆ ಬಂದಿರುವ ಕಳಂಕವನ್ನು ಇವರು ಹೋಗಲಾಡಿಸುತ್ತಾರೆಂದು ನಾನು ತಿಳಿದಿದ್ದೇನೆ. ಎಸ್ಟಿಮೇಟನ್ನು ರಿವೈಜ್‌ಮಾಡುವ ಒಂದು ಜಾಡ್ಯ ಎಲ್ಲಿಯವರೆಗೆ ನಮ್ಮಲ್ಲಿರುತ್ತದೋ ಅಲ್ಲಿಯವರೆಗೂ ಲಂಚರುಷುವತ್ತುಗಳ ಜಾಡ್ಯ ಹೋಗುವುದಿಲ್ಲ. ಹೋದಸಾರಿ ಇದೇ ಸಭೆಯಲ್ಲಿ ಎಸ್ಟಿಮೇಟುಗಳನ್ನು ರಿವೈಜ್ ಮಾಡುವ ಒಂದು ದೊಡ್ಡ ರೋಗವನ್ನು ಈ ಖಾತೆಯಿಂದ ಹೊಡೆದೋಡಿಸುವುದಕ್ಕೆ. ಸರ್ವಪ್ರಯತ್ನಮಾಡುತ್ತೇವೆಂದು ಭರವಸೆಕೊಟ್ಟರು. ಈ ಒಂದು ವರ್ಷದಲ್ಲಿ ಅನೇಕ ದೊಡ್ಡ ದೊಡ್ಡ ಎಸ್ಟಿಮೇಟುಗಳು ರಿವೈಜ್ ಆಗಿವೆ. ಮಂತ್ರಿಗಳ ಗಮನವನ್ನು ಆ ಕಡೆಗೆ ಸೆಳೆಯುತ್ತೇನೆ. ಎಸ್ಟಿಮೇಟುಗಳನ್ನು ರಿವೈಜ್ ಮಾಡುವುದು ಬಹಳ ಹೆಚ್ಚಾಗಿದೆ. ತ್ವರಿತ ತ್ವರಿತವಾಗಿ, ಅವಸರವಸರವಾಗಿ ಕಂಟ್ರಾಕ್ಟರುಗಳ ಬಲೆಗೆ ಬಿದ್ದು ಕಂಟ್ರಾಕ್ಟರುಗಳು ಎಸ್ಟಿಮೇಟುಗಳನ್ನು ಮಾರಿ ಹೋಗುವುದಕ್ಕೆ ಒಂದು ತಡೆ ಹಾಕಬೇಕೆಂದು ಮಂತ್ರಿಗಳಲ್ಲಿ ಸೂಚನೆ ಕೊಡುತ್ತೇನೆ. ನನ್ನ ಸ್ನೇಹಿತರಾದಂಥ ಶ್ರೀ ಮಾರಣ್ಣನವರು ಒಂದುಮಾತನ್ನು ಹೇಳಿದರು. ಅವರು ಈ ಖಾತೆಯಲ್ಲಿ ಇನ್ನೂ ಮಿರ್ಜಾಸಾಹೇಬರ ಕಾಲದಲ್ಲಿ ಮಾಡಿದ್ದಂಥ ಎಸ್ಟಿಮೇಟುಗಳು ಮತ್ತು ಅವರ ಕಾಲದಲ್ಲಿ ಮಂಜೂರಾಗಿ ಪ್ರಾರಂಭ ಮಾಡಬೇಕಾಗಿದ್ದಂಥ ಅನೇಕ ಎಸ್ಟಿಮೇಟುಗಳ ಕೆಲಸಕಾರ್ಯಗಳು ಇವತ್ತಿನವರೆಗೂ ಪೂರ್ಣವಾಗಿಲ್ಲವೆಂಬುದಾಗಿ ಹೇಳಿದರು. ಅದುನಿಜ. ಆ ರೀತಿ ಅವರು ಹೇಳಿದ್ದನ್ನು ಸಮರ್ಥನೆ ಮಾಡುವವನಲ್ಲಿ ನಾನೂ ಒಬ್ಬ. ತುಮಕೂರು ಜಿಲ್ಲೆಯಲ್ಲಿ ದಿವಾನ್ ಮಾಧವರಾವ್, ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್, ಶ್ರೀ ಕೆ. ಸಿ. ರೆಡ್ಡಿಯವರು, ಶ್ರೀ ಕೆ. ಹನುಮಂತಯ್ಯನವರು—ಇವರ ಕಾಲದಲ್ಲಿಯೇ ಮಾಡಬೇಕಾಗಿದ್ದಂಥ ಕೆಲಸಕಾರ್ಯಗಳು ಇನ್ನೂ ಪೂರ್ಣವಾಗಿಯೇ ಇಲ್ಲ. ಕೆರೆ ಕೊಡುವುದು, ಪಿಕಪ್ ನಾಲೆಗಳನ್ನು ಮಾಡುವುದು ಇಂತಹ ಅನೇಕ ಕಾರ್ಯಗಳು ನಡೆಯದೆ ಇವತ್ತು ಸಂಪೂರ್ಣವಾಗಿ ನಿಂತುಹೋಗಿವೆ. ನಾನು ಅಧಿಕಾರಿಗಳನ್ನು ದೂಷಣೆಮಾಡುವುದಿಲ್ಲ, ಮಂತ್ರಿಗಳನ್ನು ದೂಷಣೆಮಾಡುವುದಿಲ್ಲ. ಯಾವ ಇಲಾಖೆಯಲ್ಲಿ ಇಂತಹ ಕೆಲಸಗಳು ನಿಂತಿವೆಯೋ ಅಂತಹ ಕಡೆ ಇಲಾಖೆಯ ಕೆಳಗಿನ ಅಧಿಕಾರಿಗಳು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ.

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಇಲ್ಲದೇ ಹೋದರೆ, ಯಾವ ಯಾವ ಕ್ಷೇತ್ರದಲ್ಲಿ ಕಾಂಗ್ರೆಸ್ಸೇತರರು ಸೋತಿದ್ದಾರೋ ಅಲ್ಲಿ ಬೇರೆಯವರಿಗೆ ಒಂದು ಕೆಟ್ಟ ಹೆಸರನ್ನು ತರುವ ಉದ್ದೇಶದಿಂದ ಏನಾದರೂ ಇಂತಹ ಕೆಲಸಗಳನ್ನು ಮಾಡಿಸಬಾರದು ಎಂದು ನಿಲ್ಲಿಸಿದ್ದಾರೋ ಏನೋ ಎಂಬ ಅನುಮಾನ ನನಗೆ ಬಂದಿದೆ. ಇದು ನನಗಂತೂ ಅರ್ಥವಾಗುವುದಿಲ್ಲ. ಇದರ ಪಟ್ಟಿ ಕೊಡಬೇಕೆಂದರೆ ನನ್ನಲ್ಲಿ ಒಂದು ದೊಡ್ಡ ಪಟ್ಟಿ ಇದೆ. ಅದನ್ನು ನಾನು ಬರೆದು ಇಟ್ಟುಕೊಂಡಿದ್ದೇನೆ. ಆದಕ್ಕೋಸ್ಕರವಾಗಿ ಅಂಥಾದ್ದು ಏನಾದರೂ ಸರ್ಕಾರದವರು ಮನಸ್ಸುಮಾಡಿದ್ದರೆ, ಆ ಕೆಲಸ ಮಾಡಬಾರದು. ಅವರ ಕ್ಷೇತ್ರದಿಂದ ಚುನಾಯಿತರಾಗಿ ಬಂದುದು ಜನರ ತಪ್ಪು ಎಂದು ಆ ರೀತಿ ಮಾಡಬಾರದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊನ್ನೆತಾನೇ ಶ್ರೀ ಮುಕ್ಕಣ್ಣಪ್ಪನವರ ಕ್ಷೇತ್ರದಲ್ಲಿ ಮೂರು ಕೆಲಸಗಳನ್ನು ಪ್ರಾರಂಭಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅಧಿಕಾರಿಗಳ ಮೇಲೆ ಮತ್ತು ಮಂತ್ರಿಗಳ ಮೇಲೆ ದೂಷಣೆಮಾಡುವುದಿಲ್ಲ. ಅಂಥಾದ್ದು ಏನಾದರೂ ನಡೆದಿದ್ದರೆ, ಅದಕ್ಕೆ ಅವಕಾಶಕೊಡಬೇಡಿ. ಅದು ತಪ್ಪಾಗುತ್ತದೆ. ನಾನು ಯಾವ ಮಂತ್ರಿಗಳ ಹತ್ತಿರವೂ ಸರ್ವಸಾಮಾನ್ಯವಾಗಿ ಇದನ್ನು ಲಾರ್ಜರ್ ಇಂಟರೆಸ್ಟಿನಲ್ಲಿ ಏನಾದರೂ ಸಹಾಯಮಾಡಿಕೊಡಿ ಎಂದು ರೆಪ್ರಸೆಂಟ್ ಮಾಡಿದ್ದೇನೆಯೇ ಹೊರತು ಮಂತ್ರಿಗಳ ಚೇಂಬರಿನಲ್ಲಿ ವಸೂಲಿ ಬಾಜಿ ಕೆಲಸವನ್ನು ಮಾಡಲಿಲ್ಲ. ಸರ್ಕಾರವನ್ನು ತೆಗೆಯಬೇಕೆನ್ನುವ ಉದ್ದೇಶದಿಂದ ನಾನು ಮಾಡುತ್ತಿಲ್ಲ. ಹೀಗೆ ಏತಕ್ಕೋಸ್ಕರ ಹೇಳುತ್ತೇನೆಂದರೆ, ನನ್ನ ಕ್ಷೇತ್ರದಲ್ಲಿ ಇನ್ನೂ ಆಗಬೇಕಾಗಿರುವ ಕೆಲಸಕಾರ್ಯಗಳು ಹಾಗೆಯೇ ನಿಂತಿವೆ. ಅದಕ್ಕೋಸ್ಕರವಾಗಿ ಸರ್ಕಾರದವರು ಅಂತಹ ಮನಸ್ಸನ್ನೇನಾದರೂ ಮಾಡಿದ್ದರೆ, ಅದನ್ನು ಮಾಡಬಾರದು ; ಆ ರೀತಿಮಾಡುವದರಿಂದ ನಮ್ಮ ಆತ್ಮಕ್ಕೆ ನಾವೇ ವಂಚನೆಮಾಡಿದಂತಾಗುತ್ತದೆ; ಧರ್ಮದ ಹೆಸರಿನಲ್ಲಿ ರಾಜ್ಯಭಾರ ಮಾಡಬೇಕೆಂದು ಹೋದವರು ಧರ್ಮಕ್ಕೆ ವಿರೋಧವಾಗಿ ನಡೆಯಬಾರದು ಎಂದು ಪ್ರಾರ್ಥನೆ ಮಾಡುತ್ತೇನೆ. ನಾನು ಹಿಂದೆ ಭಾಷಣಮಾಡುವಾಗ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟನ್ನು ಬೇರೆ ಒಂದು ಡಿವಿಜನ್‌ಮಾಡಬೇಡಿ ; ಅದರಿಂದ ಅನೇಕ ಲೋಪ ದೋಷಗಳಿವೆ. ಅದನ್ನು ಅಮಾಲ್ಗಮೇಟ್‌ಮಾಡಿ. ಆಯಾ ಕ್ಷೇತ್ರದಲ್ಲಿರುವ ಎಗ್ಸಿಕ್ಯುಟಿವ್ ಇಂಜನಿಯರುಗಳಿಗೆ ಅದನ್ನು ವಹಿಸಿ ಎಂದು ಹೇಳಿದೆ. ಸರ್ಕಾರದವರು ಸಂಪೂರ್ಣವಾಗಿ ಆ ವಿಷಯವನ್ನು ಮನಸ್ಸಿಟ್ಟು ಮಾಡಲಿಲ್ಲ. ಆ ಕಾರ್ಯವನ್ನು ಮಾಡುವುದರಲ್ಲಿ ಅರೆಮನಸ್ಸಿನಿಂದಿದ್ದಾರೆ. ಈ ಎಲೆಕ್ಟ್ರಿಕ್ ಡಿವಿಜನ್ನಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಷ್ಟೋ ಕಡೆಗಳಲ್ಲಿ ಕಟ್ಟಡಗಳಿಗೆ ಸುಣ್ಣವನ್ನು 3 ವರ್ಷಗಳಿಂದಲೂ ಬಳಿದಿಲ್ಲ. ತಳಪಾಯ ಹಾಕಿ ಹಾಗೆಯೇ ಬಿಟ್ಟಿದ್ದಾರೆ. ದೇಶದ ಹಣ ಪೋಲಾಗುತ್ತಿದೆ. ಕಟ್ಟಡವನ್ನು ಕಟ್ಟಬೇಕೆಂದು ಉದ್ದೇಶ ಇವತ್ತಿನವರೆಗೂ ಈಡೇರಲಿಲ್ಲ. ಏತಕ್ಕೋಸ್ಕರ ಎಲೆಕ್ಟ್ರಿಕ್ ಡಿವಿಜನ್ ಎಂದು ಕ್ರಿಯೇಟ್‌ಮಾಡಿದ್ದಾರೋ ಗೊತ್ತಿಲ್ಲ. ಅದನ್ನು ರೆಗ್ಯುಲರ್ ಡಿವಿಜನ್ನಿನಲ್ಲಿ ಸೇರಿಸಿ, ಕಟ್ಟಡಗಳನ್ನು ಪೂರ್ಣಮಾಡುವ ಕೆಲಸದಲ್ಲಿ ಸರ್ಕಾರದವರು ಜಾಗ್ರತೆ ನಿರತರಾಗಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ. ನಾನು ಇದನ್ನು ಒಂದು ಸಾರಿ ಮಂತ್ರಿಗಳಿಗೆ ಹೇಳಿದ್ದೇನೆ. ಈಗ ಇರತಕ್ಕ ಡಿವಿಜನ್ re-organise ಮಾಡಿ ; Executive Division re-organise ಮಾಡಿ; ಎರಡು ತಾಲ್ಲೂಕುಗಳಿಗೆ ಒಂದು Sub-Division ಮಾಡಿ ಜನರಿಗೆ ಕೆಲಸವನ್ನು ಈಡೇರಿಸಿ ಕೊಡುವ ಹಾಗೆ ಮಾಡುವುದಕ್ಕೆ ಮನಸ್ಸು ಮಾಡಬೇಕೆಂದು ಸರಕಾರದಲ್ಲಿ ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ನಿವೃತ್ತ ಅಧಿಕಾರಿಗಳನ್ನು ಮತ್ತೊಮ್ಮೆ ನೇಮಕ ಮಾಡುವುದನ್ನು ಇನ್ನು ಮುಂದೆ ನಿಲ್ಲಿಸಿಬಿಡಬೇಕು. ಏನೇ ಕಾರಣ ಇರಲಿ ರಿಟೈರ್ ಆದವರನ್ನು ಪುನಃ ತೆಗೆದುಕೊಳ್ಳುವುದು ಸರಿಯಲ್ಲ. ಈ ಬಗ್ಗೆ ತಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. ಯುವಕರನ್ನು ತರಪೇತು ಮಾಡದೆ ಇರುವುದು ಒಳ್ಳೆಯದಲ್ಲ. ನಮಗೆ ಎಷ್ಟು ಅಧಿಕಾರಿಗಳು ಬೇಕೋ ಅಷ್ಟು ಯುವಕರಾದವರಿಗೆ ತರಪೇತಿ ಕೊಟ್ಟು ತಯಾರುಮಾಡಬೇಕು. ಇಲ್ಲದೇ ಹೋದರೆ ಕೆಲಸದಲ್ಲಿ ದಕ್ಷತೆಯು ಉಳಿಯುವುದಿಲ್ಲ; ಹೀನ ಸ್ಥಿತಿಗೆ ಬರುತ್ತದೆ. ಯುವಕರನ್ನು ಮುಂದಕ್ಕೆ ತರಬೇಕಾದರೆ, ಈ ರಿಟೈರ್ಡ್ ಅಧಿಕಾರಿಗಳಿಗೆ ಯಾವದೇ ದಾಕ್ಷಿಣ್ಯಕ್ಕೆ ಒಳಗಾಗಿ ಪ್ರೊಮೋಷನ್ ಕೊಡುವುದನ್ನು ನಿಲ್ಲಸಬೇಕು. ಅವರಿಗೆ ಪ್ರೊಮೋಷನ್ ಕೊಡುವುದು ಶುದ್ಧ ತಪ್ಪು. ಈ ರಿಟೈರ್ಡ್ ಆದವರನ್ನು ನೇಮಕ ಮಾಡುವುದಕ್ಕೆ ನೂರು ಸಾರಿ ಯೋಚನೆ ಮಾಡಬೇಕು. ಆಡಳಿತದಲ್ಲಿ ದಕ್ಷತೆ ಹೆಚ್ಚಾಗುವಹಾಗೆ ಯುವಕರನ್ನು ತೆಗೆದುಕೊಂಡು ಇಲಾಖೆಯನ್ನು revitalise ಮತ್ತು reorientation ಮಾಡಬೇಕು. ಚೀಫ್ ಎಂಜಿನಿಯರರು ಇದನ್ನೆಲ್ಲಾ ಮಾಡುತ್ತಾರೆ. ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

* ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮಿ, ಒಂದು ಮುಖ್ಯ ಅಂಶವನ್ನು ಸರಕಾರದ ಗಮನಕ್ಕೆ ತರಬೇಕೆಂದು ಕೆಲವು ಮಾತುಗಳನ್ನು ಹೇಳಲು ನಾನು ಅಪೇಕ್ಷೆಪಡುತ್ತೇನೆ. ಕಾವೇರಿ ನದಿಯ ನೀರಿನಿಂದ ವ್ಯವಸಾಯ ಮಾಡುವ ಪ್ರದೇಶಗಳ ಪೈಕಿ ಕೃಷ್ಣರಾಜಸಾಗರದ ಕೆಳಗೆ ಇರತಕ್ಕ ರೈತರಿಗೆ ಅತ್ಯಗತ್ಯವಾಗಿ ಆಗಬೇಕಾಗಿರುವ ಕೆಲವು ಕಾಮಗಾರಿಗಳ ವಿಷಯದ ಕಡೆಗೆ ಸರಕಾರ ಗಮನ ಕೊಡಬೇಕಾದುದು ಅತ್ಯಗತ್ಯವಾಗಿದೆ. ಕೃಷ್ಣರಾಜಸಾಗರದ ಕೆಳಗೆ ಇರತಕ್ಕ ಅನೇಕ low level channel ಗಳಲ್ಲಿ ಚಿಕ್ಕದೇವರಾಯ ನಾಲಾ, ರಾಮಪುರನಾಲಾ, ರಾಮಸ್ವಾಮಿ ನಾಲಾ ಹೀಗೆ ಹಲವಾರು ನಾಲೆಗಳ ಸ್ಥಿತಿ ಅಷ್ಟು ಸಮರ್ಪಕವಾಗಿಲ್ಲ. ನೂರು ವರ್ಷಗಳ ಹಿಂದೆ ತೆಗೆದ ಈ ನಾಲೆಗಳು ದುರಸ್ತಿಯಾಗದೆ, ಎಷ್ಟು ದೂರದವರೆಗೆ ನೀರು ಹರಿಯಬೇಕೋ ಅಷ್ಟು ನೀರು ಹರಿಯದೆ, ಕೊನೆಯ ಹಂತದಲ್ಲಿರುವ ಜಮೀನಿಗೆ ಸಾಕಷ್ಟು ನೀರು ಒದಗದೆ ತೊಂದರೆಯಾಗಿದೆ. ಚಿಕ್ಕದೇವರಾಯನ ನಾಲಾದ ಮೇಲೆ ಬನ್ನೂರ ಹತ್ತಿರವಿರುವ ದೊಡ್ಡ ಕೆರೆಗೆ ಸಾಕಷ್ಟು ರಿಪೇರಿ ವಗೈರೆ ನಡೆಯದೆ ಅದರ ನೀರು ಹಿಡಿಯುವ capacity ಕಡಮೆಯಾಗಿದೆ. ಅಲ್ಲಿಂದ ಕೆಳಗೆ ಹತ್ತು ಸಾವಿರ ಎಕರೆ ನೀರಾವರಿ ಜಮೀನು ಇದೆ. ಆದರೆ ಸಾಕಷ್ಟು ನೀರು ಒದಗುತ್ತಿಲ್ಲ. ಹೀಗೆಯೇ ಇತರ low level channel ಪರಿಸ್ಥಿತಿಯೂ ಸಹ ಆಗಿದೆ. ರಾಮಪುರ ನಾಲಾದಿಂದ ಕಪಿನಿ ನದಿಯ ಎಡ ನಾಲೆಯ ಕೆಳಗೆ ಇರತಕ್ಕ ಕೊನೆಯ ಹಂತದಲ್ಲಿರುವ ಜಮೀನುಗಳಿಗೆ

ನಾಲ್ಕಾರು ವರ್ಷಗಳಿಂದ ನೀರು ಒದಗದೇ ಇರುವುದರಿಂದ ಸಾಕಷ್ಟು ಫಸಲು ಆಗುತ್ತಿಲ್ಲ. ಸರಕಾರದ ಗಮನಕ್ಕೆ ಈ ವಿಚಾರವನ್ನು ತಂದಿರುವ ಉದ್ದೇಶವೇನೆಂದರೆ ಈ ನಾಲಾಗಳ ದುರಸ್ತಿ ಕೆಲಸ ಸಮರ್ಪಕವಾಗಿಲ್ಲ. ಪ್ರತಿವರುಷ ರೈತರಿಗೆ ತೊಂದರೆ ಯಾಗುತ್ತಾ ಇದೆ. ಸರಿಯಾಗಿ ದುರಸ್ತಿ ಕೆಲಸ ನಡೆಯದೇ ಇರುವುದಕ್ಕೆ ಒಂದೊಂದು ವರ್ಷ ಒಂದೊಂದು ಕಾರಣ ಹೇಳಲಾಗುತ್ತಿದೆ. ಈ ನಾಲಾ ಕೆಳಗೆ ಇರತಕ್ಕ ಭೂಮಿ ವಿಸ್ತೀರ್ಣ ಹೆಚ್ಚಾಗಿ ಏನೋ ಇದೆ. ನಾಲ್ಕಾರು ವರ್ಷಗಳಿಂದ ಸಾಕಷ್ಟು ನೀರು ದೊರೆಯುತ್ತಿಲ್ಲ. ಅದಕ್ಕೆ ಕಟ್ಟೆಯನ್ನು ಎತ್ತರಿಸಬೇಕು. ಹೆಚ್ಚು ನೀರು ಹರಿಯುವ ಹಾಗೆ ಮಾಡಬೇಕು. ನಾಲೆಗಳ ರಿಪೇರಿ ಕೆಲಸವನ್ನು ಸರಿಯಾಗಿ ಮಾಡಬೇಕು. ನೀರು ಸಾಕಷ್ಟು ದೊರೆಯದೇ ಇರುವುದರಿಂದ ಬೆಳೆ ಸರಿಯಾಗಿ ಬರುತ್ತಿಲ್ಲ. ಈ low level channel ರಿಪೇರಿ ಕೆಲಸಕ್ಕಾಗಿ ಸಾಕಷ್ಟು ಹಣವನ್ನು ಈ ಸಾರಿಯ ಆಯವ್ಯಯ ಪಟ್ಟಿಯ ಒದಗಿಸಿಲ್ಲ. ಈ ವಿಷಯದ ಬಗ್ಗೆ ಸರಕಾರ ಗಮನ ಕೊಡತಕ್ಕದ್ದು ಅತ್ಯಗತ್ಯವಾಗಿದೆ. ಬೇಸಿಗೆ ಕಾಲದಲ್ಲಿ ಈ ದುರಸ್ತಿ ಕೆಲಸ ಮಾಡಲು ಸಾಕಷ್ಟು ಅವಕಾಶವಿದೆ. ಆದುದರಿಂದ ಸರಕಾರದವರು ಕೂಡಲೇ ಗಮನ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಕೃಷ್ಣರಾಜಸಾಗರ ನಾಲಾ ಕಟ್ಟುವಾಗ ಮದ್ರಾಸ್ ಸರಕಾರಕ್ಕೂ ಮೈಸೂರು ಸರಕಾರಕ್ಕೂ ಒಂದು ಒಪ್ಪಂದವಾಗಿದೆ. ಪರಿಣತರು ವಿಮರ್ಶೆ ಮಾಡಿದನಂತರ ಈ ಒಪ್ಪಂದವಾಗಿದೆ. ಈ ಒಪ್ಪಂದದಿಂದ ಮೈಸೂರು ಸರ್ಕಾರಕ್ಕೆ ಅಷ್ಟು ಅನುಕೂಲವಾಗಿಲ್ಲ. ಆದರೆ ಪ್ರತಿಕೂಲವಾಗಿದೆ. ಬಹಳ ತೊಂದರೆಯೂ ಆಗುತ್ತಾ ಇದೆ. ಈ ವಿಚಾರವನ್ನು ಹಲವಾರು ಸಲ, ಪ್ರತಿನಿಧಿಗಳೂ, ಪರಿಣತರೂ ಸರಕಾರದ ಗಮನಕ್ಕೆ ತಂದಿದ್ದಾರೆ. ಸರಕಾರಕ್ಕೂ ಇದು ಗೊತ್ತಿದೆ. ಆದುದರಿಂದ ಈ ಒಪ್ಪಂದವನ್ನು ಬದಲಾವಣೆ ಮಾಡುವುದಕ್ಕೆ ಸರಕಾರ ಏನು ಮಾಡಿದ್ದಾರೆ? ಪ್ರತಿಕೂಲವಾಗಿರುವ ಈ ಒಪ್ಪಂದವನ್ನು ತಿದ್ದುಪಡಿ ಮಾಡಿ, ಬೇಕಾದಷ್ಟು ನೀರನ್ನು ಒದಗಿಸಲು ಏನು ಪ್ರಯತ್ನ ಮಾಡಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ಸ್ವಲ್ಪಮಟ್ಟಿಗೆ ನಮಗೆ ತಿಳಿಸಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ. 1945 ರಲ್ಲಿ ಕೃಷ್ಣರಾಜಸಾಗರದಲ್ಲಿನ ನೀರು ಒಣಗಿ ಹೋಯಿತು ಎಂದು ಅದರ ಪರಿಶೀಲನೆಗಾಗಿ ಆಗ ಒಂದು ಸಮಿತಿಯನ್ನು ನೇಮಕಮಾಡಲಾಗಿತ್ತು. ಆ ಸಮಿತಿಯ ಅಭಿಪ್ರಾಯದ ಪ್ರಕಾರ ಈ ಒಪ್ಪಂದವು ಮೈಸೂರು ಸರಕಾರಕ್ಕೆ ತುಂಬಾ ಪ್ರತಿಕೂಲವಾಗಿದೆ. ಈ ಒಪ್ಪಂದವನ್ನು ತಿದ್ದುಪಡಿ ಮಾಡಲು ಸರಕಾರ ಪ್ರಯತ್ನಮಾಡಬೇಕು. 1924ರಲ್ಲಿ ಆಗಿರುವ ಈ ಒಪ್ಪಂದವನ್ನು 50 ವರ್ಷಗಳನಂತರ ಅಂದರೆ 1974ರಲ್ಲಿ ಪುನರ್ ವಿಮರ್ಶೆ ಮಾಡುವುದಕ್ಕೆ ಒಂದು ಅವಕಾಶವಿದೆ. ಆದರೆ 1924ರಲ್ಲಿ ಇದ್ದ ಇಂಡಿಯಾದೇಶದ ರಾಜಕೀಯ ಪದ್ಧತಿಗೂ, ಈಗ ಇರತಕ್ಕ ರಾಜಕೀಯ ಪದ್ಧತಿಗೂ ಬಹಳ ವ್ಯತ್ಯಾಸವಿದೆ. ಮೈಸೂರು ಒಂದು ಸಂಸ್ಥಾನವಾಗಿದ್ದರೆ ಆಗ ನೆರೆ ಪ್ರಾಂತವಾದ ಮದ್ರಾಸಿನಲ್ಲಿ ಬ್ರಿಟಿಷರ ಆಡಳಿತ ಇತ್ತು. ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಾಗಿದೆ. ಆದುದರಿಂದ ಈ ಒಪ್ಪಂದದ ಬಗ್ಗೆ 1974ರ ವರೆಗೆ ಕಾಯುತ್ತಾ ಕುಳಿತುಕೊಳ್ಳುವುದು ಸರಿಯಲ್ಲ. ಈಗ ಅಂಕಿಅಂಶಗಳನ್ನು ಸಂಗ್ರಹಿಸಿ ಯಾವದೇ ರೀತಿಯಲ್ಲೂ ಮೈಸೂರು ರಾಜ್ಯಕ್ಕೆ ಅನನುಕೂಲವಾಗದಹಾಗೆ ಪ್ರಯತ್ನ ಮಾಡಬೇಕು. ಕಾವೇರಿ ನದಿಯ ನೀರು ಎಷ್ಟರಮಟ್ಟಿಗೆ ಸಾಲಬಹುದು ಎಂಬುದನ್ನು ಆಲೋಚಿಸಬೇಕು. ಈ ಪ್ರಶ್ನೆಯನ್ನು ಬಿಡಿಸಲು ಇಂಡಿಯಾ ಸರಕಾರದವರು ಮಧ್ಯೆ ಬರಬೇಕಾಗುತ್ತದೆಂದು ಕಾಣುತ್ತದೆ. ನಮಗೆ ಅನುಕೂಲವಾಗುವ ರೀತಿಯಲ್ಲಿ ಈ ಒಪ್ಪಂದವನ್ನು ತಿದ್ದುಪಡಿ ಮಾಡುವುದು ಅಗತ್ಯವಾಗಿದೆ. ಇದನ್ನು ಕೂಡಲೇ ಮಾಡಬೇಕೆಂದು ಪರಿಣತರು ರಿಪೋರ್ಟಿನಲ್ಲಿ ಹೇಳಿದ್ದಾರೆ.

2-30 P.M.

ಕೃಷ್ಣರಾಜಸಾಗರದಿಂದ 1ಲಕ್ಷ 20 ಸಾವಿರ ಎಕರೆ ವ್ಯವಸಾಯ ಮಾಡುವುದಕ್ಕೆ ಅವಕಾಶ ಇದೆ. ಕೃಷ್ಣರಾಜಸಾಗರದ ಹಂತ ಅಲ್ಲದೆ, ವಿಶ್ವೇಶ್ವರಯ್ಯ ನಾಲಾ ಹಂತ ಅಲ್ಲದೆ, ಬೇರೆ ಹಂತದಲ್ಲಿ ಎಂದರೆ ಕಾವೇರಿ ವ್ಯಾಲಿಯಲ್ಲಿ ಸುಮಾರು ಒಂದು ಲಕ್ಷ ಹತ್ತು ಸಾವಿರ ಎಕರೆವರೆಗೂ ಕೂಡ ನೀವು ಹೊಸ ಜಲಾಶಯಗಳನ್ನು ನಿರ್ಮಿಸಿ, ಹೊಸ ಅಣೆಕಟ್ಟುಗಳನ್ನು ಹಾಕಿ ನೀರಾವರಿಗೆ ಉಪಯೋಗಿಸಲು ಅವಕಾಶವಿದೆ. ಇದನ್ನು ಏನಾದರೂ ಮಾಡಿ ಒತ್ತಾಯವಾಗಿ 1974ರ ಹೊತ್ತಿಗಾದರೂ ಮಾಡಲೇಬೇಕು. ಆಗ ಪುನಃ, ನಮಗೂ ಮದರಾಸ್ ಸರ್ಕಾರಕ್ಕೂ ಆಗಿರತಕ್ಕ ಒಪ್ಪಂದವನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಒಂದು ಲಕ್ಷ ಹತ್ತು ಸಾವಿರ ಎಕರೆ ಜಮೀನನ್ನು ಹೊಸದಾಗಿ ತರೀ ಜಮೀನನ್ನಾಗಿ ಮಾಡುವುದಕ್ಕೆ ಮುಂದೆ ಏನು ಕಾರ್ಯಕ್ರಮ ಕೈಕೊಂಡಿದ್ದೀರಿ. ಎಷ್ಟು ದೂರ ಹೋಗಿದ್ದೀರಿ, ಎನ್ನುವ ವಿಚಾರ ನನಗಾದರೂ ತಿಳಿಯದು. ಈಗಿರುವ ಪರಿಸ್ಥಿತಿಯಲ್ಲಿ ಅಲ್ಲಿ 35-40 ಸಾವಿರ ಎಕರೆಗಿಂತ ಹೆಚ್ಚಾಗಿ ಆಗಿರಲಾರದು, ಆ ದಾರಿಯಲ್ಲಿ ಇನ್ನೂ ಬಹಳ ದೂರ ಹೋಗಬೇಕು, ಮೊದಲನೆ ಪಂಚವಾರ್ಷಿಕ ಯೋಜನೆಗಿಂತ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕಪಿನಿ ಜಲಾಶಯದ ವಿನಾ ಬೇರೆಯಾವುದೂ ಪ್ರಮುಖವಾದ ಜಲಾಶಯ ಕಾವೇರಿ ವ್ಯಾಲಿಯಲ್ಲಿ ಆಗುವುದಕ್ಕೆ ಅವಕಾಶವಾಗಿಲ್ಲ. ಆದ್ದರಿಂದ ಈ ಒಂದು ಲಕ್ಷ ಹತ್ತು ಸಾವಿರ ಎಕರೆಯನ್ನು ಯಾವರೀತಿ ಅಚ್ಚುಕಟ್ಟಾಗಿಮಾಡಿ ತರೀ ವ್ಯವಸಾಯಕ್ಕೆ ನೀರನ್ನು ಉಪಯೋಗಿಸಿಕೊಳ್ಳಬೇಕು ಎನ್ನುವುದನ್ನು ಸರ್ಕಾರದವರು ಶೀಘ್ರವಾಗಿ ಆಲೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಅವರಲ್ಲಿ ಬಿನ್ನೈಸಿಕೊಳ್ಳುತ್ತೇವೆ.

ಇನ್ನೊಂದೇ ಒಂದು ವಿಚಾರ ಪ್ರಸ್ತಾಪವಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಕೃಷ್ಣರಾಜಸಾಗರದ ಅಣೆಕಟ್ಟು ಆದಮೇಲೆ ವಿಶ್ವೇಶ್ವರಯ್ಯ ನಾಲೆಯಲ್ಲೂ ಕೂಡ ಅಲ್ಲಿ ನಡೆದಿರುವ ಕೆಲವು ಕಾರ್ಯಕ್ರಮಗಳಿಂದ ಅದು ನಿರ್ಮಾಣವಾದ ಕಾಲದಲ್ಲಿ ಯಾವರೀತಿ ಯೋಚನೆ ಮಾಡಿದ್ದರೋ ಆ ರೀತಿ ನಡೆಯುವುದಕ್ಕೆ ಆಗಲಿಲ್ಲ. ಆದ್ದರಿಂದ ಹಿಂದೆ ನಡೆಯಲಿಲ್ಲ ಅಥವಾ ಹಿಂದೆ ಮಾಡಿದ್ದು ತಪ್ಪು ಎಂದು ನಾನು ಸೂಚನೆ ಮಾಡುತ್ತಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಹಿಂದೆ ಕೃಷ್ಣರಾಜಸಾಗರದ ಅಣೆಕಟ್ಟಿನಿಂದ ಎಷ್ಟು ಜಮೀನು ನೀರಾವರಿಗೆ ಬರುತ್ತದೆಂದು ನಿರೀಕ್ಷಣೆಮಾಡಿ ಅದಕ್ಕೆ ವಾಸ್ತವವಾಗಿ ಎಷ್ಟು ವಿಸ್ತೀರ್ಣಕ್ಕೆ ನೀರು ಒದಗಿಸಿದರೋ ಅದಕ್ಕಿಂತಲೂ ಹೆಚ್ಚು ಜಮೀನು ನೀರಾವರಿ ಆಗುವುದಕ್ಕೆ ಪ್ರಯತ್ನ ಮಾಡಬೇಕಾದದ್ದು ಅತ್ಯಗತ್ಯವಾಗಿದೆ. ಸುಮಾರು 27-28 ವರ್ಷಗಳ ಕಾಲದಲ್ಲಿ ನೀರಾವರಿ ಎಷ್ಟಿತ್ತೋ ಇವತ್ತಿಗೂ ಅಷ್ಟೇ ಇದೆ. ಒಂದು ಲಕ್ಷ ಎಕರೆಮಾತ್ರ ನಾಲ್ಕು-ಐದು ಸಾವಿರ

(ಶ್ರೀ ಕೆ. ಪುಟ್ಟಸ್ವಾಮಿ)

ಹೆಚ್ಚುಕಮ್ಮಿ ಇರಬಹುದು. ಕಾರಣಾಂತರದಿಂದ ಸರಿಯಾದ ಅಂಕಿಅಂಶ ದೊರೆಯುತ್ತಿಲ್ಲ. 1927ರಲ್ಲಿ ನಮ್ಮ ದೇಶದಲ್ಲಿ ಬಹಳ ಮಾನ್ಯರಾದಂಥ ಸರ್. ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದರು. ಅವರು ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ವ್ಯವಸಾಯ ಮಾಡಬಹುದು ಎಂದು ಹೇಳಿದ್ದರು. ಅದು ಬಹಳ ಹಿಂದಿನಕಾಲದ ರಿಪೋರ್ಟು, ಅದ್ದರಿಂದ ಏನೂ ಪ್ರಯೋಜನವಾಗಲಾರದು. ಇವತ್ತು ಇರತಕ್ಕ ವಾಸ್ತವವಾದಂಥ ಸಂಗತಿಯನ್ನು ಯಾವುದೋ ಒಂದು ಕಾರಣದಮೇಲೆ ನಿರಾಕರಿಸುವುದು ಬೇಡ. ಈ ಹಿಂದೆ ಒಂದುದಿನ ಯಾವುದೋ ಒಂದು ಪ್ರಶ್ನಾವಳಿ ಕಾಲದಲ್ಲಿ ನಾನು ಸಚಿವವರಿಗೆ ಒಂದು ವಿಚಾರ ಹೇಳಿದೆ. 16 ತಿಂಗಳು, 17 ತಿಂಗಳು, 18 ತಿಂಗಳು ಕಬ್ಬು ಬೆಳೆಯುತ್ತದೆ ಎಂದು ನಿರೀಕ್ಷೆ ಮಾಡಬಹುದು. 40 ಸಾವಿರ ಎಕರೆ ಕಬ್ಬು, 40 ಸಾವಿರ ಎಕರೆ ಬತ್ತ 40 ಸಾವಿರ ಎಕರೆ ಡ್ರೈಕ್ರಾಪ್—ಒಟ್ಟು 120 ಸಾವಿರ ಎಕರೆ ಆಗುತ್ತದೆ. ಮೊದಲು 16 ತಿಂಗಳು ಕಬ್ಬು ಹಾಕಿ ಆಮೇಲೆ semi-dry crop ಹಾಕುವುದರಿಂದ ಉಳಿದ ಏಳು-ಎಂಟು ತಿಂಗಳು semi-dry crop ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ 40 ಸಾವಿರ ಎಕರೆ ಕಬ್ಬು, 40 ಸಾವಿರ ಎಕರೆ ತರೀ ಮತ್ತು 40 ಸಾವಿರ ಎಕರೆ semi dry crop ಹಾಕಬಹುದು ಎಂದು ಹೇಳುವುದೇನಿದೆ, ಅದನ್ನಷ್ಟು ಆಚರಣೆಗೆ ತರಲು ಯೋಗ್ಯವಾದಂಥ ಪರಿಸ್ಥಿತಿ ಇಲ್ಲ ಎಂದು ನಾವು ಭಾವಿಸಬಾರದು ಎಂದು ಹೇಳುತ್ತೇನೆ. ಆ ಸ್ಥಳದ ಜನರಿಗೆ ಅಲ್ಲಿನ ತೊಂದರೆ ಎಷ್ಟಿತ್ತು ಎಂಬುದು ಗೊತ್ತು ಮತ್ತು ನೀರಿನ ಬೆಲೆ ಎಷ್ಟು ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ನಮ್ಮ ಕಣ್ಣೆದುರಿಗೆ ಬೆಂಗಾಡಾದ ಪ್ರದೇಶದಲ್ಲಿದ್ದ ಮಾನ್ಯ ಸಚಿವರಿಗೆ ಈ ವಿಚಾರ ಹೆಚ್ಚಾಗಿ ಗೊತ್ತಿರುವುದರಿಂದ ಈ ವಿಷಯದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

Dr. K. K. HEGDE (Karkal).—Mr. Speaker, Sir, I rise to support the Demands for Civil Works. While going through the budget, I was very happy to note that there had been an increase in allotment under this head and for that I congratulate the Hon'ble Minister for Public Works and the Engineering Department for impressing upon the Finance Department the need for an increased allotment. I am also told that the Central Government have provided us ample grants for the West Coast roads, for which I thank the Central Government too. As the House knows, communications are the backbone of industrial development. We have in our State vast resources of mineral and forest wealth waiting to be exploited. To facilitate industrial progress and agricultural development and the exploitation of the numerous other resources, a good net-work of roads and a good mileage of railways are necessary. I am confident that the Government will bear this point in mind and draw up a plan to have a fine net-work of roads and also form new roads.

At this juncture, I would like to bring to the notice of Government that the old classification of roads are out-moded and require revision. I hope the department will make a new code and have a fresh classification. Further, looking to the statistics that are placed before us, we find that there are some districts which are having a few mileage of roads. For instance, there are 5 or 6 districts having less than 500 miles of roads. So, while drawing up an overall plan for the State, I would request the Department and the concerned Minister to bear these things in mind.

Coming to my district, I am reminded of an eminent physician whose junior asked him what all things are necessary for the treatment of diseases. He informed his junior that three things are necessary, namely, first diagnosis, second diagnosis and third diagnosis. About the needs of my district also, I may say that three things are necessary, namely, communications, communicastions and communications. I say thi just to impress upon the Hon'ble Minister the necessity for improving the roads. Though my district is a coastal one it has got two areas, namely, the coastal area and the Malnad Area. It is traversed by 20 big rivers which have got tributaries when we approach the ghats. These tributaries or rivulets divide the vast stretch of land into small islands which are cut away from outside for more than 6 months in a year. Though we have a vast stretch of land which can be cultivated, it is left uncultivated. I am saying this just to impress upon the Minister for Public Works the need for communications in my district. Further, I am glad to note that the Government have set up a Malnad Board. I am yet to know the duties and functions of that Board. Anyway, I am sure that that Board will take into consideration the importance of communications in that area. Further, my district has got

about 100 miles of coast with 5 or 6 fairly good ports which form an outlet for our State. Such being the case, I personally feel that it is all the more necessary that communications should be developed in my district. In this connection, I am glad to learn that almost all the rivers along the coast are to be bridged sooner except perhaps the two rivers, namely, the Netravati and Gangotri. I understand that even the bridge over Netravati has been sanctioned. I would, therefore, request the Minister for Public Works to press Central Government to expedite the sanction of the estimates for Gangotri. Iam also thankful to the State Government as well as the Central Government for sanctioning the Sankalikariya and Shirthadi Bridges. I would, however, like to know the fate of the Alevoor Bridge that was taken up long ago about 5 or 6 years ago. This has been recommended under the Central Road Fund. I do not know in what stage it is. I request that I may be enlightened about it. I would also bring to the notice of the Minister two important roads that go almost through the heart of the Malnad area in my district, namely, Guruvayinkera-Naravi-Hosman Mala-Kervasee-Ajekar Road and the Malur Ghat Road.

If these two roads are taken up, I can tell the Hon'ble Minister that almost half the Malnad Area will be opened up and developed. I am glad that a token grant has been provided for in the lump sum allotment. Though it is a token grant, I hope Government will take it up in right earnest and complete it in the near future and thus come to the aid of the Malnad people.

Coming to the conditions of roads in my district, I do not say that they are bad. About 800 miles of roads that are under the Highway Department are really good, but about 700 and odd miles of roads under the district boards are really bad. I do not say that the Administration is so bad as to bring about that condition, but the allotment of Rs. 2.25 lakhs to the local boards for this purpose for looking after 700 and odd miles of road is very meagre as compared with the yearly recurring expenditure of Rs. 7 lakhs incurred by the Highway Department. Under these circumstances, I request the Government to take over as many miles of roads as possible and give ample grants to the local bodies to maintain these roads in a good condition. I am glad to know that the Government are taking over 100 and odd miles in my district for which I thank the Government.

There is another class of roads in my district 300 to 400 miles in length which are constructed by the villagers. The bridges across them have been constructed under the Local Development Works, N.E.S. and Community Development Project. I do not know under whose care they are now and who are their guardians. I would like to draw the attention of the Government to these roads and see that they are properly maintained.

Though I am confident that the Engineering Department will never allow even a naya paisa to lapse, so far as my district is concerned which has got only 7 working months because of heavy rains, I am afraid some amount may lapse. But I am sure that with timely allotment of funds and with the allotment of proper personnel, they will do their best and see that every pie is availed of and that want of personnel or any such thing will not come in their way.

I want to impress upon the Minister for Public Works that he will have to use his good office and see that ample railway mileage is given to us and that the Hassan-Mangalore Railway is taken up soon.

I also request the Public Works Minister to prevail upon the Finance Department to make bigger allotments next year and take up more works in the years to come. I am sure that, realising the importance of communications, the Finance Department will never fail in this respect. With these remarks, I thank the Speaker for permitting me to speak for a few minutes.

3 P.M.

[MR. DEPUTY SPEAKER in the Chair]

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲೆಲ್ಲ ಇರುವ ಡಿಪಾರ್ಟ್

(ಶ್ರೀ ಜಿ. ಎನ್. ಪುಟ್ಟಣ್ಣ)

ಮೆಂಟುಗಳಲ್ಲಿ ಅತಿಮುಖ್ಯವಾದ ಡಿಪಾರ್ಟ್‌ಮೆಂಟು ಎಂದರೆ ಈ ಪಿ. ಡಬ್ಲ್ಯೂ. ಡಿ. ಡಿಪಾರ್ಟ್‌ಮೆಂಟು ಎಂದು ನಾನು ತಿಳಿದುಕೊಂಡಿದ್ದೇನೆ. ಇದು ತಪ್ಪೋ, ಸರಿಯೋ, ಗೊತ್ತಿಲ್ಲ. ಏಕೆಂದರೆ, ಪಿ. ಡಬ್ಲ್ಯೂ. ಡಿ. ಇಲಾಖೆ ಇಲ್ಲದಿದ್ದರೆ ಯಾವ ಡಿಪಾರ್ಟ್‌ಮೆಂಟೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಅಂತಹ ಮುಖ್ಯವಾದ ಈ P.W.D. ಡಿಪಾರ್ಟ್‌ಮೆಂಟಿನ ಶಾಖಾಧಿಕಾರಿಗಳು ಇಲ್ಲಿಗೆ ಬಂದಿಲ್ಲ ಎಂದು ಕೆಲವರು ಹೇಳುತ್ತಿದ್ದರು. ಹಾಗಿಲ್ಲ; ಡೆಪ್ಯುಟಿ ಚೀಫ್ ಇಂಜನೀಯರು ಬಂದಿದ್ದಾರೆ. ಈಗ ನಮ್ಮ ಈ ಇಲಾಖೆಯ ಚೀಫ್ ಇಂಜನೀಯರವರೇ ಬಂದು ಒಳ್ಳೆ ಗಣಪತಿಯ ಹಾಗೆ ಕುಳಿತಿದ್ದಾರೆ. ನಾವು ಕೊಡುವ ಸಲಹೆಗಳನ್ನೆಲ್ಲ ತೆಗೆದುಕೊಂಡು ಪರಿಶೀಲಿಸುತ್ತಾರೆ ಎಂದು ನನಗೆ ನಂಬಿಕೆ ಇದೆ.

ಹಿಂದೆ ನಮ್ಮ ಪ್ರದೇಶದಲ್ಲಿ ಪ್ರಖ್ಯಾತ ಇಂಜನಿಯರೂ ದಿವಾನರೂ ಆಗಿದ್ದ ಮಹಾನುಭಾವ ಶ್ರೀ ಸರ್. ಎಂ. ವಿಶ್ವೇಶ್ವರಯ್ಯನವರು ನಮ್ಮ ದೇಶಕ್ಕಾಗಿ ಮಾಡಿದ ಕೆಲಸ ಎಲ್ಲರಿಗೂ ನೆನಪಿರಬಹುದು. ನಾವೆಲ್ಲ ನೋಡಿದಂತೆ ಮಂಡ್ಯ ಜಿಲ್ಲೆಯಲ್ಲಿ ಜನಗಳು ಹಳ್ಳಿಯ ಜನಗಳಂತೆ ರಾಗಿ ಕಾಳಿನ ಮುದ್ದೆ ತಿಂದು ಜೀವನ ನಡೆಸುತ್ತಿದ್ದರು. ಇಂಥ ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಂಪೆನಿಯನ್ನು ಸ್ಥಾಪಿಸಿ, ನಾಲಾಗಳನ್ನು ತೋಡಿಸಿ ಚಿನ್ನದ ಹೊಗೆಯಂತೆ ಹರಿಯಲು ಅವಕಾಶ ಮಾಡಿಕೊಟ್ಟಂತಹ ಮಹಾ ವ್ಯಕ್ತಿಗಳು ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರು. ಇಂತಹ ಮಹಾ ವ್ಯಕ್ತಿಗಳ "Photo"ವನ್ನು ನಮ್ಮ ಅಸೋಸಿಯೇಷನ್ ಪಾರ್ಟಿಯ ಲೌಂಜಿನಲ್ಲಿ ಒಂದು ಕಡೆ ಇಟ್ಟಿದ್ದಾರೆ. ಆದರೆ ನಾನು ಹೇಳುವುದು ಇಂತಹ ಮಹಾನುಭಾವರ ಫೋಟೋವನ್ನು ಇಟ್ಟಿರುವ ಸ್ಥಳ ಸರಿಯಾಗಿಲ್ಲ. ಇದನ್ನು ಬದಲಾಯಿಸಬೇಕು.

ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಅನೇಕ ನ್ಯೂನಾತಿರೇಕಗಳಿವೆ. ಈಗ, ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಕಟ್ಟಲು ಒಂದೂವರೆ ಕೋಟಿ ರೂಪಾಯಿಗಳ ಖರ್ಚಿನಲ್ಲಿ ಎಸ್ಟಿಮೇಟಾಗಿತ್ತೆಂದು ಕೇಳಿದೆ. ಆದರೆ ಈ ಎಸ್ಟಿಮೇಟಿನ ಷೆಡ್ಯೂಲ್ ಆಫ್ ರೇಟುಗಳಲ್ಲಿ ಶೇಕಡ 15ರಷ್ಟು ಜಾಸ್ತಿ ಹಾಕಿ, ಅನಂತರ ಅದರ ಮೇಲೆ ಪುನಃ ಶೇಕಡ ಹದಿನೈದರಷ್ಟು ಜಾಸ್ತಿಯಾಗಿದೆ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಮೂವತ್ತು ಪರ್ಸೆಂಟು ಜಾಸ್ತಿಯಾಗಿದೆ ಎಂದು ಹೇಳುತ್ತಾರೆ. ಇದು ಸುಳ್ಳೋ ನಿಜವೋ ಗೊತ್ತಿಲ್ಲ. ಇದನ್ನು ಪರಿಶೀಲಿಸಬೇಕು. ಮತ್ತು ಇದರ ಬಗ್ಗೆ ವಿಮರ್ಶೆ ಮಾಡಿ, ಉತ್ತರ ಕೊಡಬೇಕೆಂದು ಕೇಳುತ್ತೇನೆ.

P. W. D. grant ಗಳನ್ನು ಕೊಡುವಾಗ ಅನೇಕ ಇಲಾಖೆಗಳಲ್ಲಿ ನಮ್ಮ ಮಂತ್ರಿಗಳು ಹೇಳಿದ ಹಾಗೆ "ವಶೀಲಿಬಾಜಿ" ನಡೆಯುತ್ತಿದೆ. ಯಾವ ಯಾವ ಪ್ರದೇಶಗಳಲ್ಲಿ ಪ್ರಭಾವ ಬೀರಬಲ್ಲ ಜನರಿರುತ್ತಾರೋ ಆ ಕಡೆಗೆ ಮಾತ್ರ ಗ್ರಾಂಟುಗಳನ್ನು ಕೊಟ್ಟು ಕೆಲಸಗಳನ್ನು ಮಂಜೂರು ಮಾಡಲಾಗುತ್ತಿದೆ. ಸರಕಾರ ಎಂದರೆ ಸರ್ವರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ಸರಕಾರಕ್ಕೆ ಪ್ರತಿಯೊಬ್ಬ ರೈತನಿಂದಲೂ ಒಂದೊಂದು ನಯಾ ಪೈಸಾ ಕೊಡಬೇಕಾದರೂ ಅವನು ತನ್ನ ರಕ್ತವನ್ನೆಲ್ಲ ಸುರಿದು ಕಷ್ಟಪಟ್ಟು ಸರ್ಕಾರಕ್ಕೆ ಕೊಟ್ಟಿರುತ್ತಾನೆ. ಆದ್ದರಿಂದ ಈ ತರಹ ಅನ್ಯಾಯಗಳು ಈ ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ತಪ್ಪಬೇಕು. ಈ ತರಹ ಅನ್ಯಾಯಗಳು ಈ ಇಲಾಖೆಯಲ್ಲಾಗಲು ಕಾರಣವೇನೆಂದರೆ ಪೂಜಾರಿಗಳ ಹಾವಳಿ ವಿಪರೀತವಾಗಿ ಹೋಗಿದೆ. ಆಫೀಸರುಗಳಾಗಿರುವವರು ಇವರನ್ನು ಅನುಸರಿಸಿಕೊಂಡು ಹೋಗದೆಹೋದರೆ ತೊಂದರೆಯಾಗುತ್ತದೆ. ಈ ಆಫೀಸರುಗಳಿಗೆ ಧೈರ್ಯವೇ ಇಲ್ಲ. ಈ ಶಾಖೆಯಲ್ಲಿರುವ ಆಫೀಸರುಗಳು ಯಾರ ದಾಕ್ಷಿಣ್ಯಗಳಿಗೂ ಒಳಗಾಗದೆ ಧೈರ್ಯದಿಂದ ಕೆಲಸ ಮಾಡದಿದ್ದರೆ ಇಂತಹ ಆಫೀಸರುಗಳಾಗಿ ಏಕೆ ಬರಬೇಕು ಎಂದು ನಾನು ಕೇಳಬೇಕಾಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಸಾಂಗೆ ಹಳ್ಳಿ ಅಮಾನಿ ಕೆರೆಯನ್ನು 1888ರಿಂದಲೂ ರಿಪೇರಿ ಮಾಡುತ್ತೇವೆಂದು ಹೇಳುತ್ತಿದ್ದರೂ ಏನೂ ಆಗಲಿಲ್ಲ. ಇದರಿಂದ ಮೂರು ಕಾಸಿನ ಬೆಳೆಯೂ ಆಗಲು ಸಹಾಯವಾಗಲಿಲ್ಲ. ಹಾಗೆಯೇ ಇನ್ನೂ ಕೆಲವು ಕೆರೆಗಳು, ಕೊಂಡಜ್ಜಿ ಸೋರೆಕುಂಟೆ, ಅಚ್ಯುತನಹಳ್ಳಿ, ಶಂಭೋನಹಳ್ಳಿ, ಮೊಳೆಕೋಟೆ ಯಲ್ಲಿರುವ ದೊಡ್ಡ ಕೆರೆ ಮತ್ತು ಚಿಕ್ಕೆರೆ ಮತ್ತು ಕುಂತುಪನಹಳ್ಳಿ ಇಲ್ಲಿರುವ ಕೆರೆಗಳಿಗೆ ಎಷ್ಟೋ ಕಡೆ ಎಸ್ಟಿಮೇಟಾಗಿದ್ದರೂ ಈಗೇಕೋ ಇವೆಲ್ಲ ಬಿಟ್ಟುಹೋಗಿವೆ. ಕೆಲಸವೂ ಆಗಲಿಲ್ಲ. ಕಾರಣವೂ ತಿಳಿಯಲಿಲ್ಲ.

[SRI N. HUCHMASTI GOWDA went to the dais.]

SRI C. J. MUCKANNAPPA.—I rise to a point of order, Mr. Speaker. Is it permissible for any member to go to the dais when the Assembly is in Session except the officials concerned? Except the Secretary and the officials concerned, none is allowed to the dais; because once the Speaker in the Lok Sabha observed that it was wrong for even the Secretary to go to the dais. Even the Leader of the House cannot go to the dais. Unless the Speaker permits the Secretary, even the Secretary should not go to the dais. It has got such a sanctity. I request the Chair to give a ruling regarding the Point of Order raised. I know that no member of the House has access to the Chair when the Assembly is in session.

MR. DEPUTY SPEAKER.—Yes, I agree with the Hon'ble Member that no member of the house should have access to the Chair while in Session.

SRI C. J. MUCKANNAPPA.—We have followed many practices of Lok Sabha here.

SRI G. N. PUTTANNA.—I venture to request the Government that all minor and major tanks must be taken over under P.W. management, because the Revenue Officers are incapable of managing and getting the maintenance work done regularly. I must say in

this respect that every tank is neglected. Therefore, the country has been neglected. The P.W. Department cannot manage these things and the Revenue Department is incapable of managing. The country is ruined and the Government is responsible for not managing the affairs of the P.W.D.

ಮತ್ತೊಂದು ಸ್ವಾಮಿ, ಈಗಾಗಲೇ ಮಾನ್ಯ ಮಿತ್ರರು ಹೇಳಿದ ಹಾಗೆ, 65 ಜನ ಸೀನಿಯರು ಸೂಪರ್‌ವೈಜರುಗಳು 1949ರಲ್ಲಿ ಕೆಲಸಕ್ಕೆ ಬಂದವರು ಲಾಗ ಹೊಡೆಯುತ್ತಿದ್ದಾರೆ. ಏಕೆಂದರೆ, ಇಷ್ಟು ಕೆಲಸ ಮಾಡಿದ್ದರೂ ಅವರನ್ನು ಇನ್ನೂ Confirm ಮಾಡಿಲ್ಲ. ಹಾಗೆಯೇ ಇಲ್ಲಿ 185 ಜನ ಸಬ್-ಇಂಜನೀಯರುಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ತರಹ ಅನ್ಯಾಯಗಳಾಗಿವೆ ಎಂದು ನನ್ನಲ್ಲಿ ಹೇಳಿದರು. ನಮ್ಮ ಗೋಳು ಸರ್ಕಾರಕ್ಕೆ ಮುಟ್ಟಲಿ ಎಂದು ಅವರು ಹೇಳಿದಾಗ ನಾನು ಈ ಸರಕಾರದಲ್ಲಿ ಯಾರಿಗೂ ನ್ಯಾಯ ದೊರೆಯುವುದಿಲ್ಲ. ಇಂತಹ ಅನ್ಯಾಯಗಳಾಗುತ್ತಿರುವ ಸರಕಾರದಲ್ಲಿ ಯಾರಿಗೂ ನ್ಯಾಯ ದೊರೆಕಿಸುವುದಿಲ್ಲ. ಇದನ್ನು ನೀವೆಲ್ಲ ದೇವರಲ್ಲಿಯೇ ಹೇಳಬೇಕು, ಅಷ್ಟೇ ಎಂದು ಹೇಳಿದೆ.

ಇನ್ನೊಂದು ವಿಷಯ. ರೋಡುಗಳ ಕೆಲಸಕ್ಕಾಗಿ ಅಲ್ಲಲ್ಲೆ ರೋಡು ಮೆಟಲುಗಳನ್ನು ಗುಡ್ಡೆ ಹಾಕಿರುತ್ತಾರೆ. ಇದನ್ನು ಮಾಡುವ ಕಂಟ್ರಾಕ್ಟರುಗಳು ಬಿಲ್ಲನ್ನು ಕೊಟ್ಟು ಹಣ ಪಡೆದಿರುತ್ತಾರೆ. ಆದರೆ ಮತ್ತೊಂದು ಸಾರಿ ಪುನಃ ಮೆಟಲುಗಳನ್ನು ಗುಡ್ಡೆ ಮಾಡುವಾಗ ಹಿಂದಿದ್ದ ಗುಡ್ಡೆಗಳನ್ನೇ ತೋರಿಸಿ ಒಂದಕ್ಕೆರಡರಷ್ಟು ಬಿಲ್ಲುಗಳನ್ನು ಮಾಡಿ ಸರಕಾರಕ್ಕೆ ಮೋಸಮಾಡಿ ಸರಕಾರದ ದುಡ್ಡನ್ನು ಲೂಟಿ ಮಾಡುತ್ತಿದ್ದಾರೆ. ಬೆಳ್ಳಾವೆ ಬಳಿ ಈ ಮೆಟಲುಗಳನ್ನು ಸಾಗಿಸಿದರೆಂತ ಸರಕಾರಕ್ಕೆ ದೂರು ಕೊಟ್ಟಾಗ ಚೀಫ್ ಇಂಜನೀಯರು ಬಂದರು; ನೋಡಿಕೊಂಡು ಹೋದರು ಅಷ್ಟೇ. ಅವರು ಕಾಂಗ್ರೆಸ್ಸಿಗೆ ಸೇರಿದವರು ಮತ್ತು ಪ್ರಭಾವಶಾಲಿಗಳಾದ್ದರಿಂದ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಒಂದು ದೊಡ್ಡ N.E.S. Block ಕಮಿಟಿಯನ್ನು ಮಾಡಿ ಅವರಿಗೆ ಒಂದು ದೊಡ್ಡ ಕಮಿಟಿ ಮೆಂಬರು ಕೆಲಸವನ್ನು ಕೊಟ್ಟರು. ಹೀಗಿದೆ ಸರಕಾರದ ಆಡಳಿತ!!

ಇನ್ನು ಸೀನಿಯಾರಿಟಿ ಲಿಸ್ಟಿನ ವಿಚಾರ ತೆಗೆದುಕೊಂಡರೆ ಯಾವ ಡಿಪಾರ್ಟ್‌ಮೆಂಟು ತೆಗೆದುಕೊಂಡರೂ ಸರಿ, ಎಲ್ಲದರಲ್ಲಿಯೂ ಅನೇಕವಾಗಿ ಅನ್ಯಾಯಗಳಾಗಿರುವುದು ಕಾಣುತ್ತದೆ. ಹಿಂದೆ ಇದ್ದ ಅಧಿಕಾರಿಗಳು ಈಗಲೂ ಹಾಗೇ ಇದ್ದಾರೆ. ಇನ್ನು I.A.S. ಮತ್ತು I.P.S. ಎಂದು ಮಾಡಿ ಬೇರೆಯವರ ತಲೆ ಮೇಲೆ ಚಪ್ಪಡಿ ಕಲ್ಲನ್ನು ಎಳೆದರು. ಏನೋ ಸರಕಾರಿ ನೌಕರಿಯಿಂದ ಉದ್ಧಾರವಾಗುತ್ತದೆ ಎಂದು ತಿಳಿದಿದ್ದರು. ಆದರೆ ಸರಕಾರಿ ನೌಕರಿಗೆ ಏನೋ ಪಾಪ ಮಾಡಿ ಸೇರಿರಬೇಕು. ಎಂದು ಈ ಜನ ಕೊರಗುತ್ತಿದ್ದಾರೆ. ಹಿಂದೆ ಇದ್ದ ಚೀಫ್ ಮಿನಿಸ್ಟರು ಇವರ ಕಷ್ಟಗಳನ್ನು ಕೇಳಿ ಸಹಾನುಭೂತಿಯಿಂದ ನೋಡುತ್ತೇವೆ ; ಎಲ್ಲರೂ ದೇಶಕ್ಕಾಗಿ ದುಡಿಯಿರಿ, ನಿಮ್ಮ ಸಂಕಟವನ್ನು ನಾವು ಎಂದಿಗೂ ಮರೆಯುವುದಿಲ್ಲ ಎಂದು ಹೇಳಿದ್ದರು.

ಈ ಅಧಿಕಾರಗಳಲ್ಲಿರುವ ಅಧಿಕಾರಿಗಳ ದೊಡ್ಡ ಮನುಷ್ಯರು, ಯೋಗ್ಯರಾದವರಲ್ಲಿ ಇದ್ದಾರೆ. ಆದರೂ ಎಲ್ಲರೂ ಒಂದೇ ರೀತಿಯಾದ ಗುರಿಯನ್ನಿಟ್ಟು ಕೆಲಸ ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಏನೋ ಕೆಲಸ ಮಾಡುತ್ತಾರೆ, ಈಗ ಇನ್ ಕಂಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಆಫೀಸುಗಳಿಗೆ ಲೆಕ್ಕ ಕೊಡಬೇಕಾಗುತ್ತೆ ಎಂದು ಎಷ್ಟೋ ಕಡೆ ಸುಳ್ಳು ಲೆಕ್ಕಗಳನ್ನು ಕೂಡ ಬರೆಯುತ್ತ ಬಂದಿದ್ದಾರೆ. ಇಂತಹುದನ್ನು ಸರಿಯಾಗಿ ನೋಡಿ ತನಿಖೆ ಮಾಡುವುದೇ ಇಲ್ಲ. "ಒಂದು ಕಣ್ಣಿಗೆ ಸುಣ್ಣ ಮತ್ತು ಒಂದು ಕಣ್ಣಿಗೆ ಬೆಣ್ಣೆ" ಎನ್ನುವ ರೀತಿಯಲ್ಲಿ ಮಾಡುತ್ತಿದ್ದಾರೆ. ಹೀಗಿದೆ ಸರಕಾರದ ಪಾಲಿಸಿ ಎನ್ನುವುದು!!

ಹಿಂದೆ ಪಿ.ಡಬ್ಲ್ಯು.ಡಿ. ಇಲಾಖೆಗಳಲ್ಲಿ ಲಾರಿ, ಜೀಪುಗಳು, ವ್ಯಾನುಗಳು ಇರಲಿಲ್ಲ. ಈಗ ಲಾರಿ, ವ್ಯಾನು ಜೀಪುಗಳು ಬೇಕಾದಷ್ಟನ್ನು ಕೊಟ್ಟಿದ್ದೀರಿ. ಆದರೆ ಉತ್ತಮವಾದ ಕೆಲಸ ಮಾಡುವ ಶಕ್ತಿ ನಮ್ಮ ಸರಕಾರದಲ್ಲಿಲ್ಲ. ಹಿಂದೆ ನಡೆಯುತ್ತಿದ್ದಷ್ಟು ಕೆಲಸಗಳೂ ಈಗ ನಡೆಯುತ್ತಿಲ್ಲ. Some of the Engineers are contractors, contractors indirectly are M.L.As. and some M.L.As. are conctrators indirectly. ಹೀಗಾದರೆ ಯಾವ ಕೆಲಸ ತಾನೇ ಮಾಡಲು ಸಾಧ್ಯ ? ಒಬ್ಬ ಇಂಜನೀಯರು ಯಾವುದೋ ಕಂಟ್ರಾಕ್ಟನ್ನು ಕೊಟ್ಟಿದ್ದರು. ಅಲ್ಲಿಗೆ ಮೆಟಲುಗಳನ್ನು ಗುಡ್ಡೆ ಹಾಕಿದ್ದನ್ನು ಬೇರೆ ಕಡೆಗೆ ಸಾಗಿಸಿದರು. ಹೀಗೆ ಸಾಗಿಸುವುದು ತಪ್ಪೆಂದು ದೂರು ಕೊಟ್ಟಾಗ ಅವರಿಗೆ ಬೇಕಾದ ಒಬ್ಬ ಪುಡಾರಿಗಳು ಬಂದು ಅವರಿಗೆ ಸಹಾಯ ಮಾಡಿದರು. ಸರಿ, ಆ ಕೆಲಸ ಅಲ್ಲಿಗೆ ನಿಂತು dead stop ಆಯಿತು.

ಸಂಗೇನಹಳ್ಳಿ, ತುಪ್ಪದ ಹಳ್ಳಿ ಕೆರೆಗಳು ಒಡೆದುದು ಎಲ್ಲರಿಗೂ ತಿಳಿದಿದೆ. ಇದರಿಂದ 32 ಲಕ್ಷ ರೂಪಾಯಿಗಳಷ್ಟು ನಷ್ಟವಾಯಿತು. ಆದರೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ದಕ್ಷರೂ ಪ್ರಾಮಾಣಿಕರೂ ಆದವರಿಗೆ ಪ್ರೋತ್ಸಾಹ ನೀಡಬೇಕಾದುದು ಸರಕಾರದ ಆದ್ಯ ಕರ್ತವ್ಯ.

ನಮ್ಮ ಮಂತ್ರಿಗಳು "ವಶೀಲಿ ಬಾಜಿ", ಪ್ರಭಾವ ಅನೇಕ ಕಡೆಗಳಲ್ಲಿವೆ ಎಂದರು. ಆದರೆ ಅಂತಹವರನ್ನು ಖಂಡಿತವಾಗಿ ಹತ್ತಿರ ಸೇರಿಸಬೇಡಿ. ಹಾಗೆ ಸೇರಿಸಿದರೆ ತಾನೇ ಈ ರೀತಿ ತೊಂದರೆಗಳು ಬರುವುದು. ಈಗ ಏನಾಗಿದೆ ಎಂದರೆ ತೂಕಡಿಸುವವನಿಗೇ ಮತ್ತೆ ಹಾಸಿಗೆ ಹಾಕಿಕೊಟ್ಟಂತೆ ಕೆಲಸ ಕೊಡುತ್ತಿದ್ದಾರೆ.

ನಮ್ಮಲ್ಲಿ ಕಟ್ಟಡಗಳಿಗೆ ವಿಪರೀತವಾಗಿ ಖರ್ಚು ಮಾಡುತ್ತಾರೆ. ಕೇರಳದಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಬೇಕಾದರೆ, ಷೆಡ್ಡುಗಳನ್ನು ಹಾಕಿಕೊಂಡು ಶಾಲೆಗಳನ್ನು ಪ್ರಾರಂಭಿಸುತ್ತಾರೆ. ಕಟ್ಟಡಗಳನ್ನು ಕಟ್ಟುವುದಕ್ಕೆ ಹೋದರೆ ಒಂದೆರಡು ವರ್ಷಗಳಲ್ಲಿ ಆಗತಕ್ಕ ಕೆಲಸವನ್ನು ನಾಲ್ಕುವರ್ಷ, ಹತ್ತುವರ್ಷ ಮಾಡುತ್ತಾರೆ. ಇದಕ್ಕೆ ಕಾರಣವೇನೆಂದರೆ ಅಧಿಕಾರಿಗಳು ಅಲ್ಲಿಯೇ ಇರಬೇಕು, ಬೇರೆ ಕಡೆಗೆ ವರ್ಗವಾಗಬಾರದು ಎಂದು ಮಾಡುತ್ತಾರೆ. ಎಸ್ಟಿಮೇಟ್ ಆಗಿ ಕೆಲಸ ಪ್ರಾರಂಭವಾದಮೇಲೆ ಕೆಲಸ ಇನ್ನೂ ಮುಗಿದಿಲ್ಲವೆಂದು ಬರೆದು ತಾವು ಅಲ್ಲಿಯೇ ಇರಲು ಪ್ರಯತ್ನಪಡುತ್ತಾರೆ. ಕೆಲಸದಲ್ಲಿ slow progress ಇರುತ್ತದೆ. ವಿಧಾನ ಸೌಧದಂಥ ದೊಡ್ಡ ಕಟ್ಟಡವನ್ನು ಮೂರು-ನಾಲ್ಕು ವರ್ಷಗಳಲ್ಲಿ ಕಟ್ಟಿದರು. ಈ ಕಟ್ಟಡವು ಏಷ್ಯಾ ಖಂಡದಲ್ಲೆಲ್ಲಾ ಅತಿ ದೊಡ್ಡದು ಎಂದು ಹೇಳುತ್ತಾರೆ. ಒಂದು ಚಿಕ್ಕ ಕಟ್ಟಡವಾಗಲು ನಾಲ್ಕಾರು ವರ್ಷಗಳಾದರೆ ಇದಕ್ಕೆ ಸರ್ಕಾರವೇ ಹೊಣೆ ಎಂದು ಹೇಳುತ್ತೇನೆ. ಮುನಿಸಿಪಾಲಿಟಿಗಳಲ್ಲಿ ಇಂಜಿನಿಯರಿಂಗ್ ಇಲಾಖೆಯವರುಮಾಡುವ ಕೆಲಸಗಳನ್ನು ನೋಡಿದರೆ

(SRI G. N. PUTTANNA)

ಒಂದೊಂದು ಕಡೆ ಒಂದೊಂದು ರೀತಿ ನಡೆಯುತ್ತಿದೆ. ಇದನ್ನು ಸರಿಪಡಿಸಬೇಕು.

ಸರ್ಕಾರದವರು Well subsidy ಎಂದು 500 ರೂಪಾಯಿಗಳನ್ನು ಕೊಡುತ್ತಾರೆ. ಅಮಲ್ದಾರರು ಈ ಹಣವನ್ನು ಮಂಜೂರು ಮಾಡಿಕೊಡುತ್ತಾರೆ, ಎಲ್ಲ ಆಗುತ್ತದೆ. ಆದರೆ ಇದರಲ್ಲಿ ಒಂದು ವಿಷಯವಿದೆ. Well grant ತೆಗೆದುಕೊಳ್ಳುವಾಗ, ಶಾಖಾಯ ಲವಣಾಂಶಯ ಅಧಿಕಾರಿಗಳಿಗೆ ಕೊಡದೆ ಇದ್ದರೆ, ಅಂಥ ಸಂದರ್ಭಗಳಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಆ ವಿಚಾರ refer ಮಾಡುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ನೋಡಿ ಬಾವಿ ಕೆಲಸ ಮಾಡಿದ್ದಾರೆಂದು ಬರೆದರೂ ಸಹ, ಅವರಿಗೆ ಭಾಗ ಬರದೆ ಇದ್ದರೆ ರೆವೆನ್ಯೂ ಅಧಿಕಾರಿಗಳು ಹಣವನ್ನು ಕೊಡುವುದಿಲ್ಲ. ಸರ್ಕಾರದಿಂದ ಬರತಕ್ಕ ಸಬ್ಸಿಡಿಯನ್ನು ತೆಗೆದುಕೊಳ್ಳಲು ಹಳ್ಳಿಯ ರೈತರಿಗೆ ಬಹಳ ತೊಂದರೆಯಾಗಿದೆ. ಇದನ್ನು ತಪ್ಪಿಸಬೇಕು. ಚೆನ್ನಾಗಿ, ನಿಸ್ಪೃಹತೆಯಿಂದ ಕೆಲಸ ಮಾಡುವವರಿಗೆ ಪ್ರಮೋಷನ್ ಕೊಡಿ ; ಅವರ ಬೆನ್ನುತಟ್ಟಿ, ಅಂಥವರಿಗೆ ಉತ್ತೇಜನ ಕೊಡಿ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಹೇಳಿದ ಮಾತು, ಕಟ್ಟಿದ ಬುತ್ತಿ ಬಹಳ ದಿವಸ ಬರುವುದಿಲ್ಲ. ನಮ್ಮ ಸರ್ಕಾರಕ್ಕೆ ಒಂದೇ ನೀತಿ ಇರಬೇಕು. ಯಾರೇ ಆಗಲಿ, ಏನಾದರೂ ಕೆಲಸ ಮಾಡಿಕೊಡುವ ಸಂದರ್ಭದಲ್ಲಿ ಎಲ್ಲರೂ ಒಂದೇ ಎಂಬುದನ್ನು ತಿಳಿದುಕೊಳ್ಳಬೇಕು. ಕೋಮುವಾರು ಭಾವನೆಯನ್ನು ಇಟ್ಟುಕೊಳ್ಳಬಾರದು. Recommendation ಮತ್ತು influenceಗೆ ಒಳಗಾಗಬಾರದು. ಇಲ್ಲದೆ ಇದ್ದರೆ ದೇಶ ಖಂಡಿತವಾಗಿ ಉಳಿಯುವುದಿಲ್ಲ. ಮಹಾತ್ಮ ಗಾಂಧಿಯವರ ದೆಸೆಯಿಂದ ಕಾಂಗ್ರೆಸ್ ಸಂಸ್ಥೆಗೆ ಬಂದಿರುವ ಹಿರಿಮೆಯನ್ನು ಈಗ ಆ ಸಂಸ್ಥೆಯಲ್ಲಿರುವವರು ಹಾಳು ಮಾಡುತ್ತಿದ್ದಾರೆ. ಪ್ರತಿಯೊಂದು ಕೆಲಸದಲ್ಲಿಯೂ ಸರ್ಕಾರ ಭಾಗಿಯಾಗಿದೆ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎನ್ನುವ ರೀತಿಯಲ್ಲಿ ಸರ್ಕಾರದವರು ವರ್ತಿಸುತ್ತಿದ್ದಾರೆಂದರೆ ಇವರಿಗೆ ಕೋಪ ಬರುತ್ತದೆ. ನಿಮ್ಮಲ್ಲಿರುವ ಲೋಪದೋಷಗಳನ್ನು ತೋರಿಸಿದಾಗ ತಿದ್ದಿಕೊಳ್ಳಬೇಕು. ಸರ್ಕಾರದಲ್ಲಿರುವ ಕುಂದು ಕೊರತೆಗಳನ್ನು ಅಧಿಕಾರಿಗಳು ಮಾಡುವ ತಪ್ಪನ್ನು ಅಥವ ಇನ್ನು ಯಾವುದಾದರೂ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಾಗ, ಆ ವಿಷಯ ನಿಜವಲ್ಲದಿದ್ದರೆ ನಿಜವಲ್ಲವೆಂದು ಹೇಳಿ, ನಿಜವಾಗಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಿ. ವಿರೋಧ ಪಕ್ಷದವರು ಹೇಳುವುದೆಲ್ಲ ಸುಳ್ಳು ಎಂದು ಭಾವಿಸಬಾರದು. ನಾವೇನಾದರೂ ಸುಳ್ಳು ಹೇಳಿದರೆ ನಮ್ಮ ಸ್ಥಾನಮಾನ ಹೋಗುತ್ತದೆ. ದೇಶದಲ್ಲಿ ಸತ್ಯವಾಗಿ ನಡೆಯುತ್ತಿದ್ದ ಅಧಿಕಾರಿಗಳಿಗೆ ಅನ್ಯಾಯವಾಗಿದೆ. ಇದರಿಂದ ಅವರೆಲ್ಲ ಕೆಟ್ಟ ಮಾರ್ಗಕ್ಕೆ ಬೀಳುವಂತಾಗಿದೆ. I.A.S. ಮತ್ತು Non-I.A.S., I.P.S. ಮತ್ತು non-I.P.S., ಹೀಗೆ ವಿಂಗಡಿಸಿರುವುದರಿಂದ ಬಹಳ ಅನ್ಯಾಯವಾಗಿದೆ. ಇದನ್ನೆಲ್ಲ ನೋಡಿದರೆ ಹೊಟ್ಟೆಯಲ್ಲಿ ಬೆಂಕಿ ಇಟ್ಟ ಹಾಗಾಗುತ್ತದೆ. 10–15 ವರ್ಷ ಕೆಲಸ ಮಾಡಿರುವವರ ಮೇಲೆ ಎರಡು ವರ್ಷ ಸಹ ಕೆಲಸ ಮಾಡದೆ ಇರುವವರನ್ನು ಮೇಲೆ ಕೂರಿಸುತ್ತಿದ್ದಾರೆ. ಚೀಫ್ ಇಂಜಿನಿಯರ್ ಆದವರ ಅಥವ ದಿವಾನರಾದವರ, ಮಂತ್ರಿಗಳ ಅಥವ ಕೌನ್ಸಿಲರ್ ಆದವರ ಮಗನಿಗೋ ಮೊಮ್ಮಗನಿಗೋ ಪ್ರಭಾವಕ್ಕೆ ಅಥವ ವಶೀಲಿ ಬಾಜಿಗೆ ಒಳಗಾಗಿ ಅಸಿಸ್ಟೆಂಟ್ ಇಂಜಿನಿಯರ್, ಅಸಿಸ್ಟೆಂಟ್ ಕಮೀಷನರ್ ಮುಂತಾದ ಹುದ್ದೆಗಳಿಗೆ ನೇಮಕ ಮಾಡುವುದರಿಂದ 10-15 ವರ್ಷ ಕೆಲಸ ಮಾಡಿರುವವರಿಗೆ ಅಸಮಾಧಾನವುಂಟಾಗುತ್ತದೆ. ಇದರಿಂದ ಕೆಲಸದಲ್ಲಿ ದಕ್ಷತೆ ಕಡಮೆಯಾಗುತ್ತದೆ. ರೆವೆನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳಲ್ಲಿ co-ordination ಇರುವಂತೆ ಮಾಡಿ ದೇಶಕ್ಕೆ ಒಳ್ಳೆಯದನ್ನು ಮಾಡಿ ಎಂದು ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕ ಡಿಮಾಂಡುಗಳಿಗೆ ಒಪ್ಪಿಗೆ ಕೊಡುತ್ತ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 165 ಲಕ್ಷ ರೂಪಾಯಿಗಳ ಖರ್ಚಿನಲ್ಲಿ 750 ಕೆರೆಗಳನ್ನು ಪೂರ್ಣಮಾಡಬೇಕಾಗಿದೆ ಎಂದು ನಮೂದು ಮಾಡಲಾಗಿದೆ. ಜೊತೆಗೆ 250 ಲಕ್ಷ ರೂಪಾಯಿಗಳ ಅಡಿಷನಲ್ ಗ್ರಾಂಟನ್ನು ಪುನಃ ಕೊಡುತ್ತ C-D ಬ್ಲಾಕ್ಸ್ ಮುಖಾಂತರ ಒಂದು ಬ್ಲಾಕಿಗೆ 5 ಲಕ್ಷ ರೂಪಾಯಿಗಳಂತೆಯೂ N.E.S. ಮುಖಾಂತರ ಒಂದು ಲಕ್ಷ ರೂಪಾಯಿನಂತೆಯೂ ಕೊಡುತ್ತ 25 ಲಕ್ಷ ಎಕರೆ ಭೂಮಿಯನ್ನು ನೀರಾವರಿ ಮಾಡಬೇಕೆಂಬುದಾಗಿ ಅದರಲ್ಲಿ ನಮೂದಾಗಿದೆ. ಈ ಯೋಜನೆಗಳು ಕಾರ್ಯರೂಪಕ್ಕೆ ಬರಬೇಕಾದರೆ, ಆಡಳಿತದಲ್ಲಿ ಬಹುಮಟ್ಟಿಗೆ ಆಕ್ಷೇಪಣೆ ಹೊಂದಿರತಕ್ಕದ್ದು ಪಬ್ಲಿಕ್ ವರ್ಕ್ಸ್ ಇಲಾಖೆ ಎಂಬುದಾಗಿ ಹೇಳಬಹುದು. ಇವರ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ. ದೇಶವನ್ನು ಕಟ್ಟತಕ್ಕ ಭಾರ ಇವರ ಮೇಲೆ ಇರುವುದರಿಂದ ಅವರೇ ದೇಶ ಸೇವಕರು, ಅವರೇ ಭಾರತ ಮಾತೆಯ ಸೇವೆಗೆ ಕಂಕಣ ಬದ್ಧರಾಗಿದ್ದಾರೆಂಬುದನ್ನು ಈ ಸಭೆಯ ಸದಸ್ಯರಾದ ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಸರ್ಕಾರವೂ ಕೂಡ ಅದಕ್ಕೆ ತಕ್ಕ ಹಾಗೆ ಇವರಲ್ಲಿರತಕ್ಕ ದಕ್ಷತೆ ಮತ್ತು ದೇಶವನ್ನು ಕಟ್ಟತಕ್ಕ ಮನೋಭಾವನೆಯನ್ನು ಸದ್ವಿನಿಯೋಗಪಡಿಸಿಕೊಂಡರೆ ಈ ಯೋಜನೆಯ ಕಾರ್ಯ ಶಾಶ್ವತವಾಗಿ ಉಳಿಯುತ್ತದೆ, ಅದು ಪೂರ್ಣವಾಗುತ್ತದೆ, ತನ್ಮೂಲಕ ದೇಶದ ನಾನಾ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ, ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಮೈನರ್ ಕೆರೆಗಳು ರಿಪೇರಿಯಾಗದೆ ಹಾಗೆಯೇ ಉಳಿದಿವೆ. ಮೊನ್ನೆ P.W.D. ಮಂತ್ರಿಗಳೂ ಕೂಡ ಭಾಷಣ ಮಾಡುತ್ತ ಅದಕ್ಕೆ ಒಂದು ಸ್ಪೆಷಲ್ ಸರ್ಕಲ್ ಮಾಡಿ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಿದ್ದೇವೆ, ಅವರು ಸರ್ವೆ ಮಾಡುತ್ತಾರೆ, ಎಂಬುದಾಗಿ ಅಪ್ಪಣೆ ಕೊಡಿಸಿದರು. ಪ್ರಜಾ ಪ್ರಭುತ್ವದಲ್ಲಿಪ್ರತಿನಿಧಿಗಳು ಜನರ ಹತ್ತಿರ ಹೋಗಿ ಅರ್ಜಿ ತಂದು ಇಲಾಖೆಗಳಿಗೆ ಮುಟ್ಟಿಸುವುದರಿಂದ, ಪ್ರಜಾಪ್ರಭುತ್ವವು ಯಶಸ್ವಿಯಾಗುವುದಿಲ್ಲ. ಅಧಿಕಾರಿಗಳು ಜನರ ಮನೆ ಬಾಗಿಲಿಗೆ ಹೋಗಿ ಅವರನ್ನು ಕಂಡು ಅವರಿಗೆ ಬೇಕಾದ ಕೆಲಸ ಕಾರ್ಯಗಳನ್ನು ಅಧಿಕಾರವರ್ಗದವರು ನಡೆಸಿದರೆ ಅದು ನಿಜವಾದ ಪ್ರಜಾಪ್ರಭುತ್ವವಾಗುತ್ತದೆ. ಅದು ರಾಮರಾಜ್ಯವಾಗುತ್ತದೆಂದು ನನ್ನ ಭಾವನೆ. ಮಾನ್ಯ ಮಂತ್ರಿಗಳು ಹೇಳಿದಂತೆ ಸ್ಪೆಷಲ್ ಸಿಬ್ಬಂದಿಯವರು ತಾವೇ ಹೋಗಿ ಸರ್ವೆ ಕೆಲಸವನ್ನು ಮಾಡಬೇಕು ಎಂದು ತಿಳಿಸಿರುವುದು ಒಳ್ಳೆಯ ಸಂಗತಿ. ಪ್ರತಿಯೊಂದು ಇಲಾಖೆಯಲ್ಲಿಯೂ ಇದೇ ರೀತಿಯಾಗಿ ಮಾಡಿ ಜನಗಳ ಕುಂದು ಕೊರತೆಗಳೇನೆಂಬುದನ್ನು

ತಿಳಿಯಲು ಏರ್ಪಾಡು ಮಾಡಿದರೆ ಪ್ರತಿನಿಧಿಗಳ ಕೆಲಸ ಸಾಕಷ್ಟು ಕಮೆಯಾಗುತ್ತದೆ.

ಸ್ವಾಮಿ, ನನ್ನ ಕ್ಷೇತ್ರದಲ್ಲಿ ಅನೇಕ ಕೆರೆಗಳು ದುರಸ್ತಿಯಾಗದೆ ಹಾಗೆಯೇ ಉಳಿದಿವೆ. ಉದಾಹರಣೆಗೆ ಹೇಳುವುದಾದರೆ ಉಬ್ರಾಣಿ ಹೋಬಳಿಯಲ್ಲಿ ದುರುವೇಗೆರೆಯ ಗ್ರಾಮದ ಸುಮಾರು 11 ಕೆರೆಗಳು ರಿಪೇರಿಯಾಗದೆ ಆ ಜನಗಳ ಸ್ಥಿತಿ ಇವೊತ್ತು ಬಹಳ ಚಿಂತಾಜನಕವಾಗಿದೆ. ಅಲ್ಲಿಯ ಜನ ಸರ್ಕಾರಕ್ಕೆ ಈ ಕೆರೆಗಳ ರಿಪೇರಿಯಾಗಬೇಕು ಎಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅಲ್ಲಿ ವಾಸಮಾಡುವ ಜನಗಳು ರೈತರ ಕಷ್ಟ ಸ್ಥಿತಿ ಹೀಗೆ ಇದ್ದಾಗ್ಯೂ ಅಧಿಕಾರಿಗಳು ಅದನ್ನು ಗಮನಿಸದೆಹೋದರೆ ಪರಿಸ್ಥಿತಿ ಏನಾಗುತ್ತದೆ? ಜನರು ಯಾವ ಸ್ಥಿತಿಯಲ್ಲಿದ್ದಾರೆಂಬುದನ್ನು ತಮ್ಮ ಅಧಿಕಾರಿಗಳು ಕೂಡ ತಿಳಿದುಕೊಳ್ಳಬೇಕು. ಈ ಬಗ್ಗೆ ಸರ್ಕಾರದವರು ಕೂಡ ತೀವ್ರವಾದ ಕ್ರಮಕೈಕೊಳ್ಳಬೇಕು.

ಕನಶಿಕಟ್ಟೆ ಕೆರೆ, ಒಡ್ಡಿನಹಾಳು ಕೆರೆ—ದೊಡ್ಡ ಕೆರೆಗಳು. ಮಳೆಗಾಲದಲ್ಲಿ ಬೇಕಾದಷ್ಟು ನೀರು ಅಲ್ಲಿಗೆ ಬರುತ್ತದೆ; ಆದರೆ ಎಲ್ಲ ಹರಿದು ಹೋಗುತ್ತದೆ. ಇವುಗಳ ತೂಬುಗಳನ್ನು ರಿಪೇರಿ ಮಾಡಿಸಬೇಕಾಗಿದೆ. ಕೆರೆಗಳ ಮಧ್ಯೆ ಒಡೆದುಹೋಗಿದೆ.

ಆಮೇಲೆ ಹರಳಕಟ್ಟೆ ಹಳ್ಳಿಯ ಫೀಡರ್ ಚಾನಲ್ ಮಧ್ಯೆ ಮಧ್ಯೆ ಎರಡುಕಡೆ ಒಡೆದುಹೋಗಿದೆ. ಮುಂಚೆಯೇ 50 ರೂಪಾಯಿ ಖರ್ಚು ಮಾಡಿದ್ದರೆ ಸರಿಹೋಗುತ್ತಿತ್ತು. ಅಂಥಾದ್ದು ಈಗ 40 ಸಾವಿರ ರೂಪಾಯಿಯಾಗುತ್ತದೆ. ಇದನ್ನು ಮುಖ್ಯವಾಗಿ ಮಾನ್ಯ ಮಂತ್ರಿಗಳು ಕೂಡಲೇ ಸರಿಪಡಿಸಬೇಕು ಮತ್ತು ಈ ವಿಷಯದಲ್ಲಿ ಗುರುತು ಹಚ್ಚಿಕೊಳ್ಳಬೇಕು.

ಹಾಗೆಯೇ ಹರಳಕೆರೆ ಹಳ್ಳಿಯಿಂದ ಹೆಚ್ಚಳ್ಳಿ ಕೆರೆಗೆ ಹೋಗುವ ಫೀಡರ್ ಚಾನಲ್ ರಿಪೇರಿ ಮಾಡಬೇಕಾಗಿದೆ.

ಆಗರ್ಭನಹಟ್ಟಿ ಊರಮುಂದಲ ಕೆರೆಯನ್ನು 1950ನೆಯ ಇಸವಿಯಲ್ಲಿ ರಿಪೇರಿಗೆ ತೆಗೆದುಕೊಂಡಿದ್ದರು. ಕೆಲಸ ಪೂರೈಸದೆ ಅರ್ಧಕ್ಕೇ ಬಿಟ್ಟಿದ್ದಾರೆ. ರೈತರು ಮಾತ್ರ ನೀರು ತೆಗೆದುಕೊಳ್ಳುತ್ತಿದ್ದಾರೆ. ಏಕೆಂದರೆ 12 ಆಣೆಯಷ್ಟು ಭಾಗ ಕೆಲಸವಾಗಿ ನೀರು ಬರುತ್ತಿದೆ. ಸರ್ಕಾರಕ್ಕೆ ನೀರು ಕಂದಾಯ ಪಾವತಿಯಾಗುತ್ತಿಲ್ಲ. ಏಕೆ ಹೀಗೆ ಮಾಡುತ್ತಾರೋ ಗೊತ್ತಿಲ್ಲ. ಹೀಗೆ ಸರ್ಕಾರಕ್ಕೆ ಅಧಿಕಾರಿಗಳಿಂದ ಆಗುವ ನಷ್ಟ ಹೇಳತೀರದು. ನಮ್ಮ ಕಡೆ ರಸ್ತೆಗಳ ದುರಸ್ತಿಗಾಗಿ, 15 ಲಕ್ಷ ರೂಪಾಯಿಗಳನ್ನು Provide ಮಾಡಿದ್ದರು. ಭದ್ರಾವತಿ ಹೊಳೆ ಹೊನ್ನೂರು ರಸ್ತೆ ಬಹಳ ಚಿಕ್ಕದಾಗಿದೆ. ಈ ರಸ್ತೆಯನ್ನು ಅಗಲಮಾಡಿಸಿ ರಿಪೇರಿ ಮಾಡುವುದು ಅಗತ್ಯವಾಗಿದೆ. ಈ ರಸ್ತೆಯಲ್ಲಿನ ಸಣ್ಣ ಸೇತುವೆಗಳ ಅಗಲ ಕಡಿಮೆ ಇದ್ದು ಅಪಾಯಕರವಾಗಿದೆ.

ಕಾಗೆಹಳ್ಳಿ ಸೇತುವೆ ಕೆಲಸ ಬಹಳ ವರ್ಷಗಳಿಂದ ಹಾಗೆಯೇ ಉಳಿದಿದೆ. ಇದನ್ನು ಮಾಡಿಸಿ ಕೊಡಬೇಕು.

ಇದಲ್ಲದೆ K. K. Road ಗಳು. ಇದನ್ನು P.W.D.ಗೆ ವಹಿಸುತ್ತೀರೋ ಅಥವಾ ಬೇರಾವ ಡಿಪಾರ್ಟ್‌ಮೆಂಟಿನಿಂದ ಮಾಡಿಸುತ್ತೀರೋ ಗೊತ್ತಿಲ್ಲ. ಅದು, Maintenance ಇಲ್ಲದೆ ಹಾಗೆಯೇ ಉಳಿದದೆ, ಸಾಸುವೆ ಹಳ್ಳದ ಸೇತುವೆ ಕೂಡ ಆಗದೆ ಜನರಿಗೆ ಬಹಳ ಕಷ್ಟವಾಗಿದೆ.

ಈಗ ಭದ್ರಾವತಿ ನಗರದ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಅಲ್ಲಿಗೆ ಇನ್ನೊಂದು ಸೇತುವೆ ಆಗಬೇಕೆಂದು ಸರ್ಕಾರದವರಿಗೆ ಹೇಳಬಯಸುತ್ತೇನೆ. Sugar Cane Cess Fund ಬೇರೆ ಈಗ ಬರುತ್ತಿರುವುದರಿಂದ ಅದನ್ನು ಉಪಯೋಗಿಸಿಕೊಂಡು ಈ ಸೇತುವೆ ಕೆಲಸವನ್ನು ಕೈಕೊಳ್ಳಬೇಕೆಂದು ಹೇಳಬಯಸುತ್ತೇನೆ. ಜೊತೆಗೆ ಪೌರಸಭೆಯವರು ಕೂಡ ಸ್ವಲ್ಪ ಹಣ ಕೊಡುವವರಾಗಿದ್ದಾರೆ.

ಭದ್ರಾ ಅಣೆಕಟ್ಟಿನಿಂದ ನೀರು 12,000 ಎಕರೆಗಳಿಗೆ ಬರುತ್ತದೆ. ಆದರೆ ಅಲ್ಲಿ ಈಗ ಚಾನಲ್ ರಿಪೇರಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ನೀರು ಹಾಯುವರಿಯೇ ಸರಿಯಾಗಿಲ್ಲ. ಬೇರೆ ಬೇರೆ ಚಾನಲ್‌ಗಳಿಗಾದರೆ maintenance, silt clearance ಕೆಲಸಕ್ಕೆ ಸಾಕಾದಷ್ಟು ಹಣ ಕೊಡುತ್ತೀರಿ. ಈಗಲಾದರೂ ಈಬಗ್ಗೆ ವಿಶೇಷ ಗಮನವಿಟ್ಟು ಈ ಚಾನಲ್ಲಿನ ರಿಪೇರಿ, ಸಿಲ್ಟ್ clearance ಬಗ್ಗೆ ಸಾಕಾದಷ್ಟು ಹಣ ಕೊಡಬೇಕೆಂದು ಹೇಳುತ್ತೇನೆ.

ಹಾಗೆಯೇ ಭದ್ರಾ ರಿಸರ್ವಾಯಿರ್ ಕೆಳಗೆ ಎಡನಾಲೆಯ ದೆಸೆಯಿಂದ ವರ್ಗಾಯಿಸಲ್ಪಟ್ಟ ಹಳ್ಳಿಗಳವರ ಕಷ್ಟ ಹೇಳುವಂತಿಲ್ಲ. ಇನ್ನೂ ಅವರ Rehabilitation ಆಗಿಲ್ಲ. ಒಂದು ಕಡೆ ಸಣ್ಣ ಸೈಟು ಕೊಡುತ್ತಾರೆ, ಇನ್ನೊಂದುಕಡೆ ದೊಡ್ಡ ಸೈಟು ಕೊಡುತ್ತಾರೆ. ಈ ವ್ಯತ್ಯಾಸ ಏಕೆ? ಇದಕ್ಕೆ ಕಾರಣವೇನೋ ಗೊತ್ತಿಲ್ಲ, ತಿಳಿಸಬೇಕು.

ಇನ್ನು Works-charged Employeesಗಳ ವಿಷಯ ಹೇಳುತ್ತೇನೆ. ಈ ವರ್ಗದ ಜನ ಬಹಳ ಮಟ್ಟಿಗೆ ಕನಿಷ್ಟ ವರ್ಗದ ಜನ; ಇವರ ವಿಷಯದಲ್ಲಿ ಮಾನ್ಯ ಮಂತ್ರಿಗಳಿಗೆ ಸಹಾನುಭೂತಿಯಿರಬೇಕು. ಬೇರೆ ಇಲಾಖೆಗಳಲ್ಲಿನ ಸರ್ವಿಸ್‌ನವರಿಗೆ ಇರುವ ಅನುಕೂಲವೂ ಅವರಿಗೆ ಸಿಕ್ಕಿಲ್ಲ. ಅವರನ್ನೂ ತಮ್ಮ ಮಕ್ಕಳ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನ.

ಹಾಗೆಯೇ 63 ಜನ Confirmation ಆಗದಿರುವ ಅಸಿಸ್ಟೆಂಟ್ ಎಂಜಿನಿಯರ ವಿಷಯ ಹಿಂದಿನಿಂದಲೂ ಹಾಗೆಯೇ ಉಳಿದಿದೆ. ಇದರ ಬಗ್ಗೆಯೂ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಆಮೇಲೆ, ಜನ್ನಾಪುರದ ಬಳಿ ಭದ್ರಾ ಎಡನಾಲೆ ಚಾನಲ್‌ನಿಂದ 300 ಎಕರೆಗಳವರೆಗೆ ತರೀ ವ್ಯವಸಾಯದ ಏರ್ಪಾಡು ಮಾಡಬಹುದು. ಈ ಭಾಗದ ಎಡನಾಲೆಯಿಂದ ಒಂದು Branch Channel ಮಾಡಿ ಈ 300 ಎಕರೆಗಳಿಗೆ ನೀರು ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

ಉಬ್ರಾಣಿ-ಶಿವನಿರಸ್ತೆ ಮಾಡಿಸಿ ಕೊಡಬೇಕೆಂದು ಬಹಳ ವರ್ಷಗಳಿಂದ ಕೇಳುತ್ತಿದ್ದೇವೆ. ಆ ಪ್ರದೇಶದಲ್ಲಿ ಸುತ್ತಮುತ್ತ ಲಕ್ಷಾಂತರ ರೂಪಾಯಿಗಳ ಖನಿಜ ಸಂಪತ್ತಿದೆ. ಅರಣ್ಯ ಸಂಪತ್ತಿದೆ. ಸಾಮಾನುಗಳೆಲ್ಲಾ ಶಿವನಿ ಸ್ಟೇಷನ್ನಿಗೂ, ಭದ್ರಾವತಿ ಸ್ಟೇಷನ್ನಿಗೂ ಹೋಗಬೇಕಾಗಿದೆ. ಈ ರಸ್ತೆ ಬಹಳ ಮುಖ್ಯವಾದದ್ದು. ಅದನ್ನು ಈ ವರ್ಷವೇ ತೆಗೆದುಕೊಳ್ಳಬೇಕೆಂದು ಅಜ್ಜಂಪುರ, ಶಿವನಿಯವರೆಲ್ಲರೂ ಒತ್ತಾಯ ಮಾಡುತ್ತಿದ್ದಾರೆ, ಸರ್ಕಾರದವರು ಖಂಡಿತ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಹೀಗೆಯೇ ಇನ್ನೂ ಅನೇಕ ವಿಷಯಗಳನ್ನು ಹೇಳಬೇಕೆಂದು ಇಷ್ಟವಿದ್ದರೂ ಕಾಲಾವಕಾಶವಿಲ್ಲದ್ದರಿಂದ ಹೆಚ್ಚಿಗೆ ಹೇಳಬಯಸುವುದಿಲ್ಲ. ಈಗ Irrigation development fund ನಿಂದ Inter-communication ರಸ್ತೆಗಳನ್ನು ಮಾಡಬೇಕೆಂದು ಸರ್ಕಾರದವರು ಮಾಡಿದ್ದರೂ, ಎಸ್ಟಿಮೇಟೇ ಬಂದಿಲ್ಲದೆ, ಸೂಪರೆಂಟೆಂಡಿಂಗ್ ಇಂಜಿನಿಯರ್ ಆಫೀಸಿನಲ್ಲಿ ನಿಧಾನವಾಗಿದೆ. ಹುದ್ದ-ನೇರಳೆ ಕೆರೆ ಮಾರ್ಗವಾಗಿ ಹೋಗುವ ರಸ್ತೆ ಕೂಡ ಭದ್ರಾ ರಿಸರ್ವಾಯರ್ ಫಂಡ್ ಮೂಲ

(ಶ್ರೀ ಡಿ. ಟಿ. ಸೀತಾರಾಮರಾವ್)

ಕವೇ ಮಾಡುವುದಿದೆ. ಇದನ್ನು ಮಾಡಬೇಕೆಂದು ಹೇಳುತ್ತೇನೆ.

ಭದ್ರಾವತಿಗೆ ನೀರು ಪೂರೈಕೆಯ ವಿಷಯ ಇನ್ನೂ ಪೂರ್ಣವಾಗಿಲ್ಲ. ಅರ್ಧಂಬರ್ಧ ಕೆಲಸವಾಗಿದೆ. Water tank ಆಗಿದೆ. ಬಾಕಿ ಕೆಲಸಗಳೇನೂ ಆಗಿಲ್ಲ. ಅವನ್ನು Sanitary ಇಲಾಖೆಯವರು ಮಾಡಬೇಕೋ ಯಾರು ಮಾಡಬೇಕೋ ಗೊತ್ತಿಲ್ಲ. ಸಂಬಂಧ ಪಟ್ಟವರು ಗಮನಿಸಬೇಕೆಂದು ಹೇಳಿ ನನಗಿಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

Sri G. B. SHANKAR RAO (Hirekerur).—Mr. Speaker, Sir, I support all the demands. The time at our disposal is short and the subject under these Demands is vast. I will confine myself to one or two Demands. There is a provision made in the Budget estimates for minor irrigation. Rs. 50 lakhs includes Central aid also. The amount is intended for carrying out minor works and improvement of all minor irrigation tanks. It is intended by the Central Government and by our State Government also to utilise the amount in carrying out smaller works so that the food problem in our country may easily and within a short period be solved. Once when I spoke on the floor of the House, I made a remark that the amount provided for Public Works might be equitably distributed in all districts.

3-30 P.M.

But now so far as this scheme is concerned, I think, it needs special considerations as far as the integrated areas are concerned. So far as you know, the tanks in old Mysore State are repaired early. They are in a better condition when compared with the tanks of the integrated areas. There are a good number of tanks in Bombay Karnatak area especially in Belgaum and in the western parts of Dharwar District. They badly need repairs. The amount set apart for this work can better be utilised for carrying out small repairs so that within a shorter period and at minimum cost, greater area can be brought under irrigation and food production can be enhanced with quick rssults.

Sir, irrigation projects are investigated for inclusion in the Third Five-Year Plan. The State Government is sending recommendations now and then for irrigation projects which have been investigated for inclusion by the Central Government in the Third Five-Year Plan. There is such a scheme in the southernmost corner of the Dharwar District. It is an old Tank constructed by the Vijayanagar King, the celebrated ruler Krishnadevaraya in 1442. The tank was constructed by putting up a dam across the river Kumadwathi. This massive tank was designed to store about 40,000 million cubic feet of water. But there was no arrangement for surplus water to be stored in course of time. The dam was washed away and it is now reduced to the size of a small tank with a capacity of only 55 million cubic feet of water. About 70 years back.two channels were dug up, the right bank canal extending up to 8½ miles and the left bank canal extending up to 5 miles. By this scheme, it was designed to irrigate 2500 acres of land. Now, the possibilities of extending the right bank canal of Kumadwathi river have been investigated. According to the information, if the right bank is extended up to 25 miles, it can irrigate about 10,000 acres of paddy and about 12,000 acres of rabi crops. According to the expert opinion, it may cost about Rs. 86 lakhs including compensation money that can be allowed for submersions. It is a feasible scheme according to them. It can irrigate nearly more than 25,000 acres of land. This can be done by raising the waste weir of the tank of that river to a height of about 13 feet making provision for impounding water to the extent of 550 million cubic feet of water. When the Hon'ble Minister for Public Works paid a visit to our constituency and visited this tank, I urged him to see that this scheme is recommended for inclusion in the third five year plan.

Lastly, Sir, the Sharavathi Valley Project is taken up for execution. The road connecting the Sharavathi valley Project to the nearest Station is Ranibennur. There is already heavy traffic and there are a number of nalas on this road. In order to make the traffic easy and smooth, I request that

causeways may be constructed on these nalas, Sir, as I already stated, this road is an important means of communication. I also request that this road may be asphalted. I once again request the Minister for Public Works to take up Mesur Tank Project and also take up this road work connecting Ranibennur and Sharavathi Project.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ಬೇಡಿಕೆ ವಿಷಯದಲ್ಲಿ ಈಗಾಗಲೇ ಕೆಲವು ಸ್ನೇಹಿತರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಮೈಸೂರು ದೇಶ ಪ್ರಗತಿ ಹೊಂದಿದ ದೇಶ. ಮಾದರಿ ಮೈಸೂರು ಎಂದು ಕೀರ್ತಿಗಳಿಸಿರಬೇಕಾಗಿದ್ದರೆ ಈ ಮರಾಮತ್ ಇಲಾಖೆಯಲ್ಲಿ ಹಿಂದೆ ಕೆಲಸ ಮಾಡಿದಂಥ ಅಧಿಕಾರಿಗಳು ಬಹಳ ದಕ್ಷತೆಯಿಂದ ಅನೇಕ ಕಾರ್ಯಗಳನ್ನು ನಡೆಸಿ ಮೈಸೂರಿಗೆ ಕೀರ್ತಿ ತಂದಿದ್ದಾರೆ. ಈ ಸಂದರ್ಭದಲ್ಲಿ ಅವರು ಮಾಡಿರುವ ಸೇವೆಯನ್ನು ಸ್ಮರಿಸಿಕೊಳ್ಳತಕ್ಕಂಥಾದ್ದು ಮಾನವೀಯತೆಯ ದೃಷ್ಟಿಯಿಂದ ಅಗತ್ಯ ಎಂದು ನಾನು ಅಭಿಪ್ರಾಯಪಡುತ್ತೇನೆ. ಈಗ ಭಾರತರತ್ನ ಎಂದು ಕೀರ್ತಿಗಳಿಸಿದ ವಿಶ್ವವಿಖ್ಯಾತ ಇಂಜಿನೀಯರು, ಹಿರಿಯರೂ ಪೂಜ್ಯರೂ ಆದ ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ದೇಶದಲ್ಲಿ ಜನ್ಮ ತಾಳಿದುದು ಮೈಸೂರಿಗೆ ಒಂದು ಹೆಮ್ಮೆ ; ಹಾಗೂ ಈ ಇಲಾಖೆಗೆ ಒಂದು ಹೆಮ್ಮೆ ಎಂದು ಹೇಳಬೇಕಾಗಿದೆ.

ಈ ಸಭೆಯ ಮುಂದೆ ಬಂದಂಥ ಎಲ್ಲಾ ಬೇಡಿಕೆಗಳ ಮೇಲೂ ಮಾತನಾಡಿದ ಅನೇಕ ಸ್ನೇಹಿತರು ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡ ಲಂಚಗೂಳಿತನ ಜಾಸ್ತಿಯಾಗಿದೆ ಎಂದು ಹೇಳಿದರು ; ಈ ಇಲಾಖೆಯಲ್ಲಿಯೂ ಕೂಡಾ ಜಾಸ್ತಿ ಇದೆ ಎಂದು ಅಭಿಪ್ರಾಯಪಟ್ಟರು. ಯಾವ ಜಮಾನಿಗೆ ಜಾಸ್ತಿ ಗೊಬ್ಬರ ಹಾಕಿ ಫಲವತ್ತಾಗಿ ಬೆಳೆ ತೆಗೆಯಬೇಕು ಎಂದು ಹೊರಡುತ್ತೇವೆಯೋ ಅಲ್ಲಿ ಸ್ವಲ್ಪ ಕಳೆಯೂ ಜಾಸ್ತಿಯಾಗುತ್ತದೆ. ಕಳೆ ಜಾಸ್ತಿಯಾಯಿತು ಎಂದ ಕೂಡಲೇ ಬೆಳೆ ಬಿಡುವುದಕ್ಕಾಗುವುದಿಲ್ಲ. ಆಡಳಿತದಲ್ಲಿರುವ ಕಳೆ ಕೀಳಬೇಕಾದರೆ ಆಡಳಿತ ನಡೆಸುವವರು ಹಾಗೂ ಖಾಸಗಿ ಮನುಷ್ಯರಾದ ನಾವು ಸಹಕರಿಸಿ ಈ ಕಳೆಯನ್ನು ಕಿತ್ತು ಬೆಳೆಯನ್ನು ತೆಗೆದುಕೊಳ್ಳುವಂತೆ ಇಲಾಖೆಯ ಲೋಪದೋಷಗಳನ್ನು ಸರಿಪಡಿಸಬೇಕು ಎಂದು ಅಭಿಪ್ರಾಯಪಡುವವರಲ್ಲಿ ನಾನೂ ಒಬ್ಬ. ಕೆಲವು ಸ್ನೇಹಿತರು ಹಂಗಾಮಿಯಾಗಿ ಅಸಿಸ್ಟೆಂಟ್ ಇಂಜನೀಯರಾಗಿ ಕೆಲಸಮಾಡುತ್ತಿರುವ ಅಧಿಕಾರಿಗಳು ತಮ್ಮ ಕಾರ್ಯದಲ್ಲಿ ತಾತ್ಸಾರ ತೋರುತ್ತಿದ್ದಾರೆಂದು ಹೇಳಿದ್ದಾರೆ. ಈ ಅಭಿಪ್ರಾಯ ಸತ್ಯಕ್ಕೆ ದೂರವಾದುದು. ತಮ್ಮ ನ್ಯಾಯವಾದ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿರುವುದರ ಜೊತೆಗೆ ತಮ್ಮ ಕಾರ್ಯದಲ್ಲಿ ನಿಷ್ಠೆಯಿಂದ ಕೆಲಸಮಾಡಿ ಇಲಾಖೆಯ ಗೌರವವನ್ನು ಕಾಪಾಡಿಕೊಂಡು ಹೋಗುತ್ತಿದ್ದಾರೆ. ಅವರು ಅಷ್ಟೇ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಮುಂದೆ ತಮ್ಮ ಬೇಡಿಕೆ ಏನಿದೆಯೋ ಅದನ್ನು ಸರ್ಕಾರ ಸಲ್ಲಿಸಿದರೆ ನಾವು ಕೆಲಸ ಮಾಡುತ್ತೇವೆ ಎಂಬ ಮನೋಭಾವ ಅವರಲ್ಲಿಲ್ಲ. ಸರ್ಕಾರದ ಮುಂದೆ ತಮ್ಮ ಬೇಡಿಕೆ ಇದೆ, ಅವರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ತಿಳಿದು ತಮ್ಮ ಕರ್ತವ್ಯವನ್ನು ತಾವು ಮಾಡಿಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಇಲಾಖೆಯಲ್ಲಿ ಲಂಚಗೂಳಿತನವಿದೆ ಎಂಬ ಕೂಗು ಕೆಲವೆಡೆ ಇದೆ. ಈಗ ಬಂದಿರುವ ತರುಣ ಅಧಿಕಾರಿಗಳು ಇದನ್ನು ಕಡಮೆ ಮಾಡುತ್ತಾರೆಂಬ ಆಶಾಭಾವನೆ ಕಾಣುತ್ತಿದೆ. ಆದರೂ ಕೆಲವು ಲೋಪದೋಷಗಳಿರುವುದನ್ನು ಸರ್ಕಾರದ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ.

ಅಭಾವ ಪೀಡಿತ ಪ್ರದೇಶಗಳು, ಆಗಾಗ ಅಭಾವಕ್ಕೊಳಗಾದಾಗ, ಯುದ್ಧಕಾಲೇ ಶಸ್ತ್ರಾಭ್ಯಾಸಃ ಎನ್ನುವಂತೆ ಅಲ್ಲಿನ ಕೆರೆಗಳ ಹೂಳು ತೆಗೆಯಿರಿ, ಕೆರೆ ಕಟ್ಟೆ, ಅದು ಮಾಡಿ, ಇದು ಮಾಡಿ ಎಂದು ಹೇಳುವುದಕ್ಕೆ ಬದಲು ಪ್ರತಿ ಸರ್ಕಲ್‌ನಲ್ಲಿಯೂ, ಡಿವಿಜನ್‌ನಲ್ಲಿಯೂ ಸರ್ವೆ ಸಿಬ್ಬಂದಿ ಇದೆ, ಅವರಿಂದ ಎಲ್ಲೆಲ್ಲಿ ಅಭಾವವಿದೆಯೋ ಆ ಪ್ರದೇಶಗಳನ್ನು ಸರ್ವೆ ಮಾಡಿಸಿ, ಎಲ್ಲೆಲ್ಲಿ ಕೆರೆಗಳನ್ನು ಕಟ್ಟುವುದಕ್ಕೆ ಸಾಧ್ಯ ಎನ್ನುವುದನ್ನು ನೋಡಿ ಅಲ್ಲಿ ಆ ಕೆಲಸ ಮಾಡುವುದು ಅಗತ್ಯ. ಈಗ ಹಾಗೆ ಮಾಡುತ್ತಿಲ್ಲ. ಆಯಾ ಗ್ರಾಮದವರು ಸರ್ಕಾರಕ್ಕೆ ಅರ್ಜಿ ಕೊಡಬೇಕು, ಕೇಳಿಕೊಳ್ಳಬೇಕು ಆಗ ಆ ಕೆಲಸ ಮಾಡುತ್ತಾರೆ. ಈರೀತಿಯಾಗಬಾರದು. ಯಾವ ಯಾವ ಪ್ರದೇಶ ಆಗಾಗ ಅಭಾವಕ್ಕೊಳಗಾಗುತ್ತದೆಯೋ ಅಲ್ಲಿ ಸರ್ವೆ ಮಾಡಿಸಿ ಕೆರೆಗಳು, ಕಟ್ಟೆಗಳು, ಪಿಕ್‌ಅಪ್‌ಗಳು ಮುಂತಾದುವನ್ನು ನಿರ್ಮಾಣ ಮಾಡಬಹುದಾದ ಕಡೆಗಳಲ್ಲೆಲ್ಲ ಈ ಕೆಲಸಗಳನ್ನು ತೆಗೆದುಕೊಂಡು ಮಾಡಿಸಬೇಕೆಂದು ಹೇಳುತ್ತೇನೆ.

ಈ ಇಲಾಖೆಯಲ್ಲಿ ದಕ್ಷತೆ ಕಡಮೆ ಎನ್ನುವ ಅಭಿಪ್ರಾಯ ಕೆಲವರು ವ್ಯಕ್ತಪಡಿಸುತ್ತಾರೆ. ನಾನಾ ಕಾರಣಗಳಿವೆ. ಯಾರು ನ್ಯಾಯ, ನೀತಿ, ಧರ್ಮ, ಸತ್ಯ ಇರಬೇಕೆಂದು ಹೇಳಿ ಉದ್ದಾಮ ಭಾಷಣಗಳನ್ನು ಮಾಡುತ್ತಾರೋ, ಬರೆಯುತ್ತಾರೋ, ತಾವು ನಾಯಕರೆಂದು ಹೇಳಿಕೊಳ್ಳುತ್ತಾರೋ, ಅಂಥವರೂ ಇದಕ್ಕೆ ಕಾರಣ. ಒಂದು ಪ್ರದೇಶದಲ್ಲಿ ಕೆರೆ ಅಥವಾ ಕಟ್ಟೆ ಕಟ್ಟಬೇಕೆಂದು ಏರ್ಪಾಡು ಮಾಡಿದರೆ, ಅವರ ಅಥವಾ ಅವರ ಕಡೆಯವರ ಜಮೀನು ಮುಳುಗಡೆಯಾಗುವುದೆಂದು ತಿಳಿದ ಕೂಡಲೆ, ಅಥವಾ ಮುಳುಗಡೆಯಾಗುವ ಜಮೀನಿನವರು ಬಂದು ಕೇಳಿಕೊಂಡ ಕೂಡಲೆ ಚೀಫ್ ಇಂಜಿನಿಯರಿಗೋ ಸೂಪರಿಂಟೆಂಡಿಂಗ್ ಇಂಜಿನಿಯರಿಗೋ ಫೋನ್ ಮಾಡಿ ಆ ಕೆಲಸವನ್ನು ನಿಲ್ಲಿಸಿಬಿಡಿ ಎಂದು ಹೇಳುತ್ತಾರೆ. ಈ ರೀತಿ ಮಾಡಿದರೆ ಆಡಳಿತ ಕೆಡುತ್ತದೆಯೋ ಇಲ್ಲವೋ ಎನ್ನುವುದನ್ನು ಯೋಚನೆ ಮಾಡಬೇಕು. ಹೀಗೆ ಮಾಡಬಹುದೆ ? ಕೃಷ್ಣರಾಜ ಸಾಗರ ಅಣೆಕಟ್ಟುವುದರಲ್ಲಿ ಸಾವಿರಾರು ಎಕರೆ ಮುಳುಗಡೆಯಾಯಿತು, ಆದರೆ ಇಂದು ಲಕ್ಷಾಂತರ ಎಕರೆಗೆ ಅನುಕೂಲವಾಗಿಲ್ಲವೆ ? 'ಜಗವು ನಗಬೇಕಾದರಾರಾದರಳಬೇಕು' ಎಂದು ಪೂಜ್ಯ ಕೆ. ವಿ. ಪುಟ್ಟಪ್ಪನವರು ಹೇಳಿದ ಹಾಗೆ, ಬಹುಜನಕ್ಕೆ ಒಳ್ಳೆಯದಾಗಬೇಕಾದಾಗ ಕೆಲವರಿಗೆ ತೊಂದರೆಯಾಗುತ್ತದೆ, ಜನರ ಕಷ್ಟ ನಿವಾರಣೆಯಾಗಬೇಕಾದರೆ ಕೇವಲ ಉದ್ದಾಮ ಭಾಷಣಗಳನ್ನು ಮಾಡುವುದಕ್ಕೆ ಬದಲು ಕಟುವಾಗಿಯೇ ಒರಟಾಗಿಯೇ ಮಾತನಾಡಲಿ, ಆಡಳಿತ ನಡೆಸುವವರ ಹೃದಯದಲ್ಲಿ ಒಳ್ಳೆಯ ಕೆಲಸ ಮಾಡಬೇಕೆಂದಿದ್ದರೆ, ಅಂಥವರಿಂದ ಒಳ್ಳೆಯ ಕೆಲಸವಾಗುತ್ತದೆ. ನ್ಯಾಯ, ಸತ್ಯ, ಧರ್ಮ ಮುಂತಾದ ಪದಗಳನ್ನು ಕೇವಲ ಬಾಯಲ್ಲಿ ಹೇಳುವುದಕ್ಕೆ ಬದಲು ಮಾತನಾಡದೆ ಕೆಲಸ ಮಾಡುವುದು ಒಳ್ಳೆಯದು. ತತ್ವಗಳು ತಲೆಯಲ್ಲಿದ್ದರೆ ಸಾಲದು, ಅದನ್ನು ಹೃದಯಕ್ಕಿಳಿಸಿಕೊಳ್ಳಬೇಕು. ಅಂತಹವರಿಂದ ದೇಶಕ್ಕೆ ಉಪಕಾರವಾಗುತ್ತದೆ. ರಿಕಾರ್ಡುಗಳ ವಿಲೇವಾರಿ ವಿಷಯವಾಗಿ ನಿಧಾನವಾಗುತ್ತಿವೆ. ಐದು ವರ್ಷಕ್ಕೂ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಮೇಲ್ಪಟ್ಟು ನಿಧಾನವಾದ ನಿದರ್ಶನಗಳಿವೆ. ಒಂದು ಸ್ಥಳದಲ್ಲಿ ಒಂದು ಕೆರೆಯನ್ನು ಕಟ್ಟಿದರೆ ಸರ್ಕಾರಕ್ಕೆ ಲಾಭವೂ ಬರುತ್ತದೆ, ಆ ಪ್ರದೇಶದ ಜನರಿಗೂ ಒಳ್ಳೆಯದಾಗುತ್ತದೆ ಎಂದು ತೀರ್ಮಾನ ಮಾಡಿದರೆ, ಕೆಲವು ಜನ ಸ್ವಾರ್ಥಿಗಳು ಬಂದು ಆ ಸ್ಥಳದಲ್ಲಿ ಬೇಡ, ಇನ್ನೂ ದಕ್ಷಿಣಕ್ಕೆ ಕಟ್ಟಿದರೆ ಒಳ್ಳೆಯದು, ಉತ್ತರಕ್ಕೆ ಕಟ್ಟಿದರೆ ಒಳ್ಳೆಯದು ಲಾಭ ಬರುತ್ತದೆ ಎಂದು ಹೇಳಿಕೊಂಡರೆ ರಿಕಾರ್ಡು ಹಿಂದೆ ಮುಂದೆ ತಿರುಗಿ ಆ ವರದಿ ಬರಬೇಕಾದರೆ ಮೂರು ನಾಲ್ಕು ವರ್ಷವಾಗುತ್ತದೆ. ಹೀಗೆಲ್ಲ ಮಾಡಿದರೆ ವೃಥಾ ಕಾಲಹರಣವಾಗುತ್ತದೆ. ದೇಶದಲ್ಲಿರುವ ಬಡತನ ಹೋಗಬೇಕಾದರೆ, ಆರ್ಥಿಕ ಮಟ್ಟ ಉನ್ನತಗೊಳ್ಳಬೇಕಾದರೆ, ಪಬ್ಲಿಕ್ ವರ್ಕ್ಸ್ ಇಲಾಖೆಯ ಕಾರ್ಯ ಬಹಳ ಮುಖ್ಯವಾದುದು. ಜನ ಒಂದು ಅರ್ಜಿ ಕೊಟ್ಟರೆ ಅದು ಬೇಗ ತೀರ್ಮಾನವಾಗಬೇಕು, ಕೆಲಸ ಚುರುಕಾಗಿ ಆಗಬೇಕು. ಶ್ರೀ ಕೆ. ಪುಟ್ಟಸ್ವಾಮಿಯವರು ವಿಶ್ವೇಶ್ವರಯ್ಯ ನಾಲೆಯ ವಿಷಯದಲ್ಲಿ ಮಾತನಾಡುತ್ತಾ 1,200,000 ಎಕರೆ ತರೀ ವ್ಯವಸಾಯವಾಗಬೇಕಾಗಿತ್ತು, ಆಗಲಿಲ್ಲ, ಕಾರಣ ವೇನು ಎಂದು ಕೇಳಿದರು. ವಿಶ್ವೇಶ್ವರಯ್ಯ ನಾಲಾ ಬಂದ ಮೇಲೆ ಯಾವ ರೀತಿ ಬ್ಲಾಕ್ ಸಿಸ್ಟಂ ಜಾರಿಗೆ ಬಂತು, ಅದು ಕಾರ್ಯರೂಪಕ್ಕೆ ತರುವುದರಲ್ಲಿ ಏನು ತೊಂದರೆಯಾಯಿತು ಎಂಬ ಎಲ್ಲಾ ವಿಷಯಗಳೂ ಸಹ ಶ್ರೀಯುತರಿಗೆ ಚೆನ್ನಾಗಿ ಗೊತ್ತು. ಹಾಲಿ ಇರುವ ವ್ಯವಸ್ಥೆಯನ್ನು ಸರಿಪಡಿಸಲು ಕೈಗೊಂಡಿರುವ ಕಾರ್ಯಕ್ರಮವೂ ಸಹ ಗೊತ್ತಿದೆ ಮತ್ತು V.C. ಏರಿಯಾ ಬೋರ್ಡಿನ ಸದಸ್ಯರಾಗಿದ್ದೂ ಅಪರಿಚಯಸ್ಥರಂತೆ ಮಾತನಾಡುತ್ತಿದ್ದಾರೆ. ಇದು ಬಹಳ ಆಶ್ಚರ್ಯ. ವಿಶ್ವೇಶ್ವರಯ್ಯ ನಾಲೆಯಲ್ಲಿ ನೀರು ಬಂದಾಗ ಮೂವತ್ತು ಮೂವತ್ತೈದು ಸಾವಿರ ಎಕರೆ ಮಾತ್ರ ತರಿ ಆಯಿತು. ಆ ಮೇಲೆ ವರ್ಷೇ ವರ್ಷೇ ಕ್ರಮೇಣ ಜಾಸ್ತಿಯಾಗುತ್ತಾ ಬಂದಿತು. ಹಿಂದಿನ ತೀರ್ಮಾನದಂತೆ ಒಂದೇ ನಾಲೆಯಲ್ಲಿ ತರಿ, ಖುಷ್ಕಿ, ಬಾಗಾಯಿತು ಎಂದು ಬ್ಲಾಕ್ ವಿಂಗಡಿಸಿದ ಪ್ರಯುಕ್ತ ಸದಾ ನೀರು ಹರಿಯುವ ಪ್ರದೇಶದಲ್ಲಿ ಬ್ಲಾಕ್ ಸಿಸ್ಟಂ ಜಾರಿಗೆ ತರಲು ಅವಕಾಶವಾಗಲಿಲ್ಲ. ಕಳೆದ ಎರಡು ವರ್ಷಗಳಲ್ಲಿ ಇಲಾಖೆಯವರು ಕಬ್ಬು ಬೆಳೆಯುವ ಪ್ರದೇಶವನ್ನು ಬೇರ್ಪಡಿಸಿ ಬ್ಲಾಕ್ ವಿಂಗಡಿಸಿದರು. ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಾರದೆಂದು ಕಂಡ ಈಗಿನ ಮರಾಮತ್ ಇಲಾಖಾ ಸಚಿವರಾದ ಮಾನ್ಯ ಶ್ರೀ ವೀರಣ್ಣಗೌಡರೂ ಮತ್ತು ಇತರ ರೈತ ಮುಖಂಡರೂ ಸಹ ತೀರ್ಮಾನವನ್ನು ವಿರೋಧಿಸಿದರು. ಆ ಸಭೆಯಲ್ಲಿ ಶ್ರೀ ಪುಟ್ಟಸ್ವಾಮಿಯವರೂ ಸಹ ಇದ್ದರು. ಪೂರ್ಣ ಪರಿಚಯವುಳ್ಳ ಶ್ರೀ ಪುಟ್ಟಸ್ವಾಮಿಯವರು ಏನೂ ಅರಿಯದವರಂತೆ ಏಕೆ ಮಾತನಾಡುತ್ತಿದ್ದಾರೆಂಬುದು ಅರ್ಥವಾಗದಂತಿದೆ. ಪ್ರತಿ ವರ್ಷ ಬ್ಲಾಕ್ ವಿಂಗಡಿಸಿ ನೀರು ಒದಗಿಸಲು ಇರುವ ತೊಂದರೆಯನ್ನು ಗಮನಿಸಿ ಸರಿಯಾದ ತೀರ್ಮಾನ ಕೈಗೊಳ್ಳಲು ಹಾಲಿ ಇರುವ V.C. ಏರಿಯಾ ಬೋರ್ಡ್ ಬ್ಲಾಕ್ ಸಿಸ್ಟಂ ವಿಷಯ ಪರ್ಯಾಲೋಚನೆ ಮಾಡುತ್ತಿದೆ. ಆ ಸಮಿತಿಯಲ್ಲೂ ಶ್ರೀ ಪುಟ್ಟಸ್ವಾಮಿಯವರಿದ್ದಾರೆ. ಶ್ರೀಯುತರು ಸ್ಥಳ ಪರಿಚಯವಿಲ್ಲದೆ ಅಭಿಪ್ರಾಯ ಕೊಡುವುದಕ್ಕೆ ಬದಲು ವಿಷಯವನ್ನು ಚೆನ್ನಾಗಿ ಅರಿತು ಮಾತನಾಡುವುದು ಒಳ್ಳೆಯದು. ಬಹು ಮುಖ್ಯ ವಿಚಾರವೆಂದರೆ ಮಾನ್ಯ ಸಚಿವರು ಈ ವಿಷಯವನ್ನು ಗಮನಿಸಬೇಕೆಂದು ಕೋರುತ್ತೇನೆ. ಪಿಕಪ್ ಮಾಡಬಹುದೆಂದು ಗ್ರಾಮಸ್ಥರು ಅರ್ಜಿ ಕೊಟ್ಟ ಮೇಲೆ ಅದನ್ನು ಮಾಡುವುದಕ್ಕೆ ಬದಲು, ಸಚಿವರೇ ಇದಕ್ಕೆ ಒಂದು ಸಿಬ್ಬಂದಿಯನ್ನು ನೇಮಕ ಮಾಡಿ, ಎಷ್ಟೆಷ್ಟು ನೀರು ವೃಥಾ ವ್ಯರ್ಥವಾಗಿ ಹೋಗುತ್ತಿದೆಯೋ ಅದನ್ನು ತಡೆದು ಕೆಳಗಿನ ಜಮೀನಿಗೆ ಆ ನೀರನ್ನು ಕೊಡಬಹುದೆ ಎನ್ನುವುದನ್ನು ಪರೀಕ್ಷೆ ಮಾಡಿ, ಅದನ್ನು ಕಾರ್ಯಗತ ಮಾಡುವುದು ಸಾಧ್ಯವೆ ಎನ್ನುವುದನ್ನು ನೋಡಬೇಕು.

ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

*ಶ್ರೀ ಬಿ. ವಿ. ದೇಶಾಯಿ (ಗಂಗಾವತಿ).—ಸ್ವಾಮಿ, ಈ ದಿವಸ ಸಭೆಯ ಮುಂದೆ ಒಂಭತ್ತು ಡಿಮ್ಯಾಂಡುಗಳಿವೆ. ಇವುಗಳ ಮೊತ್ತ 23 ಕೋಟಿ 66 ಲಕ್ಷಕ್ಕೆ ಮಿಗಿಲಾಗಿದೆ. ಎಂದರೆ ಹೊಸ ಮೈಸೂರಿನ ಬಡ್ಜೆಟ್ ಏನಿದೆಯೋ ಅದರ ಸುಮಾರು ಅರ್ಧದಷ್ಟು ಬರುತ್ತದೆ. ಈ 23-24 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಂಬಂಧಪಟ್ಟಹಾಗೆ, ಕೆಲವು ಡಿಮ್ಯಾಂಡುಗಳ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಇದು ಸಾರ್ವಜನಿಕರ ಹಣ, ಜನತೆಯಿಂದ ಬಂದ ಹಣ; ಇಷ್ಟೊಂದು ಹಣವನ್ನು ವಿಚಕ್ಷಣೆಯಿಂದ ಹಾಗೂ ವಿವೇಕದಿಂದ, ಮಿತವ್ಯಯದಿಂದ ಖರ್ಚು ಮಾಡಬೇಕಾದರೆ, ಈ ಕಾರ್ಯ ಒಬ್ಬರು ಮಂತ್ರಿಗಳಿಂದ ಸಾಧ್ಯವಿಲ್ಲ ಎನಿಸುತ್ತದೆ. I.N.E.D. Commercial and Non-commercial ಮತ್ತು Irrigation and Power Development ಈ ಇಲಾಖೆಗಳನ್ನು ಬೇರೆ ಬೇರೆ ಮಾಡಬೇಕೆಂದು ನನ್ನ ಅಭಿಪ್ರಾಯ. Irrigation and Power ಈ ಎರಡನ್ನು ತೆಗೆದುಕೊಂಡರೆ ಸುಮಾರು ಹತ್ತು ಹನ್ನೆರಡು ಕೋಟಿ ರೂಪಾಯಿ ಖರ್ಚಾಗುತ್ತದೆ. ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ Capital outlay ಹೆಚ್ಚಾಗಿದೆ. ಅಧಿಕ ಖರ್ಚಿನ ಖಾತೆ ಇದು. ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕಾದರೆ ಇದರಲ್ಲಿ ಬೇರೊಂದು ಶಾಖೆಯನ್ನು ತೆರೆಯುವುದು ಅಗತ್ಯ. ಹೊಸ ಮೈಸೂರಿನಲ್ಲಿರುವ river valley projects ಬೇರೆ ಬೇರೆ ರೀತಿಯಾಗಿದೆ. ಕೆಲವು ಬರಿಯ ನೀರಾವರಿ ಯೋಜನೆಗಳಾದರೆ ಮತ್ತೆ ಕೆಲವು ವಿದ್ಯುಚ್ಛಕ್ತಿ ಯೋಜನೆಗಳಿವೆ; ಇನ್ನು ಕೆಲವು multi-purpose ಯೋಜನೆಗಳಿವೆ. ಇವಲ್ಲದೆ ಮೀಡಿಯಮ್ ಮತ್ತು ಮೈನರ್ ಯೋಜನೆಗಳಿವೆ. ಇವುಗಳಿಂದ ಪೂರ್ಣವಾಗಿ ರೈತರಿಗೆ ಫಲ ದೊರೆಯುವುದು. ಅವಶ್ಯಕವಿದ್ದರೆ, ಇವೆಲ್ಲವನ್ನೂ ಪೂರ್ಣವಾಗಿ ಉಪಯೋಗ ಮಾಡಬೇಕಾದರೆ, ಈ ಖಾತೆಗಳನ್ನು ಬೇರೆ ಬೇರೆ ವಿಂಗಡಿಸುವುದೂ, ಪಬ್ಲಿಕ್ ವರ್ಕ್ಸ್ ಜನರಲ್ ಎಂದು ಬೇರೆ ಮಾಡುವುದೂ ಅತ್ಯಗತ್ಯ. ನಾವು ಹೊಸ ಮೈಸೂರಿನ ನಕಾಸೆಯನ್ನು ನೋಡಿದರೆ ಕ್ಲಿಯರಾಗಿ ಅದರಲ್ಲಿ ಕಾಣುವುದು ಕೆಲವೊಂದು ರಿವರ್ ವ್ಯಾಲೀಸ್. ಉತ್ತರ ಕರ್ಣಾಟಕದಲ್ಲಿ ನೋಡಿದರೆ ಕೃಷ್ಣಾ ವ್ಯಾಲಿ, ತುಂಗಭದ್ರಾ ವ್ಯಾಲಿ, ಕಾವೇರಿ ವ್ಯಾಲಿ ಮತ್ತು ಇತರ ಸಣ್ಣ ಡಿಸ್ಟ್ರಿಬ್ಯೂಟರಿಗಳು ಮತ್ತು ಟ್ರಿಬ್ಯೂಟರಿಗಳು ಮತ್ತು ಮೈನರ್ ನಾಲೆಗಳು ಇವೆಲ್ಲಾ ಇವೆ. ಆ ಭಾಗದಲ್ಲಿ ಪ್ರತಿಯೊಂದು ವ್ಯಾಲಿ ಇರುವ ಕಡೆಯೂ ಬಹಳವಾಗಿ ಮಳೆಯಾಗುವುದರಿಂದ ಅಲ್ಲಿ ಹರಿಯುವ ನೀರು ವಿಶೇಷವಾಗಿದೆ. ಅಲ್ಲಿ ವಾಸ ಮಾಡುವ ಜನರಿಗೆ ಅದರ ಸದುಪಯೋಗ ಪೂರ್ಣವಾಗಿ ಆಗಬೇಕಾದರೆ ಅದಕ್ಕೇ ಬೇರೆ ಶಾಖೆ ಮಾಡಿ ಆ ನೀರನ್ನು ಪೂರ್ಣವಾಗಿ ಉಪಯೋಗಿಸುವುದು ಅತ್ಯಾವಶ್ಯಕ. ಅದೇ ರೀತಿ ಕೊಟ್ಟಕರ್ ಭಾಗದಲ್ಲಿ, ಶರಾವತಿ ವ್ಯಾಲಿ, ಮಹಾನದಿ ಮತ್ತು ಉಳಿದ ನದಿಗಳಿರುವ ಕಡೆ ಹೆಚ್ಚು ಇರಿಗೇಷನ್ ಇರುವುದಿಲ್ಲ, ಪವರ್ ಪ್ರಾಜೆಕ್ಟ್ ಇದೆ. ಅದನ್ನು

ಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಅವಕಾಶ ಇದೆ, ಹಾಗೆ ಉಪಯೋಗಿಸಿಕೊಳ್ಳುವುದು ಅತ್ಯಾವಶ್ಯಕ. ಕೆಲವು ಮಲ್ಟಿಪರ್ಪಸ್ ರಿವರ್ ವ್ಯಾಲಿ ಪ್ರಾಜೆಕ್ಟ್‌ಗಳಿವೆ, ಅವುಗಳಿಂದ ಪವರ್ ಮತ್ತು ಇರಿಗೇಷನ್‌ಗೆ ಉಪಯೋಗ ಇದೆ. ಆ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಸಂಬಂಧವಾಗಿರುವ 24 ಕೋಟಿ ರೂಪಾಯಿಗಳ ಹಣ ಒಬ್ಬ ಮಂತ್ರಿಗಳ ಕೈಯಲ್ಲಿ ಕೊಟ್ಟರೆ ಅವರು ಅದನ್ನು ಜಾಗ್ರತೆ ಸದ್ವಿನಿಯೋಗ ಮಾಡಲು ಅಸಾಧ್ಯವಾಗುತ್ತದೆ. ಉದಾಹರಣೆಗೆ ತುಂಗಭದ್ರಾ ಪ್ರಾಜೆಕ್ಟಿನಿಂದ ಆರು ಲಕ್ಷ ಎಕರೆ ನೀರಾವರಿಯಾಗುತ್ತದೆ. ಹೋದ ವರ್ಷವೇ ಇದನ್ನು ಹೇಳಿದ್ದೇನೆ. ತುಂಗಭದ್ರಾ ಡ್ಯಾಂನಲ್ಲಿ ನೀರು ತುಂಬಾ ಇದೆ, ಕಾಲುವೆ ಆಗಿಲ್ಲ, ಮೈನ್ ಕೆನಾಲ್, ಡಿಸ್ಟ್ರಿಬ್ಯೂಟರಿ, ನಾಲಾ ಪೂರ್ಣವಾಗಿ ಆಗಿಲ್ಲ. 1957-58ನೆಯ ಸಾಲಿನಲ್ಲಿ ಹೊಸದಾಗಿ ಒಂದು ಎಕರೆಗೂ ನೀರು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಯಾರು, ಏನು ಎಂದು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಒಬ್ಬ ಮಂತ್ರಿಗಳು ಅಲ್ಲಿ ಕೆಲಸ ಆಗುವ ಪ್ರದೇಶಕ್ಕೆ ಹೋಗಿ ನೋಡುವುದಕ್ಕೆ ಮತ್ತು ಪರ್ಸನಲ್ ಸೂಪರ್‌ವಿಷನ್ ಮಾಡುವುದಕ್ಕೆ ಬಹಳ ದೂರವಿದೆ, ಆ ಪ್ರದೇಶದಲ್ಲಿ ಕೆಲಸಮಾಡುವ ಸಿಬ್ಬಂದಿ ಮತ್ತು ಆಫೀಸರುಗಳಮೇಲೆ ಗ್ರಿಪ್ ಇಟ್ಟುಕೊಳ್ಳುವುದಕ್ಕೆ ಒಬ್ಬ ಮಂತ್ರಿಗಳಿಗೆ ಸಾಧ್ಯವಾಗುವುದಿಲ್ಲ. ಅಲ್ಲಿ ಈ ದಿವಸ ಹೆಚ್ಚು ನೀರಾವರಿ ಯೋಜನೆಯಿರುವುದರಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಾಬುಗಳನ್ನು ಬೇರೆ ಬೇರೆ ವಿಂಗಡಿಸಿ ಬೇರೆಬೇರೆ ಮಂತ್ರಿಗಳನ್ನು ನೇಮಿಸಿ ಬೇರೆಬೇರೆ ಶಾಖೆಗಳನ್ನು ಮಾಡಬೇಕೆಂದು ಕೋರುತ್ತೇನೆ.

ಈಗ ಪ್ರತಿಯೊಂದು ಡಿಮ್ಯಾಂಡಿನ ಮೇಲೂ ಮಾತನಾಡುವುದಕ್ಕೆ ಮತ್ತು ಎಲ್ಲಾ ವಿಷಯಗಳನ್ನೂ ಹೇಳುವುದಕ್ಕೆ ಸಮಯವಿಲ್ಲ. ಒಂದೇ ಒಂದು ವಿಷಯವನ್ನು ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. 29, 50, 53 ಮತ್ತು 47 ನೆಯ ಡಿಮ್ಯಾಂಡುಗಳಿಗೆ ಒಟ್ಟಾಗಿ 24 ಕೋಟಿ ರೂಪಾಯಿ ಒದಗಿಸಿರುವುದರಲ್ಲಿ ಹೈದರಾಬಾದು ಕರ್ಣಾಟಕಕ್ಕೆ 57 ಲಕ್ಷ ಮಾತ್ರ ಇರಿಗೇಷನ್, ರಸ್ತೆ, ಕಮ್ಯೂನಿಕೇಷನ್, ಬಿಲ್ಡಿಂಗ್ಸ್ ಇವುಗಳಿಗಾಗಿ ಕೊಟ್ಟಿರುವಹಾಗೆ ಕಾಣುತ್ತದೆ. ಇದು ಬಿಟ್ಟು ತುಂಗಭದ್ರಾ ಬೋರ್ಡು ಬಳ್ಳಾರಿ—ರಾಯಚೂರು ಎರಡೂ ಕೂಡಿಸಿ ಎರಡು ಕೋಟಿ ರೂಪಾಯಿ ಕೊಡುವುದಿದೆ. I.N.E.D. ಕಮರ್ಷಿಯಲ್ ಆರು ಕೋಟಿ 39 ಲಕ್ಷ 91 ಸಾವಿರ ರೂಪಾಯಿ ಇದೆ. ಇದರಲ್ಲಿ 26 ಲಕ್ಷ 85 ಸಾವಿರ ರೂಪಾಯಿ ಕೆಲವೊಂದು ಪ್ರಾಜೆಕ್ಟುಗಳಿಗಾಗಿ ಇದೆ. ರಾಜಲುಬಂಡೆ ಸ್ಕೀಮು ಇದರಲ್ಲಿ ಬರುತ್ತದೆ. ಈ ಸ್ಕೀಮು ತುಂಗಭದ್ರಾನದಿ ಹರಿಯುವ ಕೊನೆಯಲ್ಲಿ ಮಾನವಿ ತಾಲ್ಲೂಕಿಗೆ ಬಂದರೂ ಮತ್ತೊಂದು ಅಣೆಕಟ್ಟು ಹಾಕಿ ನೀರು ತೆಗೆದುಕೊಂಡು ಕಾಲುವೆ ತೆಗೆಯುತ್ತಿದ್ದಾರೆ. ಆದರೆ ಆ ಡಿಸ್ಟ್ರಿಕ್ಟಿನಲ್ಲಿ ವಿಚಿತ್ರ ಪರಿಸ್ಥಿತಿಯಿದೆ. ತುಂಗಭದ್ರಾ ಡ್ಯಾಂ ತಯಾರಾಗಿದ್ದರೂ ಕೆನಾಲ್ ಆಗಿಲ್ಲ, ರಾಜುಲುಬಂಡೆ ಕೆನಾಲ್ ಆಗಿಲ್ಲ. ಹೀಗಾಗಿ ರೈತರಿಗೆ ನೀರು ಸಿಕ್ಕುತ್ತಿಲ್ಲ. ಆಗಿಲ್ಲದಿರುವುದಕ್ಕೆ ನಮ್ಮ ಸರ್ಕಾರ ಮಾತ್ರ ಕಾರಣವಲ್ಲವೆಂಬುದನ್ನು ಒಪ್ಪುತ್ತೇನೆ, ಈ ದಿವಸ ಆ ಸ್ಕೀಮು ಜಾರಿಗೆ ತಂದಮೇಲೆ ಅದರಿಂದ ಅನುಕೂಲ ಪಡೆಯುವ ಪ್ರದೇಶ ಪೂರ್ಣವಾಗಿ ಆಂಧ್ರ ದೇಶಕ್ಕೆ ಸೇರಬೇಕು ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಸಂಜೀವರೆಡ್ಡಿಯವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಆಮೇಲೆ ನಮ್ಮ ಮುಖ್ಯ ಮಂತ್ರಿಗಳೂ ಆಂಧ್ರದ ಮುಖ್ಯ ಮಂತ್ರಿಗಳೂ ಭೇಟಿಯಾಗಿದ್ದರು. ಆದರೆ ಯಾವರೀತಿ ತೀರ್ಮಾನವಾಯಿತೋ ಗೊತ್ತಿಲ್ಲ. ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟಿನಲ್ಲಿ ಮಾತ್ರ ಆಶಾದಾಯಕವಾದ ಸೂಚನೆಯಿದೆ. ಮೈಸೂರಿನ ಮುಖ್ಯ ಮಂತ್ರಿಗಳು ಆ ಪ್ರದೇಶ ಕನ್ನಡನಾಡಿಗೇ ಸೇರಬೇಕೆಂಬ ಚಳುವಳಿ ಬಹಳವಾಗಿರುವುದರಿಂದ ಹೆಡ್‌ವರ್ಕ್ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ನಮ್ಮಕಡೆ ಹೆಚ್ಚು ವಿಶ್ವಾಸ ವಹಿಸಿ ಅದಕ್ಕೆ ಆಂಧ್ರದವರನ್ನು ಒಪ್ಪಿಸುತ್ತಾರೆಂದು ನಂಬುತ್ತೇನೆ.

ಆಮೇಲೆ ಕಮ್ಯೂನಿಕೇಷನ್ಸ್. ನಮ್ಮಕಡೆ ರಸ್ತೆಗಳು ಬಹಳ ಕಡಮೆ. ರಸ್ತೆಗಳಿಗಾಗಿ ಪಂಚವಾರ್ಷಿಕ ಯೋಜನೆಯಲ್ಲಿ 1958-59 ಕ್ಕೆ B ಮತ್ತು C ಡಿವಿಜನ್‌ಗಳಿಗೆ ಇಷ್ಟಿಷ್ಟು ಕೊಡಲಾಗುವುದೆಂದು ಹೇಳಿದ್ದಾರೆ. ಆದರೆ B ಮತ್ತು C ಡಿವಿಜನ್‌ಗಳಿಗೆ ಆಕ್ಚುಯಲ್ಲಾಗಿ ಒದಗಿಸಿರುವ ಆಂಕಿ ಅಂಶ ನೋಡಿದರೆ ಹೆಚ್ಚಾಗಿಲ್ಲ. ಮತ್ತು ಯಾವ ರಸ್ತೆಗಳಿಗೆ ಹಣ ಕೊಟ್ಟಿದೆಯೆಂದು ನೋಡಿದರೆ ಹಳೇ ರಸ್ತೆಗಳಿಗೆ, ಅದೂ ನಾಲ್ಕುಸಲ ಕಲ್ಲು ಮಣ್ಣು ಜಮಾಯಿಸಿದ್ದ ರಸ್ತೆಗಳಿಗೆ ಕೊಟ್ಟಿದ್ದಾರೆ. ಆಸ್ಫಾಲ್ಟಿಂಗ್ ವಿಚಾರ ನೋಡಿದರೆ ಹೈದರಾಬಾದು ಕರ್ಣಾಟಕಕ್ಕೆ ಎರಡು ಸಾವಿರ ರೂಪಾಯಿಗಳನ್ನೊದಗಿಸಿದ್ದಾರೆ. ಆ ಕಡೆ ಹೆಚ್ಚಾಗಿ ರಸ್ತೆಗಳು ಡೆವಲಪ್ ಆಗಿಲ್ಲ, ಆದ್ದರಿಂದ ಆಸ್ಫಾಲ್ಟ್ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ವಿಷಾದವಿದೆ, ಈಗ ಅಲ್ಲಿ ರಾಯಚೂರಿನಿಂದ ಮುನಿರಾಬಾದಿಗೆ, ರಾಯಚೂರಿನಿಂದ ಕನಕಗಿರಿಗೆ ಹೋಗುವ ರಸ್ತೆಗೂ, ರಾಯಚೂರಿನಿಂದ ಗುಲ್ಬರ್ಗದವರೆಗೂ ಆಸ್ಫಾಲ್ಟ್ ಮಾಡುವುದು ಅವಶ್ಯಕ. ಹಾಗೆಯೇ ಬಳ್ಳಾರಿಯಿಂದ ಹೊಸಪೇಟೆವರೆಗೂ ಆಸ್ಫಾಲ್ಟ್ ಮಾಡಬೇಕು. ಹೊಸಪೇಟೆಯಿಂದ ಬೆಂಗಳೂರಿನವರೆಗೆ ಟಾರು ರಸ್ತೆಯಿದೆ, ಅಲ್ಲಿ ಸಿರಗುಪ್ಪ ಹತ್ತಿರ ಸೇತುವೆ ಆಗುವುದರ ಬಗ್ಗೆ ಹೇಳಿತ್ತು. ಆ ರಸ್ತೆಗೂ ಆಸ್ಫಾಲ್ಟ್ ಮಾಡಬೇಕು. ಅಲ್ಲಿ ರಸ್ತೆ ಚೆನ್ನಾಗಿಲ್ಲವೆಂದು ಹೇಳುವುದು ಯೋಗ್ಯವಲ್ಲ. ತಯಾರಾಗಿರುವ ರಸ್ತೆಗಳಿಗೆ ಆಸ್ಫಾಲ್ಟ್ ಮಾಡುವುದಕ್ಕೆ ರೀ-ಅಪ್ರೋಪ್ರಿಯೇಟ್ ಮಾಡಿಯಾದರೂ ಏರ್ಪಾಡು ಮಾಡಬೇಕು.

ನೀರು ಸರಬರಾಯಿ ಬಗ್ಗೆ 12 ಲಕ್ಷ 39 ಸಾವಿರ ರೂಪಾಯಿಗಳು ಮಂಜೂರಾಗಿವೆ. ಹೋದಸಲ ಗಂಗಾವತಿ, ಕೊಪ್ಪಳ ಮತ್ತು ಗುಲ್ಬರ್ಗ ಡಿಸ್ಟ್ರಿಕ್ಟಿನಲ್ಲಿ ಒಂದೆರಡು ತಾಲ್ಲೂಕುಗಳಿಗೆ ನೀರು ಸರಬರಾಯಿ ಯೋಜನೆಮಾಡಿ ಬಜೆಟ್ಟಿನಲ್ಲಿ ಕೆಲವೊಂದು ಹಣ ಮಂಜೂರಾಗಿತ್ತು. ಅದನ್ನು ಲ್ಯಾಪ್ಸ್ ಮಾಡಿ ಮತ್ತೆ ಅದೇ ಹಣವನ್ನೇ ಈ ವರ್ಷ ಕೊಟ್ಟಿದ್ದಾರೆ. ಹೋದ ವರ್ಷದ ಬಜೆಟ್ಟಿಗೂ, ಈ ವರ್ಷದ ಬಜೆಟ್ಟಿಗೂ ಯಾವ ಸಂಖ್ಯೆಯಲ್ಲೂ ವ್ಯತ್ಯಾಸವಿಲ್ಲ. ಈ ರೀತಿ ಮಾಡುವುದು ಯೋಗ್ಯವಲ್ಲ. ಯಾವ ಹಣ ಎಷ್ಟೇ ಕೊಟ್ಟರೂ ಕೂಡ ಕನಿಷ್ಟಪಕ್ಷ ಅದಷ್ಟು ಖರ್ಚುಮಾಡಿ ಸೌಕರ್ಯ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

4 P.M.

ಕೊಪ್ಪಳದಲ್ಲಿ ಎರಡು ಟೆಂಡರುಗಳನ್ನು ಕೊಟ್ಟಿದ್ದಾರೆ. ಆದರಲ್ಲಿ ಸರಿಯಾದ ಕೊಟೇಷನ್ ಯಾರಿಂದಲೂ ಬಂದಿಲ್ಲ. ಗಂಗಾವತಿ ವಾಟರ್ ವರ್ಕ್ಸ್‌ಗೋಸ್ಕರ ಮುನಿಸಿಪಾಲಿಟಿಗೆ ಬರೆದರೂ ನಮಗೆ ಕೆಲಸ ಮಾಡಲಿಕ್ಕೆ ಸಿಬ್ಬಂದಿ ಇಲ್ಲ ಎಂದು ಹೇಳುತ್ತಾರೆ.

(ಶ್ರೀ ಬಿ. ವಿ. ದೇಶಾಯಿ)

ಅದರಂತೆಯೇ ಕಲ್ಬುರ್ಗಿ, ಬಿದರೆಗಳಲ್ಲಿ ಈ ಬಾಬಿಗೆ ಹಣ ಒದಗಿಸಿತ್ತು. ಅದರ ಬಗ್ಗೆ ಹತ್ತು ರೂಪಾಯಿಗಳೂ ಕೂಡ ಖರ್ಚು ಮಾಡಿದಂತೆ ಕಾಣಲಿಲ್ಲ. ಮತ್ತೆ ಈ ವರ್ಷದ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದ್ದಾರೆ. ಈ ವರ್ಷವಾದರೂ 12 ಲಕ್ಷ 39 ಸಾವಿರ ರೂಪಾಯಿಗಳನ್ನು ವಾಟರ್‌ವರ್ಕ್ಸ್ ಬಗ್ಗೆ ಖರ್ಚುಮಾಡಿ ಅಲ್ಲಿಯ ಜನರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಸ್ವಾಮಿ, ನಮ್ಮ ಮುಂದೆ ಇವತ್ತಿನ ದಿವಸ ಇಟ್ಟಿರುವ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ತಮ್ಮ ಮುಂದಿಡಲು ಅಪೇಕ್ಷಿಸುತ್ತೇನೆ.

ಈಗ ವಿಶಾಲವಾದ ಹೈದರಾಬಾದ್ ಕರ್ಣಾಟಕ ಸುಮಾರು 13 ಲಕ್ಷ 789 ಸಾವಿರ ಚದರಮೈಲಿ ವಿಸ್ತೀರ್ಣವಾಗಿದೆ. ಅಂತಹ ವಿಸ್ತೀರ್ಣವಾದ ಪ್ರದೇಶದಲ್ಲಿ ಕೇವಲ 1130 ಮೈಲಗಳ ರಸ್ತೆ ಸೌಕರ್ಯಗಳಿವೆಯೆಂದು ಹೇಳಿದರೆ ಬಹಳ ವಿಷಾದಕರವಾದ ಸಂಗತಿ. ಇದರಿಂದ ಬಡ ಜನರಿಗೆ ಅನಾನುಕೂಲವಾಗಿದೆ. ಆದ್ದರಿಂದ ಈ ಪ್ರದೇಶದಲ್ಲಿ ಇನ್ನೂ ನಾಲ್ಕು ಸಾವಿರ ಮೈಲಗಳಾದರೂ ರಸ್ತೆಗಳನ್ನು ಕಟ್ಟಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಪೂರ್ವಭಾವಿಯಾಗಿ ಸರ್ಕಾರದವರನ್ನು ಬೇಡಿಕೊಳ್ಳುತ್ತೇನೆ.

ನಮ್ಮ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಅಷ್ಟು ಚೆನ್ನಾಗಿ ನಡೆಯುತ್ತಿಲ್ಲ. ಅಲ್ಲಿ ಡಿಸ್ಟ್ರಿಕ್ಟ್ ಬೋರ್ಡ್, ತಾಲ್ಲೂಕ್ ಬೋರ್ಡ್ ಪಂಚಾಯಿತಿ ಬೋರ್ಡುಗಳು ಎಷ್ಟೋ ಅಭಿವೃದ್ಧಿ ಕಾರ್ಯಕ್ರಮಗಳನ್ನು ಎರಡು ವರ್ಷಗಳ ಮುಂಚೆಯೇ ಪ್ರಾರಂಭ ಮಾಡಿದ್ದರೂ ಆ ಕಾರ್ಯಗಳು ಇನ್ನೂ ಕಾರ್ಯಗತವಾಗಲೇ ಇಲ್ಲ. ಅನೇಕ ಪೂರಾ ಕೆಲಸಗಳು ಹಾಗೆಯೇ ನಿಂತು ಹೋಗಿವೆ. ಕಾರಣ ಪಿ. ಡಬ್ಲ್ಯು. ಡಿ. ಯವರು ಈ ವಿಷಯಗಳಿಗೆ ಅಷ್ಟಾಗಿ ಹೆಚ್ಚಿಗೆ ಗಮನ ಕೊಡುತ್ತಿಲ್ಲ. ಪ್ರತಿಯೊಂದು ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ, ಅವುಗಳನ್ನು ಮುಂದು ಮಾಡತಕ್ಕ ಕಾರ್ಯ ಅವರದಾಗಿದೆ. ಇನ್ನು ನಮ್ಮ ಪ್ರದೇಶದಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಈ ಸಭೆಯ ಗಮನಕ್ಕೆ ತರಲು ಅಪೇಕ್ಷೆ ಪಡುತ್ತೇನೆ.

ರಾಯಚೂರ್ ರೋಡ್ ಬಹಳ ಮಹತ್ತರವಾದಂಥ ರಸ್ತೆ. ಇದು ರಾಯಚೂರ್‌ನಿಂದ ನೇರವಾಗಿ ಬೊಂಬಾಯಿ ಕರ್ಣಾಟಕಕ್ಕೆ ಹೋಗುವ ಮುಖ್ಯವಾದ ರಸ್ತೆ. ಈ ರಸ್ತೆಯಲ್ಲಿ ಸುಮಾರು ಏಳು ಮೈಲಗಳವರೆಗೆ ರಾಯಚೂರಿನಿಂದ ಟಾರ್ ರೋಡ್ ಆಗಿದೆ. ಆದರೂ ಕೂಡ ಕೆಲಸ ಅಷ್ಟು ಸಮರ್ಪಕವಾಗಿಲ್ಲ. ಒಂದು ಕೋಟ್ ಟಾರ್ ಮಾಡಿದ್ದಾರೆ. 'ಬಿ' ಕ್ಲಾಸ್ ರಸ್ತೆಗಿಂತ ಕನಿಷ್ಠವಾಗಿದೆ. ಆದ್ದರಿಂದ ಈ ರಸ್ತೆಯನ್ನು ಪೂರಾ 'ಬಿ' ಕ್ಲಾಸ್ ರೋಡ್ ಮಾಡಬೇಕು. ಲಿಂಗಸುಗೂರ್‌ನಿಂದ ರಾಯಚೂರ್‌ವರೆಗೆ ಇರುವ ರಸ್ತೆಯನ್ನು ಬ್ಲ್ಯಾಕ್ ಟಾಪ್ ಮಾಡಿಸಬೇಕು. ಏಕೆಂದರೆ ಈ ರಸ್ತೆಯಲ್ಲಿ ವಾಹನ ಸಂಚಾರ ಜಾಸ್ತಿ ಇರುತ್ತದೆ. ರಸ್ತೆ ಆಗಾಗ್ಗೆ ಕೆಟ್ಟುಹೋಗುತ್ತಿರುತ್ತದೆ. ಇದಕ್ಕೆ ಸರ್ಕಾರದವರು ತಕ್ಕ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ವಿನಯ ಪೂರ್ವಕವಾಗಿ ಬೇಡುತ್ತೇನೆ. ಇದೇ ರಸ್ತೆಯಲ್ಲಿ ಎಷ್ಟೋ ಕಲ್‌ವರ್ಟುಗಳು ನಷ್ಟವಾಗಿವೆ. ಮಲ್ಲಟ್ ಮತ್ತು ನವಕೋಲಗೆ ಮಧ್ಯೆ ಇರುವ ಒಂದು ಸೇತುವೆ ಕುಸಿದು ಬಿದ್ದು ಈಗ್ಗೆ ಎಂಟು ತಿಂಗಳಾದುವು. ಇವತ್ತಿನವರೆಗೂ ಸರ್ಕಾರದವರು ಏನೊಂದು ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರಿಂದ ಅಲ್ಲಿನ ಜನರಿಗೆ ಹೊಳೆಗಳನ್ನು ದಾಟಿಕೊಂಡು ಹೋಗುವ ಪ್ರಮೇಯ ಬಂದಿದೆ. ಇನ್ನು ಮಳೆಗಾಲ ಪ್ರಾರಂಭವಾಗಲಿದೆ. ಆದ್ದರಿಂದ ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚೆಯೇ ಈ ಸೇತುವೆ ರಿಪೇರಿ ಕೆಲಸ ಪೂರ್ತಿಯಾಗಿ ಕಾರ್ಯಗತವಾಗುವಂತೆ ವ್ಯವಸ್ಥೆಗೊಳಿಸಬೇಕೆಂದು ನಾನು ಅವರಲ್ಲಿ ಬೇಡುತ್ತೇನೆ. ಈಗಾಗಲೇ ಅನೇಕ ಸೇತುವೆಗಳು ಡ್ಯಾಮೇಜ್ ಆಗಿರುವ ಪ್ರಸಂಗಗಳು ಬಂದಿವೆ. ಆದ್ದರಿಂದ ಮೊಟ್ಟ ಮೊದಲನೆಯದಾಗಿ ಇಂಜಿನಿಯರ್ ಮೂಲಕ ಸರ್ವೆ ಮಾಡಿಸಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇದೇ ರಸ್ತೆಯಲ್ಲಿ ಅನೇಕ ಕಲ್‌ವರ್ಟ್ಸ್ ಒಡೆದುಹೋಗಿ ಹೋದ ವರ್ಷ ಐದಾರು ಅಪಾಯಗಳುಂಟಾದುವು. ಸುಮಾರು 25-30 ಕಲ್‌ವರ್ಟ್ಸ್‌ಗಳ ಸ್ಥಿತಿ ಚಿಂತಾಜನಕವಾಗಿದೆ. ಈ ರೀತಿಯಾಗಿ ಆಗಿರತಕ್ಕ ಅನಾಹುತಗಳಿಗೆ ಸರ್ಕಾರದವರು ಎಡೆ ಕೊಡಬಾರದೆಂದು ಬಿನ್ನೈಸುತ್ತೇನೆ.

ಇನ್ನು ಹಟ್ಟಿ-ರಾಯಚೂರು ರಸ್ತೆಯ ವಿಷಯ. ಈ ರಸ್ತೆ ಬಹಳ ಮುಖ್ಯವಾದ ರಸ್ತೆ. ಹೆವಿ ಟ್ರ್ಯಾಫಿಕ್ ಇರುವ ರಸ್ತೆ. ಚಿನ್ನದ ಗಣಿಗಳಿಗೆ ಹೋಗತಕ್ಕ ಸಾಮಾನುಗಳು ರಾಯಚೂರಿನಿಂದ ಹಟ್ಟಿಗೆ ಹೋಗಬೇಕು, ಸಾಧಾರಣವಾಗಿ ನೀರಿನ ಮೇಲೆಯೇ ತಿರುಗಾಡಬೇಕು. ಮಳೆಗಾಲದಲ್ಲಿ ಇಲ್ಲಿ ಇನ್ನೂ ಬಹಳ ತೊಂದರೆ. ಎಲ್ಲಿ ಅತ್ಯವಶ್ಯವಿದೆಯೋ ಅಂತಹ ಕಡೆಗಳಲ್ಲಿ ಕಲ್‌ವರ್ಟ್ಸ್‌ಗಳನ್ನು ಕೂಡಲೇ ಕಟ್ಟಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮನ್ವಿ-ಕಾತಲ್ ರಸ್ತೆ ವಿಷಯ. ಈ ರಸ್ತೆಯಿಂದ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗೆ ಹೋಗಬೇಕಾದರೆ ಸುಮಾರು 30-35 ಮೈಲಗಳನ್ನು ಸುತ್ತುಕೊಂಡು ಹೋಗಬೇಕು. ಹಿಂದೆ ಸುಮಾರು 15 ಮೈಲಗಳಲ್ಲಿ ಅಲ್ಲಿಗೆ ಹೋಗುವಂತೆ ಒಂದು ರಸ್ತೆ ಮಾಡುವ ಯೋಜನೆ ಇತ್ತು. ಪ್ಲ್ಯಾನಿಂಗ್ ಟೈಂನಲ್ಲಿ ಅಷ್ಟು ರೋಡನ್ನು ನಿರ್ಮಾಣಮಾಡುವುದಕ್ಕೆ ಹಣವಿಲ್ಲವೆಂದು ಕೇವಲ 5—6 ಮೈಲಗಳ ಅರ್ತ್ ವರ್ಕ್ ಪೂರ್ತಿಯಾಗಿದೆ. ಕೆಲವು ಇನ್ನೂ ಉಳಿದಿದೆ. ಇದು ಬಹಳ ಮುಖ್ಯವಾದ ರಸ್ತೆ. ಅಲ್ಲಿಯ ಜನರಿಗೆ ಸಮಿಪದಲ್ಲಿ ತಾಲ್ಲೂಕ್ ಹೆಡ್‌ಕ್ವಾರ್ಟರ್ಸಿಗೆ ಹೋಗುವುದಕ್ಕೆ ತಕ್ಕ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ರಸ್ತೆಗಳು ಬಹಳ ದುಸ್ಥಿತಿಯಲ್ಲಿದೆ ಎಂಬುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಅವರೇ ಬಂದು ನೋಡಿದ್ದಾರೆ. ಅದೂ ಅಲ್ಲದೆ ಆಭಾಗ ಬಹಳ ಕಪ್ಪು ಭೂಮಿಯಾಗಿದೆ. ಅಲ್ಲಿ ಅರ್ತ್ ಹಾಕಿಸಿ ಅದನ್ನು, ಕ್ಲಾಸ್ 'ಎ' ರೋಡಿಗೆ ಕನ್ವರ್ಟ್ ಮಾಡಬೇಕೆಂದು ಸರ್ಕಾರದವರಿಗೆ ಹೇಳುತ್ತೇನೆ.

ನಾನು ತುಂಗಭದ್ರಾ ಅಡ್‌ವೈಜರಿ ಬೋರ್ಡಿಗೆ ಒಬ್ಬ ಸದಸ್ಯೆ. ಆ ಬೋರ್ಡಿನಲ್ಲಿ ಮೀಟಿಂಗ್‌ಗಳು ಎಷ್ಟೋ ನಡೆದು ಅನೇಕ ಮನವಿಗಳನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಯಾವ ತರಹ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಕೈಗೊಂಡಿಲ್ಲ. ತುಂಗಭದ್ರಾ ನದಿಯ ಎಡಭಾಗದ ದಡದಲ್ಲಿ ಇವತ್ತಿನವರೆಗೂ ನೀರು ಕೊಟ್ಟಿಲ್ಲ, ಕಾಲುವೆಗಳನ್ನೂ ಕಟ್ಟಿಲ್ಲ. ಕಾಲುವೆಗಳಿಂದಾದರೂ ನೀರು ಕೊಡುವುದಕ್ಕೆ ತಕ್ಕ ವ್ಯವಸ್ಥೆಯನ್ನೇನೂ ಮಾಡಲಿಲ್ಲ. ಈ ತರಹ ಅನ್ಯಾಯವನ್ನು ಮಾಡಬಾರದೆಂದು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ,

ಮೆಯಿನ್ ಕೆನಾಲ್‌ಗಳು ಇರುವ ಕಡೆ ಫೂಟ್‌ಪಾತ್‌ಗಳನ್ನು ಕಟ್ಟಿಸಬೇಕು. ಇಲ್ಲದಿದ್ದರೆ ಒಕ್ಕಲಿಗರು ತಮ್ಮ ಹಳ್ಳಿಗಳಿಗೆ ಹೋಗಬೇಕಾದರೆ 5—6 ಮೆಲಿಗಳನ್ನು ಸುತ್ತಿಕೊಂಡು ಹೋಗಬೇಕು. ಆದ್ದರಿಂದ ಸರ್ಕಾರದವರು ಎಲ್ಲೆಲ್ಲಿ ಫುಟ್‌ಪಾತ್‌ಗಳು ಅವಶ್ಯಕವೆಂದು ಕಂಡು ಬರುತ್ತದೋ ಅಂತಹ ಕಡೆಗಳಲ್ಲಿ ಜಾಗ್ರತೆಯಾಗಿ ಕಟ್ಟಿಸಿ ರೈತರು ತಮ್ಮ ಹೊಲಗಳಿಗೆ ಸುತ್ತಿಕೊಂಡು ಹೋಗದೆ ಇರುವ ಹಾಗೆ ತಕ್ಕ ಅನುಕೂಲವನ್ನು ಮಾಡಿಸಿಕೊಡಬೇಕೆಂದು ಸರ್ಕಾರದಲ್ಲಿ ಭಿನ್ನೈಸುತ್ತೇನೆ.

ಇನ್ನು ಮೇಜರ್ ಮತ್ತು ಮೈನರ್ ಟ್ಯಾಂಕುಗಳ ಬಗ್ಗೆ ನಮ್ಮ ಸರ್ಕಾರದವರು ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಬಿದರೆ ಡಿಸ್ಟ್ರಿಕ್ಟನಲ್ಲಿ ತ್ರಿಪುರಾಂತ ಕೆರೆ ಇದೆ. ಈ ಕೆರೆ ರಿಪೇರಿಯಾಗದಿರುವುದರಿಂದ ಅಲ್ಲಿ ಅಷ್ಟು ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ. ಈಗ ಅಲ್ಲಿ 300 ಎಕರೆಗಳಷ್ಟು ಭೂಮಿ ಸಾಗುವಳಿಯಾಗುತ್ತಿದೆ. ಇನ್ನು 500 ಎಕರೆ ಸಾಗುವಾಡುವುದಕ್ಕೆ ಮುಂದೆ ಅಂದಾಜು ಇದೆ. ಹೆಚ್ಚಿಗೆ ಹಣ ಇದರಿಂದ ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಇನ್ನೊಂದು ಹೀರನಗಾವೊ ಕೆರೆ ಒಂದು ಅದೇ ಜಿಲ್ಲೆಯಲ್ಲಿದೆ. ಈ ಕೆರೆಯೂ ಸಹ ರಿಪೇರಿಯಾಗಬೇಕು. ಇದರಿಂದ ಒಂದು ಎಕರೆ ಭೂಮಿಯನ್ನು ಕೂಡ ಸಾಗುವಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೆ ಈ ಕೆರೆಯ ರಿಪೇರಿಯನ್ನು ಸಹ ಮಾಡಿಸಿಕೊಡಬೇಕೆಂದು ಬಿನ್ನೈಸುತ್ತೇನೆ.

ಇನ್ನು ರಾಯಚೂರ್ ಡಿಸ್ಟ್ರಿಕ್ಟಿನ ಚಂದ್ರಬಾಂದಾ ಕೆರೆಯೂ ರಿಪೇರಿ ಆಗಬೇಕಾಗಿದೆ. ಅದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಅದನ್ನು ರಿಪೇರಿ ಮಾಡುವುದಕ್ಕೆ ಮುಂದೆ ನಿರ್ಧಾರವಾಗಿರುವ ಹಾಗೆ ತಕ್ಕ ಸೌಲಭ್ಯಗಳನ್ನು ದೊರಕಿಸಿಕೊಡಬೇಕೆಂದು ಭಿನ್ನೈಸಿಕೊಳ್ಳುತ್ತೇನೆ.

ಇನ್ನು ಗ್ರೋಮೋರ್ ಫುಡ್ ಸ್ಕೀಮನ್ನು ಜಾಗ್ರತೆ ಕಾರ್ಯಗತವಾಗುವಂತೆ ವ್ಯವಸ್ಥೆ ಮಾಡಬೇಕು. ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚೆಯೇ ಎಲ್ಲಾ ಕೆರೆಯ ರೀಪೇರಿ ಕೆಲಸ ಮತ್ತು ಸೇತುವೆಗಳ ನಿರ್ಮಾಣ ಇತ್ಯಾದಿ ಕೆಲಸಗಳು ಪೂರ್ತಿಯಾಗಬೇಕು. ಅರ್ತ್ ವರ್ಕ್ ಪೂರ್ತಿಯಾಗಿ ಮುಗಿಯಬೇಕು. ಇದಕ್ಕಾಗಿ ಪಿ. ಡಬ್ಲ್ಯೂ. ಡಿ. ಯವರು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ, ಎಲ್ಲಾ ಕೆಲಸಗಳಿಗೂ ಒದಗಿಸಿರುವ ಹಣವನ್ನು ದುರುಪಯೋಗವಾಗದ ಹಾಗೆ ನೋಡಿಕೊಂಡು ಸದುಪಯೋಗವಾಗುವ ರೀತಿಯಲ್ಲಿ ವ್ಯಯಮಾಡಬೇಕೆಂದು ನಾನು ಸೂಚಿಸುತ್ತೇನೆ.

ಕಡೆಯದಾಗಿ, ನಮ್ಮ ಮಿತ್ರರು ಹೇಳಿದ ಹಾಗೆ, ತುಂಗಭದ್ರಾ ಅಣೆಕಟ್ಟಿನ ಕಾರ್ಯವನ್ನು ಬಹಳ ಶೀಘ್ರದಲ್ಲಿ ಮಾಡಿ ಮುಗಿಸಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೆ, ಪಿ.ಡಬ್ಲ್ಯೂ.ಡಿ. ಇಲಾಖೆಯ ಡಿಮಾಂಡ ಬಗ್ಗೆ ಮಾತನಾಡುತ್ತಾ ಕೆಲವು ಅಭಿಪ್ರಾಯಗಳನ್ನು ನಾನು ಸೂಚಿಸುತ್ತೇನೆ. ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ P. W. D. Enemy No. 1 ಎಂದು ಕೆಲವು ರಾಜಕಾರಣಿಗಳು ಹೇಳಿದ್ದಾರೆ. ಈಗ ಅದರ ಸತ್ಯಾಸತ್ಯತೆಯ ಬಗ್ಗೆ ವಾದ ಮಾಡುವ ಇಚ್ಛೆ ನನಗೆ ಇಲ್ಲ. ಈ ಇಲಾಖೆಯ ಧ್ಯೇಯ ಧೋರಣೆಗಳನ್ನು ಸ್ವಲ್ಪ ವಿವೇಕದಿಂದ ಯೋಚನೆ ಮಾಡಿ ನೋಡಿದರೆ P. W. D. Friend No. 1 ಎಂದು ಹೇಳಬಹುದು. ಈ ಇಲಾಖೆಯಲ್ಲಿ ಅನೇಕ ಲೋಪ ದೋಷಗಳು ಇರಬೇಕಾದರೆ ಅನೇಕ ಕಾರಣಗಳು ಇವೆ. ಬಹುಶಃ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿವರ್ಗವು, ಇದು ನಮ್ಮ ರಾಷ್ಟ್ರ, ಈ ಕೆಲಸ ಮಾಡಲು ಇರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂಬ ಒಂದು ಮನೋಭಾವನೆಯಿಂದ ಕೆಲಸ ಮಾಡುತ್ತಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ದೇಶದಲ್ಲಿ ಆಹಾರ ಪರಿಪೂರ್ಣತೆಯಾಗಬೇಕಾದರೆ ಎಲ್ಲ ಅನುಕೂಲತೆಗಳನ್ನು ಒದಗಿಸಲು P.W.D. ನೆರವು ಇರಬೇಕಾದುದು ಮುಖ್ಯ. ಆದರೆ ಅವಶ್ಯವಿರುವ ನೆರವು ಸಿಕ್ಕುವದಿಲ್ಲ. ಇಲಾಖೆ ಇಲಾಖೆಗಳಲ್ಲಿ ಸಹಕಾರ ಕಡಮೆಯಾಗುತ್ತಿದೆ. ಇದನ್ನೆಲ್ಲ ನೋಡಿದರೆ ನಿಜವಾಗಿ ನಮ್ಮ ದೇಶ ಅಧೋಗತಿಗೆ ಹೋಗುತ್ತಿದೆ ಎಂದು ಎನಿಸುತ್ತದೆ. ಈ ಇಲಾಖೆಗೆ ಒದಗಿಸುವ ಹಣವನ್ನು ಸರಿಯಾಗಿ ವಿನಿಯೋಗಿಸದಿದ್ದರೆ ಅದರಿಂದ ದೇಶಕ್ಕೂ ಒಳ್ಳೇದಲ್ಲ. ಸರಕಾರಕ್ಕೂ ಒಳ್ಳೇದಲ್ಲ. ಈ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಕಾರ್ಯವನ್ನು ಪರಿಶೀಲನೆಮಾಡದೆ, ಕುಳಿತಲ್ಲಿಯೇ ಪರಿಶೀಲನೆ ಆಯಿತು ಎಂದು ಪುಸ್ತಕದಲ್ಲಿ ಬರೆಯುತ್ತಾರೆ. ಇಂಥವುಗಳಿಗೆ ಯಾರು ಜವಾಬುದಾರರು ಆಗಿದ್ದಾರೆ? ಇನ್ನು ಬಜೆಟ್ ಪುಸ್ತಕದ 497 ಪುಟದಲ್ಲಿ ಕಟ್ಟಡ ಬಗ್ಗೆ ಸ್ವಲ್ಪ ದುಡ್ಡು ಒದಗಿಸಿದ್ದು ಇದೆ. ಅರಕಲಗೂಡಿಗೆ ಸಂಬಧಪಟ್ಟದ್ದನ್ನು ಹೊಳೆನರಸೀಪುರಕ್ಕೆ ಸಂಬಂಧಪಟ್ಟ ಕಾಲಂನಲ್ಲಿ ತೋರಿಸಿದ್ದಾರೆ. ದೊಡ್ಡಮಗ್ಗೆ ಸ್ಕೂಲಕಟ್ಟಡಕ್ಕೆ ಸಂಬಂಧ ಪಟ್ಟದ್ದನ್ನು ಹೊಳೆನರಸೀಪುರ ತಾಲ್ಲೂಕಿನಲ್ಲಿ ಎಂದು ತೋರಿಸಿದ್ದಾರೆ. ಇದನ್ನು ಸರಿಪಡಿಸಬೇಕು.

ಇನ್ನು ಪಿ.ಡಬ್ಲ್ಯೂ.ಡಿ. ಮತ್ತು ಆರೋಗ್ಯ ಇಲಾಖೆ ಒಂದಕ್ಕೊಂದು ಸಂಬಂಧವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಶ್ರೀ ರಾಮ ದೇವರ ಕಟ್ಟೆಯ ಹತ್ತಿರ ಹುಣಶೇ ಕರೆ ಯೋಜನೆಗಾಗಿ ನಾಲ್ಕೂವರೆ ಲಕ್ಷ ರೂಪಾಯಿ ಎಸ್ಟಿಮೇಟು ಆಗಿತ್ತು. ಮಲೇರಿಯಾ ಹಾವಳಿಯನ್ನು ತಪ್ಪಿಸುವದಕ್ಕೆ ಹೆಲ್ತ್ ಆಫೀಸರರು ಪ್ರತ್ಯಕ್ಷವಾಗಿ ಬಂದು ನೋಡಿ ಶಿಫಾರಸು ಮಾಡಿದ್ದರೂ ಇನ್ನು ಕೆಲಸವಾಗಿಲ್ಲ.

ಹೆಚ್ಚು ಆಹಾರ ಬೆಳೆಯಿರಿ ಎಂಬ ಒಂದು ಯೋಜನೆಯನ್ನು ಇಟ್ಟು ಕೊಂಡಿದ್ದಾರೆ. ಆದರೆ ಇದಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ನೀರಾವರಿ ಗಾಗಿ ಹೆಚ್ಚಿನ ಸಹಾಯ ಕೊಡುತ್ತಿಲ್ಲ. ಹುಣಶೇ ಕೆರೆ ಮರನಾಯಕನ ಹಳ್ಳಿಯಲ್ಲಿ ನೀರಾವರಿ ಸೌಲಭ್ಯ ಒದಗಿಸಿಕೊಟ್ಟರೆ, ಕೆರೆದುರಸ್ತಿ ಮಾಡಿದರೆ ಅನುಕೂಲವಾಗುತ್ತದೆ. ಇದಕ್ಕಾಗಿ ಒದಗಿಸಿದ ಹಣವನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ಹೀಗೆ ಆದರೆ ಆಹಾರ ಅಭಾವನ್ನು ಹೇಗೆ ಪರಿಹರಿಸ ಬಹುದು ಎಂದು ನಾನು ಕೇಳುತ್ತೇನೆ. ಕಾಟೇನಹಳ್ಳಿ ಪ್ರೊಜೆಕ್ಟಿನಿಂದ 750 ಎಕರೆ ಭೂಮಿ ನೀರಾವರಿಯಾಗಬಹುದು. ಇದಕ್ಕಾಗಿ ಎಂಟುವರೆ ಲಕ್ಷರೂಪಾಯಿ ಹಣ ಮಂಜೂರು ಆಗಿದೆ. Administrative sanction, technical sanction ದೊರೆತಿದೆ. ಪರದೇಶದಿಂದ ಆಹಾರ ಧಾನ್ಯ ತರಿಸಲು ಹಣ ಖರ್ಚು ಮಾಡುವುದರ ಬದಲು ಇಲ್ಲಿಯ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿ ಆಹಾರ ಅಭಾವವನ್ನು ಹೋಗಲಾಡಿಸುವುದು ಸೂಕ್ತ. ಪರದೇಶಗಳಿಗೆ ಹೋಗಿ ಪರಿಶ್ರಮಪಟ್ಟು technical education ಪಡೆದುಕೊಂಡು ಬಂದಿರತಕ್ಕ ಯುವಕರಿಗೆ ಮನ್ನಣೆ ಕೊಡದೇ ಇದ್ದರೆ ಕೆಲಸದಲ್ಲಿ ದಕ್ಷತೆ ಹೆಚ್ಚಾಗು

(ಶ್ರೀ ವೈ. ವೀರಪ್ಪ)

ವುದಿಲ್ಲ. ಮೂರು ವರ್ಷ ಅಮೇರಿಕಾ ದೇಶಕ್ಕೆ ಹೋಗಿ ಪರಿಶ್ರಮ ಪಟ್ಟು ವಾಪಸು ಬಂದಿರತಕ್ಕ ವರೊಬ್ಬರನ್ನು ಇನ್ನು ಸುಪರ್‌ವೈಜರ್ ಆಗಿದ್ದಾರೆ. ಅವರನ್ನು ಗಜೆಟೆಡ್ ಆಫೀಸರನ್ನಾಗಿ ಮಾಡ ಬೇಕೆಂದು ಚೀಫ್ ಎಂಜಿನಿಯರರು ಶಿಫಾರಸು ಮಾಡಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ತಾತ್ಸಾರ ಮನೋಭಾವನೆ ತೋರಿಸಿದ್ದಾರೆ. ದಯವಿಟ್ಟು ಇದನ್ನು ಗಮನಕ್ಕೆ ತೆಗೆದುಕೊಳ್ಳ ಬೇಕು.

ಅವಕಾಶ ಕೊಟ್ಟರೆ ಯಾವುದಾದರೂ ಒಂದು ನಿರ್ದಿಷ್ಟವಾದ ಉದಾಹರಣೆ ತೆಗೆದುಕೊಂಡು ಹೇಳುತ್ತೇನೆ. ಸರ್ವೇಸಾಧಾರಣವಾಗಿ ಸರ್ಕಾರದ ಧ್ಯೇಯಧೋರಣೆ ಈ ರೀತಿ ಇದ್ದರೆ ನಿಜವಾಗಿಯೂ ಕೂಡ ಅನುಕೂಲವಾಗುವುದಿಲ್ಲ. ರಾಷ್ಟ್ರ ಪ್ರೇಮ ಹೆಚ್ಚಾಗಿ ಇರಲು, ಸರ್ಕಾರದವರು ಮಾಡಿದ ಯೋಜನೆಯನ್ನು ಪ್ರೇಮದಿಂದ ಕಾರ್ಯಗತ ಮಾಡಲು, ಸೇವಾ ಮನೋಭಾವ ಅವರಲ್ಲಿ ಉದ್ಭವವಾಗುವಂತೆ ಮಾಡಲು ಅವರಿಗೆ ಉತ್ತೇಜನ ಕೊಡುವುದು ಬಹಳ ಮುಖ್ಯ ಎಂದು ಹೇಳಬೇಕಾಗುತ್ತದೆ. ಸಬ್‌ಡಿವಿಜನ್ ಆಫೀಸರ ವಿಚಾರದಲ್ಲಿ ಅನೇಕ ಮಿತ್ರರು ಹೇಳಿದ್ದಾರೆ. ಬೇರೆ ಇಲಾಖೆಯಲ್ಲಿರತಕ್ಕ ಪರಿಣತರನ್ನು ಇಲ್ಲಿಗೆ ತೆಗೆದುಕೊಳ್ಳಬಾರದು. ಇದರಿಂದ ದುಷ್ಪರಿಣಾಮವಾಗುತ್ತದೆ. ಇಲ್ಲಿ ಎಷ್ಟೋಜನ ಅನುಭವ ಹೊಂದಿರುತ್ತಾರೆ. ಅವರಿಗೆ ಪ್ರಮೋಷನ್ ಕೊಡದೇ ಹೋದರೆ, ಉತ್ತೇಜನ ಕೊಡದಿದ್ದರೆ ಅವರು ನಿರುತ್ಸಾಹಿಗಳಾಗುತ್ತಾರೆ ಎಂದು ಮಾನ್ಯ ಮಿತ್ರರು ಹೇಳಿದರು. ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವುದರಿಂದ ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಗೊರೂರು ಪ್ರಾಜೆಕ್ಟು ಎಂದು ಒಂದು ಇದೆ. ಅದು ಬಹಳ ಹಿಂದೆಯೇ ಸರ್ವೆಆಗಿ ಬಹಳ ಹಣ ಖರ್ಚು ಮಾಡಿದ್ದಾರೆ. ಇದನ್ನು ಕಾರ್ಯಗತ ಮಾಡಿದರೆ ಹಾಸನ ಜಿಲ್ಲೆ, ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆಗೆ ಬಹಳ ಅನುಕೂಲ ವಾಗುತ್ತದೆ. ಮತ್ತು ಮೂರು ಕಬ್ಬಿನ ಕಾರ್ಖಾನೆಗಳನ್ನು ತೆರೆಯಬಹುದು ಎಂಬ ಒಂದು ಅಭಿಪ್ರಾಯವನ್ನು ತಜ್ಞರು ಕೊಟ್ಟಿದ್ದಾರೆ. ಆದ್ದರಿಂದ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮತ್ತು ಇತರ ಸಂಬಂಧಪಟ್ಟ ಇಲಾಖೆಯವರು ಒಟ್ಟುಗೂಡಿ ಸರ್ಕಾರದವರು ತರುವ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡಲು ಮನಸ್ಸು ಮಾಡಿದರೆ ನಿಜವಾಗಿಯೂ ರಾಮರಾಜ್ಯ ಸ್ಥಾಪನೆ ಮಾಡುವುದೇ ಅಲ್ಲದೇ ಆಹಾರ ಅಭಾವವನ್ನು ನೀಗಲು ಬಹಳ ಸಹಕಾರಿಯಾಗುತ್ತದೆಂದು ನಂಬಿದ್ದೇನೆ. ಈ ದೃಷ್ಟಿಯಿಂದ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಮಂತ್ರಿಗಳು ಹಾಸನ ಮಂಗಳೂರು ರೈಲ್ವೇ ವಿಚಾರ ಹೇಳಿದ್ದಾರೆ. ಪ್ರಾಂತ ಸರ್ಕಾರದವರು ಒತ್ತಾಯಮಾಡಿ ಜಾಗ್ರತೆ ಇದು ಕಾರ್ಯಗತವಾಗುವಂತೆ ಮಾಡಿದರೆ. ನಿಜವಾಗಿಯು ಕೂಡ ಜಿಲ್ಲೆಯಿಂದ ಜಿಲ್ಲೆಗೆ ಸಂಪರ್ಕ ಜಾಸ್ತಿಯಾಗುವುದಲ್ಲದೆ ವ್ಯಾಪಾರದ ಅಭಿವೃದ್ಧಿಯಾಗುತ್ತದೆ ಮತ್ತು ಜನಗಳ ಆರ್ಥಿಕ ಮಟ್ಟ ಹೆಚ್ಚುತ್ತದೆ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ ನಮ್ಮ ಮುಂದೆ ಇರತಕ್ಕ ನೀರಾವರಿ ಮತ್ತು ಸಂಪರ್ಕಕ್ಕೆ ಸಂಬಂಧಪಟ್ಟ ಈ ಬೇಡಿಕೆ ವಿಷಯದಲ್ಲಿ ನನ್ನ ಸಮ್ಮತಿಯನ್ನು ಸೂಚಿಸುತ್ತಾ ಈ ಮಾನ್ಯ ಸಭೆಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ಯಾವ ಒಂದು ದೇಶದಲ್ಲೇ ಆಗಲೀ ದೇಶದ ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ಯೋಜನೆಯನ್ನು ಹಾಕಿಕೊಳ್ಳಬೇಕು. ಹಾಗೆ ಹಾಕಿಕೊಳ್ಳಬೇಕಾದರೆ ನಮ್ಮ ಆಡಳಿತ ಯಂತ್ರ ಬಹಳ ಪರಿಶುದ್ಧಕರವಾದದ್ದೂ ಆಗಿರಬೇಕು. ಆಡಳಿತ ಪರಿಶುದ್ಧವಾಗಿದ್ದ ಪಕ್ಷದಲ್ಲಿ ಯೋಜನೆಗಳು ಸುಭದ್ರವಾಗಿಯೇ ಇರುತ್ತದೆ ಎಂದು ನನ್ನ ಭಾವನೆ. ನಾವುಮೊದಲನೇ ಪಂಚವಾರ್ಷಿಕ ಯೋಜನೆ, ಎರಡನೇ ಪಂಚವಾರ್ಷಿಕ ಯೋಜನೆಗಳಲ್ಲಿ ದೊಡ್ಡ ದೊಡ್ಡ ನೀರಾವರೀ ಯೋಜನೆಗಳು ಮತ್ತು ಸಣ್ಣಪುಟ್ಟ ನೀರಾವರೀ ಯೋಜನೆಗಳನ್ನು ಅಳವಡಿಸಿ ತಯಾರುಮಾಡಿದ್ದೆವು. ಎಲ್ಲಾ ಕಡೆಯಲ್ಲೂ ಕೂಡ ವಿರೋಧ ಪಕ್ಷದ ಕೆಲವು ಸದಸ್ಯರುಗಳು ಹೇಳಿದ ಹಾಗೆ ಏಕರೀತಿಯಾಗಿ ಹಣವನ್ನು ಖರ್ಚುಮಾಡವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣವೇನೆಂದರೆ ಪ್ರಕೃತಿ ದತ್ತವಾಗಿ ಬಂದಿರತಕ್ಕ, ಸ್ವಾಭಾವಿಕವಾಗಿ ಬಂದಿರತಕ್ಕ ಈ ನೀರಾವರೀ ಆಶ್ರಯ ಎಲ್ಲಾ ಕಡೆಯೂ ಏಕ ರೀತಿಯಾಗಿಲ್ಲದೇ ಇರುವುದರಿಂದ ಯಾವಯಾವ ಕಡೆ ಹೆಚ್ಚು ನೀರಿನ ಆಶ್ರಯ ಇರುತ್ತವೆಯೋ ಅಂಥಕಡೆ ಫಲದಾಯಕವಾಗತಕ್ಕ ಮತ್ತು ಲಾಭದಾಯಕವಾಗತಕ್ಕ ಯೋಜನೆಗಳನ್ನು ನಾವು ಕೈಕೊಳ್ಳಬೇಕಾಗಿದೆ. ಆರೀತಿ ಸರ್ಕಾರ ಮೊದಲನೆಯ ಪಂಚವಾರ್ಷಿಕ ಯೋಜನೆ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಬಹುಮಟ್ಟಿನ ಕಾರ್ಯವನ್ನು ಸಾಧಿಸಿದೆ. ಕಾರಣಾಂತರದಿಂದ ಕೆಲವು ಕಡೆ ಸಣ್ಣಪುಟ್ಟ ನೀರಾವರೀ ಯೋಜನೆಗಳನ್ನು ಅದರಲ್ಲಿ ಅಳವಡಿಸದೇ ಬಿಟ್ಟು ಹೋಗಿರತಕ್ಕಸಂದರ್ಭಗಳೂ ಕೂಡ ಇವೆ. ಅಂಥ ಸಣ್ಣಪುಟ್ಟ ನೀರಾವರೀ ಯೋಜನೆಗಳನ್ನು ಈ ಆಹಾರದ ಕೊರತೆ ಕಾಲದಲ್ಲಿ ನಾವು ತೆಗೆದುಕೊಳ್ಳಬೇಕಾಗಿರವುದು ಅತ್ಯಗತ್ಯವಾಗಿದೆ. ಆ ರೀತಿ ಮಾಡಬೇಕಾಗಿದ್ದರೆ ಅದು ಸರ್ಕಾರದಲ್ಲಿ ಇರತಕ್ಕ ಹಣದ ಸೌಲಭ್ಯ ಮತ್ತು ಕೇಂದ್ರ ಸರ್ಕಾರದ ಸಹಾಯ ಇವೆಲ್ಲವನ್ನು ಅವಲಂಬಿಸಿದೆ. ಸಣ್ಣಯೋಜನೆಗಳನ್ನು ತೆಗೆದುಕೊಳ್ಳಬೇಕಾದ ಪಕ್ಷದಲ್ಲಿ ಅದಕ್ಕೆ ಎಲ್ಲಿಂದ ಹಣವನ್ನು ಒದಗಿಸಬೇಕೆಂಬ ಪ್ರಶ್ನೆ ಬಂದೇ ಬರುತ್ತದೆ. ಈ ವಿಷಯದಲ್ಲಿ ನಾನು ಈಗ ಒಂದು ಸೂಚನೆಯನ್ನು ಕೊಡುವವನಾಗಿದ್ದೇನೆ. ದೇಶದ ಅಭಿವೃದ್ಧಿಕಾರ್ಯಕ್ಕೆ ಅನೇಕ ಯೋಜನೆಗಳನ್ನು ಹಾಕಿಕೊಳ್ಳಬೇಕೆಂಬ ಆತುರದಲ್ಲಿ ಹತ್ತು ವರ್ಷಗಳಲ್ಲಿ ಆಗುವಂಥ ಕೆಲಸಗಳನ್ನು ಮೂರುವರ್ಷದಲ್ಲೇ ಮಾಡಿಸಿಕೊಳ್ಳ ಬೇಕೆಂಬ ಆಕಾಂಕ್ಷೆ ಪ್ರತಿಯೊಬ್ಬ ಮಾನ್ಯ ಸದಸ್ಯರಲ್ಲಿ ಬಂದೇ ಬರುತ್ತದೆ. ಹಾಗೆ ಬರುವಾಗ ಯಾವುದು ಅತಿ ಪ್ರಾಮುಖ್ಯವಾದುದು, ಯಾವುದನ್ನು ಮೊದಲು ತೆಗೆದುಕೊಳ್ಳಬೇಕು, ಯಾವುದನ್ನು ಕೊನೆಯಲ್ಲಿ ತೆಗೆದುಕೊಳ್ಳಬೇಕು ಎನ್ನುವುದನ್ನು ನಾವೆಲ್ಲರೂ ವಿವೇಚನೆಯಿಂದ ಪರ್ಯಾಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಅತಿ ವಿನಯದಿಂದ ನಿವೇದಿಸಿ ಕೊಳ್ಳುತ್ತಾ ಇದ್ದೇನೆ.

ಇದುವರೆಗಾಗಲೇ ನಮ್ಮಲ್ಲಿ ಬಂದು ಸೇರಿರತಕ್ಕ ಐದು ಭಾಗಗಳಲ್ಲಿ ಒಂದೇ ರೀತಿಯಾದಂಥ ತರೀ ಕಂದಾಯ ಇಲ್ಲ. ಮೊಟ್ಟಮೊದಲನೆಯದಾಗಿ ಈ ತರೀಕಂದಾಯವನ್ನು ಹೆಚ್ಚು ಮಾಡುವುದು ಆರ್ಥಿಕ ಮುಗಟ್ಟಿನ ದೃಷ್ಟಿಯಿಂದ ಅತಿಮುಖ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗೆ ಹೇಳುವಾಗ ನಾವು ಕೈಕೊಳ್ಳತಕ್ಕ ಯೋಜನೆಗಳಿಂದ ಜನರ ಆರ್ಥಿಕ ಮಟ್ಟ ಕೂಡ ಬಹುಮಟ್ಟಿಗೆ ಉತ್ತಮವಾಗುತ್ತದೆ ಎಂದು

ಹೇಳುವುದರಲ್ಲಿ ಸಂದೇಹವಿಲ್ಲ. ಹೀಗಿರುವಾಗ ನಾವು ಯಾವ ಯೋಜನೆಗೆ ಹಣವನ್ನು ಖರ್ಚುಮಾಡುತ್ತಾ ಇದ್ದೇವೆಯೋ ಅಥವಾ ಯಾವ ಯೋಜನೆಗೆ ಹಣವನ್ನು ಖರ್ಚುಮಾಡಿದ್ದೇವೆಯೋ ಅದರ ಸಲುವಾಗಿ ವಾಟರ್ ರೇಟ್ ಎಂದರೆ ನೀರಿನ ಕಂದಾಯವನ್ನು ಕೂಡ ಹೆಚ್ಚುಮಾಡತಕ್ಕದ್ದು ನ್ಯಾಯವಾಗಿದೆ, ಸಮರ್ಪಕವಾಗಿದೆ, ಅದು ಮಾಡಬೇಕಾದದ್ದೇ ಎಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

4-30 P.M.

ಇದೂ ಅಲ್ಲದೆ P.W.D.ಗೆ ಸೇರಿರುವ ಅನೇಕ ದೊಡ್ಡ ದೊಡ್ಡ ಕೆರೆಗಳನ್ನು ಈ ಇಲಾಖೆಯವರೇ ಸಾಲಾಬಾದು ಕಾಂಗಾರಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇನ್ನು ಕೆಲವು ಕೆರೆಗಳನ್ನು ರೆವಿನ್ಯೂ ಇಲಾಖೆಯವರು ವಹಿಸಿಕೊಂಡಿರುತ್ತಾರೆ. ಈ ಬಗ್ಗೆ ಟ್ಯಾಂಕ್ ಪಂಚಾಯಿತಿ ರೂಲ್ಸುಗಳನ್ನ ಅನುಸರಿಸಿ ಕೆಲಸ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ. ಆದರೆ ಜನರು ಅಷ್ಟು ಪ್ರೋತ್ಸಾಹದಿಂದ ಮುಂದೆ ಬರುತ್ತಿಲ್ಲ. ಜನಗಳಿಗೆ ಈ ಕಾರ್ಯದಲ್ಲಿ ಅಷ್ಟು ಉತ್ಸಾಹವಿಲ್ಲ. ಕೆರೆ ಕೆಳಗಿನ ಅಚ್ಚುಕಟ್ಟುದಾರರಿಗೆ ಈ ಸಾಲಾಬಾದು ಕಾಂಗಾರಿಯಲ್ಲಿ ಮನಸ್ಸಿಲ್ಲ. ಆದುದರಿಂದ ಇನ್ನು ಮುಂದಕ್ಕೆ ಈ ಎಲ್ಲ ಕೆರೆಗಳ ಸಾಲಬಾದು ಕಾಂಗಾರಿಯನ್ನು ಈ P.W.D. ಅವರೇ ವಹಿಸಿಕೊಳ್ಳುವಂತೆ ಸರ್ಕಾರದವರು ಒಂದು ಏರ್ಪಾಡು ವುದು ಒಳ್ಳೆಯದು. ತಾವು ಬೇಕಾದರೆ ಈ ದೊಡ್ಡ ದೊಡ್ಡ ಕೆರೆಗಳ ಸಾಲಾಬಾದು ಕಾಂಗಾರಿ ಬಗ್ಗೆ ಅಚ್ಚುಕಟ್ಟಿದಾರರ ಮೇಲೆ ಏನೊಂದು ಚಾರ್ಜನ್ನ ವಿಧಿಸುತ್ತಿದ್ದೀರೋ ಅದೇ ರೀತಿ ಇವರ ಮೇಲೂ ವಿಧಿಸಿದರೂ ಪರವಾಇಲ್ಲ. ಅಂತೂ ಈ ಎಲ್ಲ ಕೆರೆಗಳ ಸಾಲಾಬಾದು ಕಾಂಗಾರಿಯ ಕೆಲಸವನ್ನ P.W.D.ಗೆ ವಹಿಸಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಈ ದೊಡ್ಡ ದೊಡ್ಡ ಕೆರೆಗಳ ಸುತ್ತಲೂ ನೀರು ನಿಲ್ಲುವ ಸ್ಥಳದಲ್ಲಿ ಎಂದರೆ ವಾಟರ್ ಸ್ಪ್ರೆಡಿಂಗ್ ಏರಿಯಕ್ಕೆ ಸುತ್ತಮುತ್ತಲನ ಜಮೀನನ್ನು ಜಮೀನಿಲ್ಲದ ಜನರಿಗೆ ಜಮೀನು ಕೊಡತಕ್ಕ ಸಂದರ್ಭದಲ್ಲಿ ಕೊಟ್ಟಿರುವುದರಿಂದ ಕೆರೆಗಳಲ್ಲೆಲ್ಲ ಬಹಳ ಹೂಳು ತುಂಬಿ ಕೊಂಡಿದೆ. ಈ ಬಗ್ಗೆ ಕೆರೆಯ ಅಂಗಳಗಳನ್ನು ವ್ಯವಸಾಯಕ್ಕೆ ಕೊಡಬಾರದೆಂದು ಕಾನೂನಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಆ ಜಮೀನನ್ನೆಲ್ಲ ವ್ಯವಸಾಯಕ್ಕಾಗಿ ಕೊಟ್ಟಿರುವುದರಿಂದ ಈ ದಿವಸ ಕೆರೆಗಳೆಲ್ಲ ಹೂಳು ತುಂಬಿಹೋಗಿ ದೇಶಕ್ಕೆ ಅನ್ನದಾನ ಮಾಡತಕ್ಕಂಥ ಈ ಕೆರೆಗಳ ಕೆಳಗಿನ ಅಚ್ಚುಕಟ್ಟುದಾರರಿಗೆ ನಾವು ಬಹಳ ಅನ್ಯಾಯ ಮಾಡಿರುತ್ತೇವೆಂದು ನನಗೀಗ ಮನವರಿಕೆಯಾಗಿರುತ್ತದೆ. ಆದ್ದರಿಂದ, ಯಾವಯಾವ ಕೆರೆಗೆ ಎಷ್ಟೆಷ್ಟು ಅಂಗಳದ ಜಮೀನಿರಬೇಕೋ ಅಷ್ಟಷ್ಟು ಜಮೀನು ಆ ಯಾಯ ಕೆರೆಗಳಿಗೆ ಇದ್ದೇ ತೀರಬೇಕು. ಸರ್ಕಾರದವರು ಈಗಲಾದರೂ ಕೊಡಲೇ ಕಾರ್ಯಕ್ರಮಗಳನ್ನು ಕೈ ಗೊಂಡು ಈ ಕೆರೆಗಳ ಅಜು ಬಾಜಿನಲ್ಲಿ ಯಾರುಯಾರು ಎಷ್ಟೆಷ್ಟು ಜಮೀನನ್ನ ಅಕ್ರಮವಾಗಿ ಸಾಗುವಳಿಗೆ ತಂದಿದ್ದಾರೋ ಅಷ್ಟ ಜಮೀನನ್ನು ಅವರಿಂದ ತಪ್ಪಿಸಿ, ಅವರನ್ನ ಅಲ್ಲಿಂದ ಎವಿಕ್ಟ್ ಮಾಡಬೇಕೆಂದು ಹೇಳುತ್ತೇನೆ. ಆದರೆ, ಸರ್ಕಾರದವರು ಇತ್ತೀಚೆಗೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಯೋಜನೆಯನ್ನು ಕೈಗೊಂಡಿದ್ದಾಗ್ಯೂ ಸರ್ಕಾರ ಈ ಸಣ್ಣ ಪುಟ್ಟ ಕೆರೆಗಳ ವಿಚಾರದಲ್ಲಿ ತಾತ್ಸಾರ ಮಾಡಬಾರದು. ಇವುಗಳ ಬಗ್ಗೆ ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕಾದುದು ತಮ್ಮ ಆದ್ಯ ಕರ್ತವ್ಯ.

ಇನ್ನು ರಸ್ತೆಗಳ ವಿಚಾರಕ್ಕೆ ಬಂದರೆ ನ್ಯಾಷನಲ್ ಹೈವೇಸ್ P.W.D. ರಸ್ತೆ, ಜಿಲ್ಲಾ ಬೋರ್ಡ್ ರಸ್ತೆ ಎಂದು ಮೂರು ಭಾಗಗಳಿರುತ್ತವೆ. ಒಂದು ಮೈಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಬೇಕಾಗಿದ್ದರೆ ಸುಮಾರು 70 ಸಾವಿರ ರೂಪಾಯಿಗಳ ಖರ್ಚಾಗುತ್ತದೆಂದೂ, ಒಂದು ಮೈಲಿ ಟಾರ್ ರಸ್ತೆಯನ್ನ ಮಾಡಬೇಕಾಗಿದ್ದರೆ 25-30 ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದೂ, ಒಂದು ಮೈಲಿ ಜಲ್ಲಿ ರಸ್ತೆ ಮಾಡಬೇಕಾಗಿದ್ದರೆ ಸುಮಾರು ಒಂದು ಸಾವಿರ ರೂಪಾಯಿಗಳು ಬೇಕಾಗುತ್ತ ದೆಂದೂ ತಿಳಿದುಬಂದಿದೆ. ಎಂದ ಮೇಲೆ ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಿಸತಕ್ಕ 70 ಸಾವಿರ ರೂಪಾಯಿಗಳು 70 ಮೈಲಿ ಜಲ್ಲಿ ರಸ್ತೆಯನ್ನು ಮಾಡಿಸಲು ಸಾಕಾಗಬಹುದೆಂದು ಗೊತ್ತಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ 10-12 ಸಾವಿರ ರೂಪಾಯಿಗಳು ಮೇಲೆ ಖರ್ಚಿದೆ.

ಶ್ರೀ ಬಿ. ರಾಚಯ್ಯ.—ನಮ್ಮ ದೇಶ ಸಾಮಾನ್ಯವಾಗಿ ಹಳ್ಳಿ ಕಾಡುಗಳಿಂದ ಕೂಡಿರತಕ್ಕಂಥ ದೇಶ. ಈ ದಿವಸ ಅನೇಕ ಕಡೆ ಸರಿಯಾದ ಒಂದು ಎತ್ತಿನ ಗಾಡಿಯ ರಸ್ತೆ ಕೂಡ ಇಲ್ಲ. ಒಂದೂರಿನಿಂದ ಇನ್ನೊಂದೂರಿಗೆ ಸಾಮಾನುಗಳನ್ನ ಸಾಗಿಸಲು ಸರಿಯಾಗಿ ಸಂಚಾರ ಸೌಲಭ್ಯಗಳಿಲ್ಲ. ಇರತಕ್ಕರಸ್ತೆಗಳ ಸ್ಥಿತಿಯನ್ನು ಹೇಳಲು ಅಸದಳ. ಆದುದರಿಂದ ಇನ್ನು ಮುಂದೆ ಸರ್ಕಾರದವರು ಸಿಮೆಂಟ್ ರಸ್ತೆ ಮಾಡಿಸುವುದಕ್ಕೆ ಬದಲಾಗಿ ಜಲ್ಲಿ ರಸ್ತೆಗಳನ್ನ ನಮ್ಮ ದೇಶಲ್ಲಿ ಮಾಡಿಸತಕ್ಕದ್ದು ಅತ್ಯವಶ್ಯಕ. ಆದುದರಿಂದ, ಈ ಒಂದು ಏರ್ಪಾಡನ್ನ ಸರ್ಕಾರದವರು ಜಾರಿಗೆ ತರಬೇಕೆಂದು ಹೇಳುತ್ತೇನೆ. ಇನ್ನು ಈ N.E.S. ಬ್ಲಾಕ್, ಇತ್ಯಾದಿಗಳಿರುವ ಕಡೆ ಆ ಪ್ರದೇಶದ ಜನರು ಅಲ್ಲೆಲ್ಲ ಉತ್ಸಾಹದಿಂದ ಕೆಲವು ರಸ್ತೆಗಳನ್ನು ಮಾಡಿರುತ್ತಾರೆ. ಆದರೆ ಆ ರಸ್ತೆಗಳೆಲ್ಲ ಈಗ ಮಾಯವಾಗುತ್ತಿವೆ. ಅದೇ ರೀತಿ ಇನ್ನು ಕೆಲವು ಕಡೆ ಜಿಲ್ಲಾ ಬೋರ್ಡ್‌ರಸ್ತೆಗಳೆಂದು ಇರುತ್ತವೆ. ಆದರೆ ಅಲ್ಲಿ ತೋಳುಮರಗಳು ಮಾತ್ರ ಇರುತ್ತವೆಯೇ ಹೊರತು ಅಲ್ಲಿ ರಸ್ತೆ ಏನೂ ಇರುವುದಿಲ್ಲ. ಹೀಗೆ ಅವೆಲ್ಲ ಕೆಟ್ಟು ಹಾಳಾಗಿಹೋಗುತ್ತಿವೆ. ಈಗ ಸರ್ಕಾರದವರು ಮೈಲೇಜ್ ಗ್ರಾಂಟ್ ಎಂದು ಕೊಡುತ್ತಿದ್ದ 250 ರೂಪಾಯಿಗಳಿಂದ ಒಂದು ಮೈಲಿ ರಸ್ತೆಯನ್ನು ಚೆನ್ನಾಗಿ ದುರಸ್ತಿ ಮಾಡುವುದಕ್ಕಾಗುವುದಿಲ್ಲವೆಂದು ತಿಳಿದುಬಂದಿದೆ. ಈಗ ಸರ್ಕಾರದವರು ಜಿಲ್ಲಾ ಬೋರ್ಡುಗಳಿಗೆ ಸೇರಿದ್ದ ರಸ್ತೆಯ ಕಾಂಗಾರಿಯಲ್ಲಿ 250 ಮೈಲಿಗಳನ್ನ P. W. D. ಗೆ ವಹಿಸಬೇಕೆಂದು ತೀರ್ಮಾನವಾಗಿತ್ತೆಂದೂ. ಆದರೆ ಇತ್ತೀಚೆಗೆ ತಿಳಿದು ಬಂದುದರಲ್ಲಿ ಅವರಿಗೆ 250 ಮೈಲಿ ಕೆಲಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ವೆಂದೂ ತಿಳಿಸಿದ್ದರ ಮೇರೆ ಇದರಲ್ಲಿ 150 ಮೈಲಿಗಳನ್ನ ಮಾತ್ರ ತೆಗೆದುಕೊಳ್ಳಲಾಗುತ್ತದೆಂದು ತಿಳಿದು ಬಂದಿದೆ. ಹೀಗೆ, ಈ ತೀರ್ಮಾನದ ಬಗ್ಗೆ ಬಹಳ ನಿಧಾನವಾಗುತ್ತಿರುವುದರಿಂದ ಹಳೇ ಮೈಸೂರಿನಲ್ಲಿ ಜಿಲ್ಲಾ ಬೋರ್ಡುಗಳ ಹಣವನ್ನು ಖರ್ಚುಮಾಡಲು ಅವಕಾಶವಿಲ್ಲದಂತೆ ಹಣ ಲ್ಯಾಪ್ಸ್ ಆಗುತ್ತಿದೆ. ಆದ್ದರಿಂದ, ಸರ್ಕಾರದವರು ಈ ಬಗ್ಗೆ ಯಾವುದಾದರೊಂದು ತೀರ್ಮಾನವನ್ನು ಕೂಡಲೇ ತೆಗೆದುಕೊಂಡು ಯಾವುದಾದರೊಂದು ರೀತಿಯಲ್ಲಿ ಈ ಕಾರ್ಯ ನೆರವೇರಿಸಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇನ್ನು P.W.D. ನೌಕರವರ್ಗದಲ್ಲಿ ಅನೇಕರಲ್ಲಿ ಅತೃಪ್ತಿ, ಅಸಮಾಧಾನಗಳು

(ಶ್ರೀ ಬಿ. ರಾಚಯ್ಯ)

ಮೂಡಿ ದೇಶಾಭಿವೃದ್ಧಿಯ ಬಗ್ಗೆ ನಡೆಯಬೇಕಾದ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ. ಈ ವಿಷಯದಲ್ಲಿ ಯಾರೊಬ್ಬರಿಗೂ ಅನ್ಯಾಯವಾಗದಂತೆ ಯಾವ ಯಾವ ಮಟ್ಟದಲ್ಲಿ ಯಾರುಯಾರಿಗೆ ಎಷ್ಟೆಷ್ಟು ನ್ಯಾಯ ದೊರಕಿಸಿಕೊಡಬೇಕೆಂಬ ಬಗ್ಗೆ ಒಂದು ರೀತಿಯ ಕಾನೂನು ವಿಧಿಗಳನ್ನ 194[illegible]ರಲ್ಲಿ ಒಂದು, ಮತ್ತೆ 1949ರಲ್ಲಿ ಒಂದು ಕಾನೂನನ್ನು ಮಾಡಲಾಗಿತ್ತು. ಈ ಬಗ್ಗೆ ಹಿಂದುಳಿದ ಪಂಗಡದವರಿಗೆ ಸರ್ಕಾರಿ ಇಲಾಖೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದೆ ಇದ್ದುದರಿಂದ ಈ ರೀತಿ ಹಳೇ ಮೈಸೂರಿದ್ದಾಗ ಒಂದು ಕಾನೂನನ್ನ ಮಾಡಲಾಗಿತ್ತು. ಹಿಂದೆ ಪ್ರಮೋಷನ್‌ಗಳನ್ನ ಕೊಡತಕ್ಕ ವಿಚಾರದಲ್ಲಿ ಇಂಥ ಒಂದು ಇಲಾಖೆಯಲ್ಲಿ 100 ಸ್ಥಾನಗಳು ಖಾಲಿ ಬಿದ್ದರೆ 50 ಸ್ಥಾನಗಳಿಗೆ ಕೆಳದರ್ಜೆಯಲ್ಲಿದ್ದ ನೌಕರರಿಗೆ ಪ್ರಮೋಷನ್ ಮೂಲಕ ಭರ್ತಿಮಾಡಿ ಇನ್ನುಳಿದ 50 ಸ್ಥಾನಗಳಿಗೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮೂಲಕ ಭರ್ತಿ ಮಾಡಬೇಕೆಂದು ಆ ಹಿಂದಿನ ಕಾನೂನುಗಳಲ್ಲಿ ತಿಳಿಸಲಾಗಿತ್ತು. ಇಲ್ಲಿಯವರೆಗೂ ಆ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಆದರೆ, ಇತ್ತೀಚೆಗೆ ಈ ಪದ್ಧತಿಯಂತೆ ಕೆಲಸ ಕಾರ್ಯಗಳಾಗುತ್ತಿದ್ದಂತೆ ಕಾಣುತ್ತಿಲ್ಲ. ಬಹಳ ಉತ್ಸಾಹಶಾಲಿಗಳಾಗಿ, ಅಷ್ಟೇ ದೇಶಭಕ್ತರಾಗಿ, ದೇಶ ಸೇವೆಯನ್ನು ಅಷ್ಟೇ ಉನ್ನತಮಟ್ಟದಲ್ಲಿ ಕಷ್ಟಪಟ್ಟು ಕೆಲಸಮಾಡತಕ್ಕ, ಅಷ್ಟೇ ಯೋಗ್ಯತೆ, ವಿದ್ಯಾ ಅರ್ಹತೆಯುಳ್ಳ ಜನರಿಗೆ, ಅಷ್ಟೇ ದೇಶಪ್ರೇಮಿಗಳಾಗಿ ದೇಶ ಸೇವೆ ಮಾಡಲು ಉಮೇದಿನಿಂದ ಮುಂದೆ ಬರತಕ್ಕ ಎಲ್ಲರಿಗೂ ತಾವೇಕೆ ಅವಕಾಶ ಕೊಡುತ್ತಿಲ್ಲವೋ ನಾನು ಬೇರೆ ಕಾಣೆ. ಹಾಗೆ ಸರ್ಕಾರದವರು ಅಂಥವರಿಗೆ ಒಂದು ಅವಕಾಶ ಕೊಡದಿರುವುದರಲ್ಲಿ ಏನು ನ್ಯಾಯವಿದೆ ? ಸರ್ಕಾರದವರ ಈ ಒಂದು ನೀತಿ ಖಂಡಿತ ಬದಲಾವಣೆಯಾಗಬೇಕು, ಸರ್ವರಿಗೂ ಅವಕಾಶ ದೊರೆಯುವಂತೆ ಮಾಡಬೇಕೆಂದು ಮಾನವಿಮಾಡಿಕೊಂಡು ನನಗೆ ಹೆಚ್ಚು ವಿಷಯಗಳನ್ನು ತಿಳಿಸಲು ಕಾಲಾವಕಾಶವಿಲ್ಲದ್ದರಿಂದ ನನ್ನ ಮಾತುಗಳನ್ನ ಮುಗಿಸುತ್ತೇನೆ.

ಶ್ರೀ ಕೆ. ಎ. ಪಾಟೀಲ್ (ತಾಳೀಕೋಟೆ).—ಅಧ್ಯಕ್ಷರೇ. ಈ ದಿವಸ ಸಭೆಯ ಮುಂದೆ ಚರ್ಚೆಗೆ ಬಂದಿರುವಂಥ P.W.D. ಬಾಬು ಬಹಳ ಮಹತ್ವದ್ದಿದೆ. ನನಗಾದರೂ ಅನಿಸುತ್ತಿದೆ ಹೋದಸಾರ್ತಿ ಈ ಬಾಬಿನ ಬಗ್ಗೆ ನನ್ನ ಅಭಿಪ್ರಾಯಗಳನ್ನ ತಿಳಿಸುವ ಕಾಲದಲ್ಲಿ ನಮ್ಮ ಪ್ರಾಂತ್ಯದಲ್ಲಿ ಅಗತ್ಯವಾಗಿ ನಡೆಯಬೇಕಾಗಿದ್ದಂಥ ಹತ್ತಾರು ಪ್ರಾಮುಖ್ಯವಾದ ಕಾರ್ಯಗಳನ್ನು ಕೈಗೊಳ್ಳಬೇಕೆಂಬುದಾಗಿ ಸರ್ಕಾರದವರಲ್ಲಿ ಮನವಿಮಾಡಿಕೊಂಡಿದ್ದೆನು. ಆದರೆ ಇಲ್ಲಿಯವರೆಗೂ ಆ ಪೈಕಿ ಒಂದನ್ನಾದರೂ ಕೈಗೊಳ್ಳತಕ್ಕ ಏರ್ಪಾಡನ್ನು ಮಾಡಿಲ್ಲವೆಂದು ಕಾಣುತ್ತಿದೆ. ಹೋದ ವರ್ಷ ಮಾನ್ಯ ಮಂತ್ರಿಗಳು ಆ ನನ್ನ ಕಾನ್‌ಸ್ಟಿಟ್ಯೂಯೆನ್ಸಿಯ ಕೆಲಸ ಕಾರ್ಯಗಳಲ್ಲಿ ಕೆಲವನ್ನಾದರೂ ಮಾಡಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ದೇಶಾಭಿವೃದ್ಧಿಯ ವಿಷಯದಲ್ಲಿ ನನಗೆ ತಿಳಿದಮಟ್ಟಿಗೂ ಈ ಬಾಬಿನ ವಿಚಾರದಲ್ಲಿ ಒಂದೆರಡು ಮಾತುಗಳನ್ನಾಡಬೇಕೆಂದಿದ್ದೇನೆ. ಈ ದಿವಸ ಸರ್ಕಾರದ ಕೆಲಸ ಕಾರ್ಯಗಳನ್ನು ನಡೆಸಲು ಪ್ರತಿಯೊಂದು ಖಾತೆಗೂ 2-3 ಜನ ಮಂತ್ರಿಗಳಿದ್ದಾರೆ. ಇನ್ನು ಇದಕ್ಕೂ ಹೆಚ್ಚಿನ ಮಂತ್ರಿಗಳಾದರೆ ಆಗ ಇದೊಂದು ಬ್ಯಾಂಕ್ ಆಫ್ ಮಿನಿಸ್ಟರ್ ಆಗಿಬಿಡುತ್ತದೆ. ಆದರೆ, ಈ ದಿವಸ ಈ ಬಾಬಿಗಿರತಕ್ಕ ಮಂತ್ರಿಗಳು ಬಹಳ ಘಟ್ಟಿಗರು ಎಂಬುದು ಅವರ ಮುಖದ ವರ್ಚಸ್ಸಿನಿಂದಲೇ ವ್ಯಕ್ತವಾಗುತ್ತದೆ. ಆದರೆ ನಾನೀಗ ಅವರ ಮುಖಸ್ತುತಿ ಮಾಡುತ್ತಾನೆಂದು ಯಾರೂ ಭಾವಿಸಬಾರದು. ನಾನು ಹೋದ ಸಲ ನನ್ನ ಭಾಗದ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಕೆಲವು ಹಳ್ಳಿಗಳು ಬಹಳ ಹಿಂದುಳಿದಿವೆ, ಅಲ್ಲ ಒಂದು ದೋಣಿ ನದಿಗೆ 60 ಮೈಲಿ ರೋಡ್‌ಮಾಡಿಸಿ ಕೊಡಿ ಎಂದು ಕೇಳಿದ್ದೆ. ಆ ನಮ್ಮ ಭಾಗವೆಲ್ಲ ಬರಿ ಬ್ಲ್ಯಾಕ್ ಸಾಯಿಲ್. ಅಲ್ಲಿ ರಸ್ತೆಗಳೊಂದೂ ಇಲ್ಲ. ಅಲ್ಲಿಯ ಜನ ಎಲ್ಲವಿಚಾರಗಳಲೂ ಬಹಳ ಹಿಂದೆ ಬಿದ್ದಿದ್ದಾರೆ. ಆ ಪ್ರದೇಶ ಜನಗಳಿಗೆ ಒಂದು ಶಾಲೆಯಾಗಲಿ, ಆಸ್ಪತ್ರೆಯಾಗಲಿ, ಯಾವುದೊಂದು ಅನುಕೂಲಗಳೂ ಇಲ್ಲ. ಹಳ್ಳಿಗಳೆಲ್ಲ ಹಾಳಾಗುತ್ತಿವೆ. ಈ ಕಾರಣದಿಂದ ಆ ಹಳ್ಳಿಗಳ ಅಭಿವೃದ್ಧಿಗೆ ಮೊದಲು ರಸ್ತೆ ಸೌಕರ್ಯ ಅಗತ್ಯ. ಅದಕ್ಕಾಗಿ ನಾನೀಗ ಅಲ್ಲ ಮೊದಲು ರಸ್ತೆಗಳ ಅನುಕೂಲ ಮಾಡಿಸಿ ಕೊಡಿ ಎಂದು ಕೇಳುತ್ತಿದ್ದೇನೆ. ನಮ್ಮ ಮಂತ್ರಿಗಳು ಆಗಾಗ್ಗೆ ಅನೇಕ ಅನಾವರಣೋತ್ಸವ ಇತ್ಯಾದಿಗಳಿಗೆ ಸಂಚಾರ ಹೊರಡುತ್ತಾರೆ. ಅಂಥ ವೇಳೆಗಳಲ್ಲಿ ಜನರು ಅವರನ್ನು ಎಲ್ಲಿಗೆ ಬರಬೇಕೆಂದು ಬೇಡಿಕೊಂಡರೆ ಅಂಥ ಸ್ಥಳಗಳಿಗೆಲ್ಲ ಅವರು ಬರಲೇಬೇಕು. ಆಗಲೇ ಅವರಿಗೆ ಆಯಾಯ ಭಾಗಗಳ ಪರಿಸ್ಥಿತಿ ಚೆನ್ನಾಗಿ ತಿಳಿಯುವುದು. ಆದ್ದರಿಂದ ಈ P.W.D. ಖಾತೆಯ ಮಂತ್ರಿಗಳಿಗೆ ಪ್ರವಾಸದ ಅಗತ್ಯ ಬಹಳವಾಗಿದೆ. ಮಾನ್ಯ ಮಂತ್ರಿಗಳು ನಮ್ಮ ಭಾಗದ ಹಳ್ಳಿಗಳನ್ನು ನೋಡಬೇಕಾಗಿದ್ದರೆ ಮೇ ತಿಂಗಳಿಗೆ ಮೊದಲೇ ಬರಬೇಕು. ಮೇ ತಿಂಗಳ ನಂತರ ಮಳೆಗಾಲ ಬಂದ ಮೇಲೆ ಅಲ್ಲಿ ಜೀಪ್ ಸಹ ತಿರುಗಾಡಲು ಸಾಧ್ಯವಿಲ್ಲ. ಆ ನಮ್ಮ ತಾಳಿಕೋಟೆ ಪರಿಸ್ಥಿತಿ ಹಾಗಿದೆ. ಹೋದ ಸಲ ಹೇಳಿದ್ದ ಪರಿಸ್ಥಿತಿ ಈಗಲೂ ಹಾಗೆಯೇ ಅದೆ. ಅಲ್ಲದೆ, ಸರಕಾರ ಇನ್ನೂ ಅಲಕ್ಷ್ಯ ಮಾಡುತ್ತಿದೆ. ಈಸಲವಾದರೂ ಹಾಗೆ ಮಾಡದೆ ನಮ್ಮ ಕಡೆಗಳಲ್ಲಿ ರಸ್ತೆ ಮತ್ತು ನೀರಿನ ಸೌಕರ್ಯಗಳ ಕಡೆ ಹೆಚ್ಚು ಲಕ್ಷ್ಯ ಕೊಡುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ.

ಮಾನ್ಯ ಶಂಕರಗೌಡರು ಮಾತನಾಡುತ್ತ ಈ ದೋಣಿ ಪ್ರಾಜೆಕ್ಟದ ಬಗ್ಗೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡರು ಹೇಗೂ ಕಾಂಗ್ರೆಸ್ಸಿಗರು. ಅವರು ಹೇಳಿದ್ದನ್ನು ಸರ್ಕಾರ ವಿರೋಧಿಸುವುದಿಲ್ಲ ಎಂದು ಹೇಳಿರಬಹುದು. ಆದರೆ, ಅವರು ಬಂದಿರುವ ಹಾಗೇ ನಾನು ಸಹ ಅದೇ ಕಾನ್‌ಸ್ಟಿಟ್ಯೂಯೆನ್ಸಿ ಇಂದ ಬಂದವನೂ ಒಬ್ಬನಾಗಿದ್ದೇನೆ, ನಮ್ಮ ಕಡೆ ಈ ದೋಣಿ ಪ್ರಾಜೆಕ್ಟನ್ನು ಮಾಡುವುದಕ್ಕೆ ಅಲ್ಲಿರುವ ನೀರೆಲ್ಲ ಉಪ್ಪಿನಿಂದ ತುಂಬಿರುವಂತಹವು. ಇಂತಹ ಯೋಜನಾಮಾಡುವುದರಿಂದ ಏನೂ ಜನಕ್ಕೆ ಉಪಯೋಗವಾಗುವುದಿಲ್ಲ. ನಾನೂ ಸಹ ಈ ವಿಚಾರದಲ್ಲಿ ಎಲ್ಲ ಜನರನ್ನೂ ಕೇಳಿಕೊಂಡು ಬಂದಿದ್ದೇನೆ. ಆದರೆ ಹೆಚ್ಚಿನ ಮಳೆಬಂದಾಗ ಕೆಲವು ಕಡೆಗಳಲ್ಲ ಪ್ರವಾಹದಂತೆ ನೀರು ನಿಲ್ಲುವಾಗ ಈ ಉಪ್ಪಿನ ನೀರು ಹರಿದುಹೋಗಬಹುದು ಎನ್ನುವ ವಿಚಾರ ಮಾಡುವಂತೆ ಇರಬಹುದು, ಅದರಿಂದ ಈ ಯೋಜನೆಗೆ ಹೆಚ್ಚಿಗೆ ಖರ್ಚು ಮಾಡುವುದಾದರೆ ಉಪಯೋಗವಾಗುವುದಿಲ್ಲ. ಇಂತಹ ದೋಣಿ ಯೋಜನೆ ಮಾಡುವುದಕ್ಕೆ ಬದಲು ಈ "ನಳಾದಯೋಜನಾ" ಎಂದರೆ Pipe Water Scheme ತೆಗೆದುಕೊಂಡರೆ ಇಲ್ಲಿಯ ಜನರಿಗೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ಇಲ್ಲಿಯ ನೀರು ಬಹಳ ಉಪ್ಪಿನಿಂದ ಕೂಡಿರುವುದಾಗಿದೆ. ಇಂತಹ ಉಪ್ಪಿನ ನೀರನ್ನು ದನಗಳಿಗೆ ಕೂಡ ಕುಡಿಸುವುದಿಲ್ಲ,

ಇಂತಹ ನೀರು ಹೆಚಾಗಿದೆ. ಇದರಿಂದ ಜನ ಜಾನುವಾರುಗಳಿಗೆ ಕೂಡ ಅನುಕೂಲ ವಾಗುವುದಿಲ್ಲ. ಆದುದರಿಂದ ಇಂತಹ ಗ್ರಾಮಾತರ ಜನಗಳ ಉಪಯೋಗಕ್ಕಾಗಿ ಕೆಲವು ನಳಾಗಳನ್ನು ಹಾಕಿಕೊಡುವ ಯೋಜನಾವನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಅಲ್ಲಿಯ ಜನರು ಬೇಸಿಗೆಯಲ್ಲಿ ಎಂದರೆ ಏಪ್ರಿಲು ಮತ್ತು ಮೇ ತಿಂಗಳುಗಳಲ್ಲಿ ಎರಡು ಮೂರು ಮೈಲಿಗಳ ದೂರ ನಡೆದುಕೊಂಡು ಹೋಗಿ ನೀರನ್ನು ತರುತ್ತಿರುವುದ ಎಲ್ಲರಿಗೂ ತಿಳಿದ ವಿಷಯ. ಇಲ್ಲಿರುವ ಬಡ ಜನಗಳೆಲ್ಲ ನೀರಿಗಾಗಿ ಈ ರೀತಿಯಾದ ಕಠಿನ ಪರಿಸ್ಥಿತಿಯಿಂದ ಕೂಡಿ ಬಹಳ ತೊಂದರೆಪಡುತ್ತಿದ್ದಾರೆ. ಇದನ್ನೆಲ್ಲಾ ಈಗಲಾದರೂ ಸರಕಾರ ಲಕ್ಷ್ಯ ಕೊಟ್ಟು ತಕ್ಕಷ್ಟು ಅನುಕೂಲ ಮಾಡಿಕೊಡಬೇಕು. ಇದಕ್ಕಾಗಿ ಈ ಕಡೆಗಳಲ್ಲಿ Pipe Water Scheme ಮಾಡುವ ಆವಶ್ಯಕತೆ ಅದೆ.

ಇನ್ನು ಹರಿಜನರಿಗೆ ನಮ್ಮ ಕಡೆಗಳಲ್ಲಿ ಕುಡಿಯುವ ನೀರಿನ ಒಂದು ಬಾವಿ ಇಲ್ಲ. ಈಗೇನೋ ಹರಿಜನರನ್ನು ಮುಂದಕ್ಕೆ ತರಬೇಕೆಂದಿದೆ. ನಮ್ಮ ಕಡೆ ಈ ಹರಿಜನರಲ್ಲಿ ಕೆಲವರನ್ನು ಮಾದಿಗರು ಎಂತಲೂ ಮತ್ತೆ ಕೆಲವರನ್ನು ಹೊಲೆಯರವರು ಎಂದು ಹೇಳುತ್ತಾರೆ. ಆದರೆ ಒಬ್ಬರು ಮುಟ್ಟಿದ ನೀರನ್ನು ಇನ್ನೊಬ್ಬರು ಕುಡಿಯೊಲ್ಲರು. ಮತ್ತು ಒಬ್ಬರು ತುಂಬುವ ನೀರಿನ ಬಾವಿಗೆ ಇನ್ನೊಬ್ಬರು ಆ ಬಾವಿಯನ್ನು ಮುಟ್ಟುವುದಿಲ್ಲ. ಅಲ್ಲದೆ ಇತರ ಜನಗಳು ಉಪಯೋಗಿಸುವ ಬಾವಿಗಳಲ್ಲಿ ಈ ಹರಿಜನರಿಗೆ ನೀರನ್ನು ಹೋಗಿ ತರಲು ಅವರಿಗೆ ಅವಕಾಶ ಕೊಡುವುದಿಲ್ಲ. ಅದರಿಂದಾಗಿ ಈ ಹರಿಜನರಿಗೇ ಪ್ರತ್ಯೇಕವಾದ ಬಾವಿಗಳನ್ನು ಕೊಡಿಸಿ ಕೊಡಬೇಕು. ಹಳ್ಳಿಗಳಲ್ಲಿ ಈ ಹರಿಜನರಿಗೆ ಈ ರೀತಿಯಾದ ಕುಡಿಯುವ ನೀರಿನ ಬಾವಿಗಳೇ ಇಲ್ಲದಿರುವಾಗ ಅವರು ನೀರಿಗೇನು ಮಾಡಾರು? ತಾವೇ ಯೊಚಿಸಿ, ಹಿಂದೆ ನಮ್ಮ ಈ ಪ್ರಾಂತ ನೈಜಾಂ ಸ್ಟೇಟಿನಲ್ಲಿದ್ದಾಗ ನಾವೂ ಕೂಡ 50.60 ಜನಸಂಖ್ಯೆಯುಳ್ಳ ಹೊಲೇರಿಗಾಗಿ, ಅಥವಾ ಮಾದಿಗರಿಗಾಗಿ ಒಂದು ತತ್ವದ ಮೇಲೆ ಈ ಕುಡಿಯುವ ನೀರಿನ ಭಾವಿ ತೋಡಿಸಬೇಕೆಂದು ಹೇಳುತ್ತಲೇ ಬಂದೆವು. ಆದರೂ ಏನೂ ಆಗಲಿಲ್ಲ. ಅಲ್ಲದೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಹಳ್ಳಿಯಲ್ಲಿದ್ದ ಒಂದು ಕುಡಿಯುವ ನೀರಿನ ಬಾವಿಯಿಂದ ನೀರನ್ನು ತುಂಬಲಿಕ್ಕಾಗಿ ಹರಿಜನ ಹೆಣ್ಣು ಮಗಳು ಒಂದು ಕಲ್ಲಿನ ಮೇಲೆ ಕಾಯುತ್ತ ಕುಳಿತಿದ್ದಳು. ಏಕೆಂದರೆ, ಆ ಬಾವಿಯಲ್ಲಿ ಎಲ್ಲರೂ ನೀರನ್ನು ತುಂಬಿಕೊಂಡು ಹೋಗಿಯಾದ ಮೇಲೆ ತೆಗೆದುಕೊಂಡು ಹೊಗಬೇಕು. ಅಲ್ಲದೆ ಅವಳಿಗೆ ಮೊದಲು ನೀರು ತುಂಬಲಿಕ್ಕೆ ಹತ್ತಿರ ಅಲ್ಲಿನ ಜನ ಸೇರಿಸಲೊಲ್ಲರು. ನಾನು ಆಗ ಆ ಹೆಣ್ಣುಮಗಳ ಬಳಿ ಹೋಗಿ ಸುಮ್ಮನೆ ಹೋಗಿ ನೀರನ್ನು ಬಾವಿಯಲ್ಲಿ ತುಂಬಿಕೊಂಡು ಹೋಗೆಂದು ಹೇಳಿದರೂ ಆಕೆ ಹೋಗಲೊಲ್ಲಳು. ಹೀಗಿದೆ ಹರಿಜನರ ಸ್ಥಿತಿ ನಮ್ಮಕಡೆ. ಆದರಿಂದ ಈ ಜನಕ್ಕಾಗಿ ಕುಡಿಯುವ ನೀರಿನ ಬಾವಿಯನ್ನು ಕೊಡಬೇಕೆಂದು ಕೇಳುತ್ತಿದ್ದರೂ ಮನಸ್ಸು ಕೊಡುತ್ತಿಲ್ಲ. ಏನೋ ನಮ್ಮಲ್ಲಿ ಹರಿಜನರಾಗಿರುವವರೇ ಮಿನಿಸ್ಟರಾಗಿರುವುದರಿಂದ ಈಗಲಾದರೂ ನಮ್ಮ ಕಡೆಯಲ್ಲಿರುವ ಹರಿಜನರಿಗಾಗಿ ಸಾಕಷ್ಟು ಕುಡಿಯುವನೀರಿನ ಬಾವಿಗಳನ್ನು ಕೊಡಿಸಿಕೊಡುವ ಯೋಜನಾ ಮಾಡಬೇಕು ಎಂದು ಕೋರುತ್ತೇವೆ.

ಇನ್ನು ಡೋಣಿ ಕೆಲಸಗಳನ್ನು ಈಗ "Scarcity Works" ಎನ್ನುವ ಬಾಬಿನಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಏಕೆಂದರೆ, ನಮ್ಮ ದೇಶದ ಈ ಭಾಗಗಳು ಬರಗಾಲಕ್ಕೆ ಸಿಕ್ಕಿ ಯಾವಾಗಲೂ ಕಷ್ಟಪಡುತ್ತಿವೆ. ಅಲ್ಲದೆ ಇಲ್ಲಿರುವ ಜಮೀನುಗಳನ್ನು ಕೂಡ ಉಳುಮೆ ಮಾಡಲು ಸಾಕಷ್ಟು ನೀರಿನ ಸೌಕರ್ಯ ಇಲ್ಲದಿರುವುದರಿಂದ ಉಳುವುದಕ್ಕಾಗದೆ ನಿರುಪಯೋಗ ವಾಗಿವೆ. ಹೀಗಿರುವ ಈ ಭಾಗಗಳಲ್ಲಿ "Scarcity work Scheme" ಎಂದು ಕೆಲವು ಯೋಜನಾಗಳನ್ನು ಹಾಕಿಕೊಂಡು ಕೆಲಸಗಳನ್ನು ಮಾಡಲಾಗುತ್ತಿದೆ. ಇದರಂತೆ ಕೆಲವು ಕಡೆ ಡೋಣಿಗಳು ಮತ್ತು ಕೆಲವು ರಸ್ತೆಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಈ ಹಳೆಯ ಮೈಸೂರಿನ ಭಾಗಗಳಲ್ಲಿ ಪ್ರತಿಯೊಂದು ಜಿಲ್ಲೆಗೂ ಉತ್ತಮವಾದ ರಸ್ತೆಗಳಿವೆ ಮತ್ತು ಎಲ್ಲರೀತಿಯ ಸೌಕರ್ಯಗಳೂ ಇವೆ ಎಂದು ಕೇಳಿದೆ. ಆದರೆ ನಮ್ಮ ಬೊಂಬಾಯಿ ಕರ್ನಾಟಕದ ಭಾಗಗಳಲ್ಲಿ ಈ ರೀತಿಯಾದ ಸೌಕರ್ಯಗಳು ಕಡಿಮೆ. ಎಲ್ಲಿ ಇಂತಹ ಸೌಕರ್ಯಗಳಿಲ್ಲವೋ ಅಂತಹ ರಸ್ತೆಗಳ ಒಂದು ಪಟ್ಟಿ ಮಾಡಿ ಮುಖ್ಯವಾದ ರಸ್ತೆಗಳ ಒಂದು ಯೋಜನಾ ಮಾಡಬೇಕು. ಇದಕ್ಕಾಗಿ ಎರಡು ಮೂರು ಕೋಟಿಯಷ್ಟು ಖರ್ಚಾದರೂ ಚಿಂತೆಯಿಲ್ಲ ಮಾಡಬೇಕು. ನಾವೇನೋ ಇಲ್ಲಿ ಬಂದು ಹಗಲೆಲ್ಲ ಹೇಳುತ್ತಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ರಸ್ತೆಯ ಸಲುವಾಗಿ ಅಥವಾ ಒಂದು ಸೇತುವೆ ವಿಚಾರವಾಗಿ ಸರಿಪಡಿಸಲು ಒಂದು District Development Board ಎಂದಿದೆ, ಅದರಿಂದ ಈ ಕೆಲಸಗಳನ್ನು ಮಾಡಿಸಿಕೊಳ್ಳ ಬಹುದು ಎಂದು ಹೇಳಬಹುದು. ಆದರೆ ಅಲ್ಲಿ ಹೋಗಿ ಎಷ್ಟು ಹೇಳಿದರೂ ಆಗಲಿಲ್ಲ. ಅದರಿಂದಾಗಿ ತಮ್ಮಲ್ಲಿಗೆ ಈ ವಿಷಯಗಳನ್ನೆಲ್ಲ ತಮ್ಮ ಗಮನಕ್ಕೆ ತರಬೇಕಾಗಿ ಬಂದಿದೆ. ಅದರಿಂದ ಡಿಸ್ಟ್ರಿಕ್ಟು ಲೆವೆಲ್ಲಿನಲ್ಲಿ ಈ ರೀತಿಯಾದ ಕೆಲಸಗಳು ಆಗುತ್ತಿಲ್ಲ. ಅದರಿಂದಾಗಿ ಈ ನೀರಿಗಾಗಿ ಸರಕಾರದವರು ಪೂರ್ಣವಾಗಿ ಲಕ್ಷ್ಯಕೊಟ್ಟು ತೆಗೆದುಕೊಳ್ಳಬೇಕು ಎಂದು ನಾನು ಆಶೆ ಮಾಡುತ್ತೇನೆ.

ಇನ್ನು ನಮ್ಮ ಕಡೆಗಳಲ್ಲಿ ಉತ್ತಮವಾದ ರಸ್ತೆ ಇಲ್ಲ, ಪೂಲುಗಳೂ ಸಹಾ ಇಲ್ಲ.

ನಮ್ಮ ಹಿಟ್ಟಿಹಳ್ಳಿಯಲ್ಲಿ ಒಂದು ಡೋಣಿಯ ಅವಶ್ಯಕವಿದೆ. Between Bagewadi and Bijapur, and Bijapur to Thalikote ಈ ಕಡೆಗಳಲ್ಲಿ ಬಸ್ಸು ಸಂಚಾರಕ್ಕೆ ಸಾಕಷ್ಟು ರೋಡುಗಳಿಲ್ಲ. ಬೇಸಿಗೆ ಕಾಲದಲ್ಲೇನೋ ಕೆಲವು ಬಸ್ಸುಗಳು ಓಡಾಡುತ್ತವೆ. ಆದರೆ ಮಳೆಗಾಲದಲ್ಲಿ S.T. ಬಸ್ಸು ಮತ್ತು ಮತ್ತು ಇತರ ಬಸ್ಸುಗಳು ಎರಡೆರಡು ಮೂರು ಮೂರು ಗಂಟೆಗಳಕಾಲ ಡೋಣಿ ದಂಡೆಯಲ್ಲೇ ಕಾಯಬೇಕಾದ ಪರಿಸ್ಥಿತಿ ಬಂದಿದೆ. ಏಕೆಂದರೆ ಡೋಣಿಗಳಿಲ್ಲದೆ ಇರುವುದರಿಂದ ಹಳ್ಳಿಗಳಲ್ಲಿ ಮಳೆಯ ನೀರು ಬಹಳವಾಗಿ ನಿಂತಿರುತ್ತವೆ. ಈ ನೀರು ಇಳಿಯುವವರೆಗೂ ಆ ರಸ್ತೆಗಳಲ್ಲಿ ಬಸ್ಸುಗಳು ಓಡಾಡಲು ಶಕ್ಯವಿಲ್ಲ ಅದರಿಂದ ನಾನು ಹೇಳುವುದು, ಈ ಭಾಗಳಿಗಾಗಿ ಒಂದು ಯೋಜನಾ ಹಾಕಿ ಮುಖ್ಯವಾಗಿ ಬೇಕಾದ ಒಂದೊಂದು ಬ್ರಿಡ್ಜ್ ಮತ್ತು ರಸ್ತೆಯನ್ನು ಆದಷ್ಟು ಬೇಗ ಮಾಡಿಕೊಡುವುದರ ಕಡೆಗೆ ಲಕ್ಷ್ಯತೆಗೆದುಕೊಳ್ಳಬೇಕು.

ಇನ್ನು ಕುಡಿಯುವ ನೀರಿನ ಸಲುವಾಗಿ ಎಲ್ಲೆಲ್ಲಿ 500 ಜನಗಳಿಗೆ ಮೇಲ್ಪಟ್ಟು ಜನಸಂಖ್ಯೆಯಿದೆಯೋ ಅಲ್ಲಿಗೆಲ್ಲ ತಕ್ಷಣ ಈ ಕುಡಿಯುವ ಭಾವಿಗಳನ್ನು ಉಚಿತವಾಗಿಕೊಡುವ ಸೌಕರ್ಯವನ್ನು ಒದಗಿಸಬೇಕು. ಕೆಲವು ಕಡೆ ಅರ್ಧ ಹಣ ಕೊಟ್ಟರೆ ಸರಕಾರ ಅರ್ಧ ಕೊಟ್ಟು ಮಾಡಿ ಕೊಡುವ ಪದ್ಧತಿ ಕೆಲವೆಡೆ ಇವೆ ಎಂದು ಕೇಳಿದೆ.

(ಶ್ರೀ ಕೆ. ಎ. ಪಾಟೀಲ್)

ಮೂರು ಸಾವಿರ ಅಥವಾ ಎರಡು ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲೂ ಅರ್ಧ ಹಣವನ್ನಿಟ್ಟುಕೊಂಡು ಇರುವುದು ಕಷ್ಟವಾಗುತ್ತದೆ. ಹೀಗೆ ಜನಸಂಖ್ಯೆ ಹೆಚ್ಚಾಗಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಭಾವಿಗಳನ್ನು ಉಚಿತವಾಗಿ ಕೊಡಲು ಹೆಚ್ಚಿನ ಗಮನಕೊಡಬೇಕು ಎಂದು ನನ್ನ ಆಶೆಯಾಗಿದೆ.

ಇನ್ನು "ಪೂಲಿನ ಸಲುವಾಗಿ" ನಮ್ಮ ಕಡೆಗೆ ಹಣ ಸಾಕಷ್ಟು ಇಟ್ಟಿಲ್ಲ ಎನ್ನುವುದು ಇಲ್ಲಿ ಕಾಣುತ್ತದೆ. ನಮ್ಮ ಊರಿನ ಬಳಿ—ಹುನಗುಂದದಬಳಿ (ನಮ್ಮ ಸ್ಪೀಕರ್ ರವರ ಊರು) ಒಂದು ನದಿ ಇದೆ. ಅದಕ್ಕೆ ಒಂದು ಬ್ರಿಡ್ಜನ್ನು ಮಾಡಿಸಿದರೆ, ಅದರಿಂದ ಒಂದು ನೂರು ಮೈಲಿ ರೋಡುಮಾಡಲು ಅನುಕೂಲವಾಗುತ್ತದೆ. ಮತ್ತು ಬಸ್ಸುಗಳು ಜನಗಳು ಓಡಾಡಲಿಕ್ಕೆ ಈ ರಸ್ತೆಯಿಂದ ಹೆಚ್ಚಿನ ಸೌಕರ್ಯಗಳು ದೊರೆಯುತ್ತವೆ. ಈ ರೋಡುಗಳಿಗಾಗಿ ಟ್ಯಾಕ್ಸನ್ನು ಬೇರೆ ವಸೂಲು ಮಾಡುತ್ತಿರುವುದರಿಂದ ಇದರ ಬಗ್ಗೆ ಹೆಚ್ಚಿನ ಲಕ್ಷ್ಯಕೊಟ್ಟು ಜನಕ್ಕೆ ಸೌಕರ್ಯ ಮಾಡಿಕೊಡಬೇಕು. ಉಕ್ಕಲಿಯಿಂದ ತುಂಬಿಗೆವರೆಗೆ ಒಂದು ರಸ್ತೆ ಮಾಡಿಸಿದರೆ ಅದರ ಸುತ್ತ ಇರುವ 15-20 ಗ್ರಾಮಗಳ ಜನರು ಓಡಾಡಲಿಕ್ಕೆ ಅನುಕೂಲವಾಗುತ್ತದೆ. ಈ ಬಗ್ಗೆ ಸಾಕಷ್ಟು ಲಕ್ಷ್ಯವಿಟ್ಟು, ಮಾಳವಾರ ಗ್ರಾಮದಿಂದ ಸಾಲವಾಡಗಿ ಗ್ರಾಮಕ್ಕೆ ಕೂಡಿಸುವುದು, ವಡವಡಗಿ ಗ್ರಾಮದಿಂದ ತಾಳಿಕೋಟೆ ಬಾಗೆ ವಾಡಿ ರಸ್ತೆ ಕೂಡಿಸುವುದು ಮುಸಬಿನಾಳ ಗ್ರಾಮದಿಂದ ಬಾಗೇವಾಡಿ ಗ್ರಾಮಕ್ಕೆ ಕೂಡಿಸುವುದು ಇಂಗಳೇಶ್ವರದಿಂದ ಬಾಗೇವಾಡಿ ಗ್ರಾಮಕ್ಕೆ ಕೂಡಿಸುವುದು ಈ ಕೆಲಸಗಳನ್ನು ತೆಗೆದುಕೊಳ್ಳಬೇಕು.

ಕೆಲವು ಗ್ರಾಮಗಳಲ್ಲಿ ಮೂರು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆಯಿದೆ. ಉಕ್ಕಲಿ ಗ್ರಾಮದಲ್ಲಿ ಐದುಸಾವಿರಕ್ಕೂ ಹೆಚ್ಚಿನ ಜನಸಂಖ್ಯೆ ಇದೆ. 21 ಸಾವಿರಕ್ಕೂ ಮೇಲೆ ಲೋಕಲ್ ಟ್ಯಾಕ್ಸುಗಳು ಬರುತ್ತವೆ. ಅಲ್ಲದೆ ತಾಲ್ಲೂಕು ಪ್ಲೇಸ್ ಆಗಿರುವುದರಿಂದ ಉತ್ತಮವಾದ ರಸ್ತೆಗಳಿಲ್ಲ. ಈ ಕಡೆಗಳಲ್ಲೆಲ್ಲ ಒಳ್ಳೆಯ ಸಿಂವೆಂಟಿನ ರಸ್ತೆ ಮಾಡಿ ಕೊಡಬೇಕು, ಇಂತಹ ರಸ್ತೆಗಳನ್ನು ಮಾಡುವುದರಿಂದ ಜನಕ್ಕೆ ಹೆಚ್ಚಿನ ಅನುಕೂಲಗಳು ಸಿಗುತ್ತವೆ. ಅದರಿಂದ ಈ ಕಡೆ ಇದನ್ನು ಮಾಡಿಸಿಕೊಡಬೇಕೆಂದು ಆಶೆಪಡುತ್ತೇನೆ.

ಈ Rural Development Schemes ಸಲುವಾಗಿ ಬೇಕಾದಷ್ಟು ಹಣ ಖರ್ಚುಮಾಡುತ್ತಿದ್ದಾರೆ. ಇದರ ಸಲುವಾಗಿ ಎಷ್ಟು ಖರ್ಚಾಗಿದೆ ಮತ್ತು ಇನ್ನೂ ಹೆಚ್ಚಾಗಿ ಎಷ್ಟು ಖರ್ಚುಮಾಡಬೇಕೆಂದಿದ್ದಾರೆ ಎನ್ನುವುದನ್ನು ಬಡ್ಜೆಟ್ಟಿನಲ್ಲಿ ನೋಡಿದರೆ ಕಾಣಲಿಲ್ಲ. ಈ ತರಹದಲ್ಲಿ ಬಾಂಬೆ ಕರ್ನಾಟಕದ ಭಾಗಗಳಲ್ಲಿ ಬಹಳವಾಗಿ ಕೆಲಸ ನಡೆದಿದೆ. ಇಂತಹ ಕೆಲಸಗಳನ್ನು ವಿಚಾರಮಾಡಿ ಕೆಲಸಮಾಡುವುದು ಬಹಳ ಅವಶ್ಯಕತೆಯಿದೆ. ಹೋದಸಾರಿ ಕೂಡ ನಾನು 12 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಜನಸಂಖ್ಯೆ ಇರುವ ಒಂದು ಗ್ರಾಮದಲ್ಲಿ ಡೋಣಿಕಟ್ಟಿಸಿ ನೀರಿನ ಸೌಕರ್ಯ ಮಾಡಬೇಕೆಂದು ಹೇಳಿದ್ದೆ, ಏಕೆಂದರೆ ಅಲ್ಲಿ ಉಪ್ಪುನೀರೇ ಹೆಚ್ಚಾಗಿದೆ. ಇದಕ್ಕಾಗಿ ಒಂದು ಮೂರು ನಾಲ್ಕು ಸಾವಿರ ರೂಪಾಯಿಗಳ ಹೆಚ್ಚಿನ ಖರ್ಚಾದರೂ ಚಿಂತೆಯಿಲ್ಲ ಇದನ್ನು ತೆಗೆದುಕೊಳ್ಳಬೇಕಾದುದು ಅವಶ್ಯಕವಾದದ್ದು.

ಈ Scarcity work ಎಂದು ಹಾಕುವಾಗ ಜಿಲ್ಲೆಗಳಿಗೆ ಇಷ್ಟಿಷ್ಟು ಎಂದು ಹಣವನ್ನು ಹಾಕಿಕೆಲಸ ನಡೆಸುತ್ತಾರೆ. ನಮ್ಮ ಇಂಜಿನೀಯರಿಂಗು ಖಾತೆಯಲ್ಲಿ ಹೀಗೆ ಯಾವ ವಿಧವಾದ ಕೆಲಸಗಳೂ ಆಗುತ್ತಿಲ್ಲ. ಯಾವುದಾದರೂ ಕೆಲಸವಾಗಬೇಕಾದರೆ ಈ ರೀತಿಯಾದ District level Committee ಗೆ ಹೋಗಿ ಹೇಳಬೇಕಾಗುತ್ತದೆ. ಅಲ್ಲಿ ಅವರಲ್ಲಿ ಬಡ್ಜೆಟ್ಟಿಲ್ಲ ಎಂದು ಅವರು ಹೇಳಿ ಕೆಲಸವನ್ನು ತೆಗೆದುಕೊಳ್ಳುವುದಕಾಗುತ್ತಿಲ್ಲ. ಇಂತಹ ನಿದರ್ಶನಗಳು ಬೇಕಾದಷ್ಟಿವೆ. ಇದನ್ನೆಲ್ಲ ಸರಿಯಾಗಿ ವಿಚಾರ ಮಾಡಿ ವ್ಯವಸ್ಥೆ ಮಾಡಬೇಕೆಂದು ಆಶೆ ಮಾಡುತ್ತೇನೆ. ಇದರ ಬಗ್ಗೆ ಮಂತ್ರಿಗಳು ಹೆಚ್ಚು ಕಾಳಜಿ ತೆಗೆದು ಕೊಂಡು ನಾನು ಹೇಳಿರುವ ಹತ್ತು ವಿಷಯಗಳಲ್ಲಿ ಒಂದನ್ನಾದರೂ ಮಾಡುತ್ತಾರೆನ್ನುವ ಆಶಯವಿದೆ. ನಾವು ಹೇಳುವುದಾಗುತ್ತದೆ ಅವರೂ ಕೇಳುವುದಾಗುತ್ತದೆ. ಹೀಗೆ ಈ ಪರಿಸ್ಥಿತಿ ಮುಂದಿನಸಲ ಬರಬಾರದು ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಅಧ್ಯಕ್ಷರೇ, ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಹದಿನೇಳೂವರೆ ಕೋಟಿ ರೂಪಾಯಿಗಳ ಡಿಮ್ಯಾಂಡುಗಳ ಬಗ್ಗೆ ಮಾತನಾಡುತ್ತ ನಾನು ಕೆಲವೇ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಗುಂಡ್ಲುಪೇಟೆ ತಾಲ್ಲೂಕಿನ ವಿಚಾರವಾಗಿ ಹೋದವರ್ಷ ಹೇಳಿದ್ದೇನೆ: ಈ ವರ್ಷ ಬಡ್ಜೆಟ್‌ಮೇಲಿನ ಸಾಮಾನ್ಯ ಚರ್ಚೆಯಲ್ಲಿ ಹೇಳಿದ್ದೇನೆ, ಮುಖ್ಯ ಮಂತ್ರಿಗಳು ಪ್ರವಾಸ ಬಂದಿದ್ದಾಗ ಅವರಿಗೆ ಹೇಳಿದ್ದೇನೆ, ಪಬ್ಲಿಕ್ ವರ್ಕ್ಸ್ ಮಂತ್ರಿಗಳಿಗೂ ತಿಳಿಸಿದ್ದೇನೆ. ಅವರು ಅಲ್ಲಿನ ಸ್ಥಿತಿಗತಿಗಳನ್ನು ಕಣ್ಣಾರೆ ನೋಡಿದ್ದಾರೆ. ಈ ವಿಚಾರದಲ್ಲಿ ನೂರಾರು ಕಾಗದಗಳನ್ನು ಬರೆದಿದ್ದೇನೆ, ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲ ಹೇಳಿದ್ದೇನೆ. ಇದೇ ವಿಷಯದಲ್ಲಿ ಪುನಃ ಇಲ್ಲಿ ಮಾತನಾಡುವುದು ಅನಾವಶ್ಯಕವಾಗಿದೆ. ಆದರೆ 'Crying baby gets more milk' ಎಂದು ಸರ್ವಸಾಮಾನ್ಯವಾದ ವಚನವಿರುವುದರಿಂದ ಇನ್ನೊಂದು ಸಲ ಅತ್ತುಬಿಡೋಣವೆಂದು ಹೇಳುತ್ತಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಅವರು ಅಷ್ಟು soft hearted ಎಂದು ತಿಳಿದು ಕೊಂಡಿರಾ?

ಶ್ರೀ ಕೆ. ಎಸ್. ನಾಗರತ್ನಮ್ಮ.—ಅದಕ್ಕೇ ಹೇಳುವುದು. ಮೊನ್ನೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಕಬ್ಬಹಳ್ಳಿವಿಚಾರವಾಗಿ ಹೇಳುತ್ತ ಅದು feasible ಅಲ್ಲವೆಂದು 1953ರಲ್ಲಿ ತೀರ್ಮಾನವಾಗಿದೆ, ಈಗ ಪುನಃ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದರು. ಈ ಕಾರ್ಯವನ್ನು ಮಾಡಿದರೆ ವಿಜಯಪುರದ ಅಮಾನಿಕೆರೆಗೆ ಧಕ್ಕೆ ಬರುತ್ತದೆಂದು ಕೆಲವರು ಹೇಳಬಹುದು. ಇದು ಖಂಡಿತ ಸುಳ್ಳು ಎಂಬುದು ನನಗೆ ಗೊತ್ತಿದೆ. ಇಲ್ಲಿ ಮುಳುಗಡೆಯಾಗುವ ಜಮೀನಿನ ರೈತರು ಮತ್ತು ಜಮೀನ್ದಾರರು ಪ್ರಭಾವಶಾಲಿಗಳಾಗಿರುವುದರಿಂದ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳ ಭಾಷೆಯೊಳಗೆ ಹೇಳಬೇಕಾದರೆ—ಅವರ ವಶೀಲಿ ಬಾಜಿಯಿಂದ ಆಗಿದೆಯೇ ಹೊರತು ಬೇರೆ ಕಾರಣದಿಂದಲ್ಲ. ಈಗ ಪರಿಸ್ಥಿತಿ ಬೇರೆಯಾಗಿರುವುದರಿಂದ ಇದನ್ನು ದಯವಿಟ್ಟು ಪರೀಕ್ಷಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಅನೇಕ ಪುರಾತನವಾದ ಭಾರಿ ಕೆರೆಗಳಿವೆ. ಇವನ್ನೆಲ್ಲ ರಿಪೇರಿಮಾಡಿಕೊಟ್ಟರೆ ಮಂಡ್ಯ ತಾಲ್ಲೂಕಿಗಿಂತ ಹೆಚ್ಚು ಫಲವತ್ತಾಗುತ್ತದೆಂದು ಧೃಡವಾಗಿ ಸಂಶಯವಿಲ್ಲದೆ ಹೇಳುತ್ತಿದ್ದೇನೆ. ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಇದಕ್ಕೆಲ್ಲ ನಿಗಾ ಕೊಡುತ್ತಾರೆಂದು ನಂಬಿದ್ದೇನೆ. ನಾಲ್ಕೈದು ವರ್ಷಗಳಿಂದ ಮಳೆ ಯಿಲ್ಲದೆ ದಿಕ್ಕೆಟ್ಟಿರುವ

ರೈತರಿಗೆ ಅನುಕೂಲ ಮಾಡಿಕೊಡುತ್ತೀರೆಂದು ನಂಬಿದ್ದೇನೆ.

ಗುಂಡ್ಲುಪೇಟೆ ಟೌನ್ ನೀರು ಸರಬರಾಜು ಬಗ್ಗೆ ಮಾತನಾಡುತ್ತ ಇಲ್ಲಿ ಅರ್ಧಂಬರ್ಧ ಕೆಲಸವಾಗಿದೆ. ಟೌನ್ ಮುನಿಸಿಪಾಲಿಟಿಯವರು ಹಣ ಕೊಟ್ಟಿಲ್ಲವೆಂದು ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಕೆಲಸವನ್ನು ನಿಲ್ಲಿಸಿಬಿಟ್ಟಿದ್ದಾರೆ. ಮಾನ್ಯ ಮಂತ್ರಿಗಳಾದ ಚೆನ್ನಿಗರಾಮಯ್ಯನವರು ಈ ಮುನಿಸಿಪಾಲಿಟಿಗೆ ಸಾಲಕೊಟ್ಟಿದ್ದಾರೆ. ಈ ಹಣ ಪಬ್ಲಿಕ್ ವರ್ಕ್ಸ್ ಇಲಾಖೆಗೆ transfer ಆಗಿ ಕೆಲಸವನ್ನು ತೆಗೆದುಕೊಂಡಿಲ್ಲ. ದಯವಿಟ್ಟು ಇದನ್ನು ಬೇಗ ಷುರು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಗುಂಡ್ಲುಪೇಟೆ ಟೌನ್ ಟ್ರಾವಲರ್ಸ್ ಬಂಗಲೆಯನ್ನು ಮಾನ್ಯ ಮಂತ್ರಿಗಳೇ ಕಣ್ಣಾರೆ ನೋಡಿದ್ದಾರೆ. ಇದು ಸೆಕಂಡ್ ಕ್ಲಾಸ್ ಟ್ರಾವಲರ್ಸ್ ಬಂಗಲೆಯಾಗಿದೆ. ಬೇಕಾದಷ್ಟು ಜನ distinguished guests ಬರುತ್ತಾರೆ. ಅವರು ಇಳಿದುಕೊಳ್ಳಲು ಸರಿಯಾದ ಸೌಕರ್ಯವಿಲ್ಲ. ಇದು ಬಂಡೀಪುರ, ಉದಕ ಮಂಡಳಗಳಿಗೆ ಹೋಗುವ ದಾರಿಯಲ್ಲಿದೆ. ಇಲ್ಲಿ ಅನೇಕ ಜನ ತಂಗುತ್ತಾರೆ ಇದನ್ನು first class T.B. ಆಗಿ ಬದಲಾಯಿಸಿ ಎಲ್ಲ ಸೌಲಭ್ಯಗಳನ್ನೂ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಮಂತ್ರಿಗಳು ಗುಂಡ್ಲುಪೇಟೆ ತಾಲ್ಲೂಕಿಗೆ ಬಂದಿದ್ದಾಗ ಪರಮಪುರ—ಚಿಕ್ಕತುಪ್ಪೂರು ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸಿಕೊಳ್ಳಬೇಕೆಂದು ಜನರು ಹೇಳಿದರು, ನಾನೂ ಹೇಳಿದೆ. ಮಂತ್ರಿಗಳು ಇದು ಸೂಕ್ತವಾದದ್ದು, ಯೋಚನೆ ಮಾಡುತ್ತೇನೆಂದು ಹೇಳಿದರು. ಇದಾಗಿ ಮೂರು ನಾಲ್ಕು ತಿಂಗಳಾದುವು. ಸರ್ಕಾರದವರಿಗೆ ಯೋಚನೆ ಮಾಡುವುದಕ್ಕೆ ಇಷ್ಟು ಕಾಲಸಾಕು ಎಂಬುದು ನನ್ನ ಭಾವನೆ. ದಯವಿಟ್ಟು ಇದನ್ನು ಸೂಕ್ತವೆಂದು ನಿರ್ಧರಿಸಿ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಸಣ್ಣ ವಿಚಾರ. ಲಕ್ಷಾಂತರ ಕೋಟ್ಯಾಂತರ ರೂಪಾಯಿ ಖರ್ಚಾಗುವುದಿಲ್ಲ. ಆದರೆ ಬಹಳ ನಾಚಿಕೆಗೇಡಾದ ವಿಚಾರ. ಇಷ್ಟು ದೊಡ್ಡ ಹೈಕೋರ್ಟ್ ಬೆಂಗಳೂರಿನಲ್ಲಿದೆ, ಅಲ್ಲಿ ಕೆಲಸ ಮಾಡತಕ್ಕ ಲೇಡಿ ಅಡ್ವೋಕೇಟರುಗಳಿಗೆ ಪ್ರೈವೇಟ್ ಆಗಿ ಉಪಯೋಗಿಸಿಕೊಳ್ಳುವುದಕ್ಕೆ ಒಂದು lavatory ಇಲ್ಲವಂತೆ? ಹೆಣ್ಣು ಮಕ್ಕಳಿಗೆ ಎಂಥ ಅಪಚಾರ! ಈ ತರಹ ಅಪಚಾರ ಮಾಡುವುದೆಂದರೆ ಹೆಣ್ಣು ಮಕ್ಕಳಿಗೆ ಮನಸ್ಸು ಬಹಳ ನೋಯುತ್ತದೆ. ಈ ಬಗ್ಗೆ ಸರ್ಕಾರ ಯೋಚನೆ ಮಾಡದೆ ಇರುವುದು ಹೆಣ್ಣು ಮಕ್ಕಳನ್ನು ಹೀನಾಯ ದೃಷ್ಟಿಯಿಂದ ನೋಡುತ್ತಿದೆ ಎಂದು ನನ್ನ ಭಾವನೆ. ಇದಕ್ಕೆ ಕೂಡಲೇ ನಿಗಾ ಕೊಟ್ಟು ಅನುಕೂಲಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ವಿಜ್ಞಾಪಿಸಿಕೊಂಡು, ಈ ಡಿಮ್ಯಾಂಡನ್ನು ಸಮರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಮರಾಮತ್ತು ಖಾತೆಯ ಡಿಮ್ಯಾಂಡನ್ನು ಸ್ವಾಗತಿಸುತ್ತ ಕೆಲವು ಸೂಚನೆಗಳನ್ನು ಇಡಬಯಸುತ್ತೇನೆ. ಈ ಒಳಗಾಗಿ ನನ್ನ ಮಿತ್ರರು ಹೈದರಾಬಾದ್ ಕರ್ಣಾಟಕದ ರಸ್ತೆಯ ಬಗ್ಗೆ ತಮ್ಮ ಇಚ್ಛೆಯನ್ನು ವ್ಯಕ್ತ ಮಾಡಿದ್ದಾರೆ. ಹೈದರಾಬಾದ್ ಕರ್ಣಾಟಕದಲ್ಲಿ ಸಾರಿಗೆ ಮತ್ತು ಸೌಕರ್ಯ ಎಷ್ಟರಮಟ್ಟಿಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಕೂಡ ಹೇಳುತ್ತಿದ್ದಾರೆ ಮತ್ತು ಮಾನ್ಯ ಸದಸ್ಯರು ಕೂಡ ಹೇಳಿಕೊಳ್ಳುತ್ತ ಬಂದಿದ್ದಾರೆ. ಆದರೆ ಹೋದ ವರ್ಷದಿಂದ ಈ ವರ್ಷದವರೆಗೆ ಹೇಳಿಕೊಳ್ಳುತ್ತ ಬಂದಿದ್ದೇವೆ, ಬರೆದುಕೊಳ್ಳುತ್ತ ಬಂದಿದ್ದೇವೆ. ಆದರೂ ಏನು ಇದರೊಳಗೆ ಹೆಚ್ಚು ಕಡಮೆಯಾಗಿದೆ ಎಂದರೆ ಏನೂ ಇಲ್ಲವೆಂದು ಹೇಳಬೇಕಾಗಿದೆ. ಏಕೆಂದರೆ ಒಂದೇ ಒಂದು ಸಣ್ಣ ಉದಾಹರಣೆ ಹೇಳಬೇಕೆಂದರೆ ನನ್ನ ಮತದಾರರ ಸ್ಥಾನವಾದ ಕುಷ್ಟಗಿಯಿಂದ ರೈಲ್ವೆ ಸ್ಟೇಷನ್ನಿಗೆ ಬಂದು ಬೆಂಗಳೂರಿಗೆ ಬರಬೇಕಾದರೆ ನೂರು ಮೈಲಿ ಬಂದರೆ ನಂತರ ರೈಲ್ವೆ ಸ್ಟೇಷನ್ ಸಿಕ್ಕುತ್ತದೆ. ಹತ್ತಿರದಲ್ಲಿ ನಮಗೆ ಯಾವುದೂ ರೈಲ್ವೆ ಸ್ಟೇಷನ್ ಇಲ್ಲ. ರಸ್ತೆಗಳ ಬಗ್ಗೆ ನಮ್ಮ ಭಾಗ ಎಷ್ಟು ಹಿಂದುಳಿದ ಪ್ರದೇಶವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮಗೆ ಕುಷ್ಟಗಿಯಿಂದ ರೈಲ್ವೆ ಸ್ಟೇಷನ್ ಹತ್ತಿರದಲ್ಲಿ ಎಂದರೆ ಕೊಪ್ಪಳ 36 ಮೈಲಿಯೊಳಗೆ ಇದೆ. ಅಲ್ಲಿಗೆ ರಸ್ತೆ ಸೌಕರ್ಯವಿಲ್ಲ. ಈ 36 ಮೈಲಿ ರಸ್ತೆಯೊಳಗೆ ಹಿಂದಿನ ಹೈದರಾಬಾದ್ ಸರ್ಕಾರದವರು ಈಗಾಗಲೇ 14-15 ಮೈಲಿ ಭಾಗ ರಸ್ತೆಯನ್ನು ಮಾಡಿದ್ದಾರೆ. ಮುಂದೆಯೂ ಕೂಡ 19 ಮೈಲಿ ರಸ್ತೆಗೆ ಸಾಕಾಗುವಷ್ಟು ಕಲ್ಲುಗಳಿವೆ, ಮಣ್ಣು ಬಿದ್ದಿದೆ, ಮತ್ತು ನಾಲ್ಕಾಣೆ ಭಾಗ ಕೆಲಸವನ್ನೂ ಮಾಡಿದ್ದಾರೆ. ಈಗ ಏನಾಗಿದೆ ಎಂದರೆ ರಸ್ತೆಗಳ ಮೇಲೆ ಸಾವಿರಾರು ರೂಪಾಯಿ ಬೆಲೆಯ ಕಲ್ಲು ಮತ್ತು ಮಣ್ಣು ಬಿದ್ದಿದೆ. ಇದನ್ನು ಏನು ಮಾಡಲಿಕ್ಕೆ ಹತ್ತಿದ್ದಾರೆ ಎಂದರೆ ಎಷ್ಟೋ ಕಲ್ಲುಗಳನ್ನು ತೆಗೆದುಕೊಂಡು ಹೋಗಲಿಕ್ಕೆ ಹತ್ಯಾರೆ, ಮಣ್ಣು ಸಹ ಕದ್ದು ಹೋಗುವ ಸಂಭವವಿದೆ. ನಾನು ಮಾನ್ಯ ಮಂತ್ರಿಗಳಿಗೆ ಈ ವಿಷಯದಲ್ಲಿ ಎಷ್ಟೋ ಸಲ ಪತ್ರ ಕೂಡ ಬರೆದಿದ್ದೇನೆ. ಈಗ ಮತ್ತೆ ಮಾನ್ಯ ಮಂತ್ರಿಗಳಿಗೆ ವಿನಂತಿಮಾಡಿಕೊಳ್ಳುತ್ತೇನೆ. ಏನೆಂದರೆ ಈ ವರ್ಷದೊಳಗೆ ಉಳಿದಿರುವ 19 ಮೈಲಿ ರಸ್ತೆ ಕೆಲಸವನ್ನು ತೆಗೆದುಕೊಂಡು ನಮ್ಮ ತಾಲ್ಲೂಕಿನಿಂದ ಒಂದು ರೈಲ್ವೆ ಸ್ಟೇಷನ್ನಿಗೆ ಸಮೀಪಮಾಡಿಕೊಟ್ಟರೆ ಅದರಿಂದ ಇಡೀ ನಮ್ಮ ಕುಷ್ಟಗಿ ತಾಲ್ಲೂಕಿನ ಬೆಳವಣಿಗೆ ಮತ್ತು ಅದರ ಹಿಂದಿನಿಂದ ಇಡೀ ದೇಶದ ಬೆಳವಣಿಗೆಯಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಕುಷ್ಟಗಿ, ಕಡಗುಪ್ಪೆ ಇಲಕಲ್ ರಸ್ತೆ ವಿಚಾರ. ಇಲಕಲ್ಲು ಜನಸಂಖ್ಯೆ 25 ಸಾವಿರವಿದೆ, ಕುಷ್ಟಗಿ ಜನಸಂಖ್ಯೆ ಏಳು, ಎಂಟು ಸಾವಿರವಿದೆ. ಇಲಕಲ್ಲಿಗೂ ನಮಗೂ ಬಹಳ ಸಂಬಂಧವಿದೆ. ಇದೇ ದೃಷ್ಟಿಯಿಂದ ಹೈದರಾಬಾದು ಸರ್ಕಾರದವರು ಏಳು ಲಕ್ಷ ರೂಪಾಯಿಗಳನ್ನು ಈ ರಸ್ತೆಗೆ ಎಸ್ಟಿಮೇಟ್‌ಮಾಡಿ ಕೆಲಸ ಷುರು ಮಾಡಿಬಿಟ್ಟಿದ್ದರು, ಗುತ್ತೇದಾರರು ಕೆಲಸ ಷುರುಮಾಡಿ ಅಲ್ಲಿಂದ ಇಲ್ಲಿಯವರೆಗೆ ಪೂಲುಗಳು ಕೆಲವು ಭಾಗ ತಯಾರಾಗಿದ್ದು. ಅಲ್ಲಿಯ ಅಧಿಕಾರಿಗಳಿಗೂ ಇವರಿಗೂ ತೊಂದರೆ ಬಂದು, ನ್ಯಾಯ ಬಂದು ಒಂದು ವರ್ಷದಿಂದ ರೋಡ್ ಕೆಲಸ ಹಾಗೆಯೇ ಬಿದ್ದು ಕೊಂಡಿದೆ. ರಸ್ತೆ ಕೆಲಸಮಾಡಲು ಬಂದಂಥ ಕೂಲಿಕಾರರೆಲ್ಲ ವಾಪಸು ಹೋಗಿಬಿಟ್ಟರು. ಎಷ್ಟೋ ಸಲ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಾಗ್ಗೆ ಅದನ್ನೂ ತೆಗೆದುಕೊಳ್ಳುತ್ತೇವೆ, ವಿಚಾರ ಮಾಡುತ್ತೇವೆ ಎಂದು ಹೇಳಿದ್ದರು. ಈವರೆಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಿರಬಹುದು. ಆದುದರಿಂದ ದಯವಿಟ್ಟು ಈ ವರ್ಷ ಈ ರಸ್ತೆ ಕೆಲಸವನ್ನು ತೆಗೆದುಕೊಂಡು ಪೂರ್ತಿಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀ ಇ. ಪುಂಡಲೀಕಪ್ಪ)

ರಾಯಚೂರು, ವಿಜಾಪುರ ಮತ್ತು ಧಾರವಾಡ ಈ ಮೂರು ಜಿಲ್ಲೆಗಳಿಗೂ ಬಹಳ ಸಂಬಂಧವಿದೆ. ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳವರು ತಮ್ಮ ತಮ್ಮ ಭಾಗದವರಿಗೆ ರಸ್ತೆಗಳನ್ನು ಮಾಡಿದ್ದಾರೆ. ನಮ್ಮ ಭಾಗದಲ್ಲಿ ಎಂದರೆ ನಮ್ಮ ತಾಲ್ಲೂಕಿನಲ್ಲಿ ಐದಾರು ಮೈಲಿಯಷ್ಟು ರಸ್ತೆ ಉಳಿದುಕೊಂಡಿದೆ. ಐದಾರು ಮೈಲಿ ಉದ್ದದ ಮೂರು ನಾಲ್ಕು ರಸ್ತೆಗಳಿವೆ. ಅವುಗಳನ್ನು ಪೂರ್ತಿಮಾಡಿದರೆ ಬಿಜಾಪುರ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಿಗೆ ಹೆಚ್ಚಿನ ಸಂಬಂಧ ಬೆಳೆದು ವ್ಯವಹಾರದ ದೃಷ್ಟಿಯಿಂದ, ಇತರ ಯಾವುದೇ ದೃಷ್ಟಿಯಿಂದ ಮುಂದೆ ಈ ಮೂರು ಡಿಸ್ಟ್ರಿಕ್ಟುಗಳು ಒಂದಾಗಿ ಪ್ರಗತಿಯಾಗುವುದಕ್ಕೆ ಅನುಕೂಲವಾಗುತ್ತದೆ. ಈ ಮೂರು ನಾಲ್ಕು ಸಣ್ಣ ಸಣ್ಣ ರಸ್ತೆಗಳ ಉದ್ದ ಒಟ್ಟು 20-25 ಮೈಲು ಇರಬಹುದು ರಸ್ತೆಗಳ ಹೆಸರನ್ನು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಅವರು ನೋಟ್ ಮಾಡಿಕೊಂಡು ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ಕೆಲಸವಾಡಬೇಕೆಂದು ಹೇಳುತ್ತೇನೆ.

5 P.M.

ಆಮೇಲೆ, ಇಲ್ಕಾಳಿನಿಂದ ಇಲ್ಲಕಲ್ಲುವಿಗೆ ಹೋಗುವ ರಸ್ತೆ ನಮ್ಮ ಹದ್ದಿನಲ್ಲಿ ಐದಾರು ಮೈಲಿ ದೂರ ಆಗುವುದಿದೆ. ದೊಡ್ಡ ರಸ್ತೆಯಿಂದಲೂ ಉಪಯೋಗವಿಲ್ಲದ ಹಾಗಿದೆ. ಹಾಗೆಯೇ ಗೂಡೂರು ನೂಡಿ, ಇಲ್ಲಕಲ್ ಹನುಮನಹಳ್ಳಿ ರಸ್ತೆಗಳು ಇವೆಲ್ಲಾ 25-30 ಮೈಲಿಯಷ್ಟು ಉದ್ದದ ರಸ್ತೆಗಳು. ರಿಪೇರಿಯಾಗಬೇಕಾಗಿವೆ. ಆದ್ದರಿಂದ ಹೈದರಾಬಾದ್ ಕರ್ಣಾಟಕದ ಈ ರಸ್ತೆಗಳ ಸಲುವಾಗಿ ದುಡ್ಡು ಕೊಟ್ಟು ಹೆಚ್ಚಿನ ಸೌಕರ್ಯ ಒದಗಿಸಿ ಕೊಡಬೇಕೆಂದು ಹೇಳುತ್ತೇನೆ. ಅರ್ಥಿಕ ಮಂತ್ರಿಗಳು ನಮ್ಮ ಕಡೆ ಬಂದಾಗ ಅವರೂ ಕೂಡ ನಮ್ಮ ಪರಿಸ್ಥಿತಿಯನ್ನು ನೋಡಿ ಈ ರಸ್ತೆಯನ್ನು ಮಾಡಿಸುವುದು ಅವಶ್ಯಕವೆಂದು ಹೇಳಿದ್ದಾರೆ. ನಮ್ಮ ತಾಳಿಕೋಟೆ ಮಿತ್ರರು ಹೇಳಿದಹಾಗೆ ನಮಗೆ ಬಹಳ ಕಷ್ಟವಾಗಿದೆ. ದಯಮಾಡಿ ತಾವು ಈ ರಸ್ತೆಗಳನ್ನು ತೆಗೆದುಕೊಂಡು ಈವರ್ಷದ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನಮ್ಮ ತಾಲ್ಲೂಕಿನಲ್ಲಿ ನಿರಾವರಿಗೆ ಒಂದೆರಡು ಕೆರೆಗಳು ಮಾತ್ರ ಇವೆ. ಹಿಂದಿನ ಕಾಲದಲ್ಲಿ ಅವು 300-400 ಎಕರೆ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದುವು. ಈಗ ಈ ಕೆರೆಗಳು ಮುಚ್ಚಿಹೋಗಿ ನೀರಾವರಿ ವ್ಯವಸ್ಥೆ ಮಾಡುವುದು ಬಹಳ ಜರೂರಾಗಿದೆಯೆಂದು ನಾನು ಹೇಳ ಬಯಸುತ್ತೇನೆ.

ಕಡೆಯದಾಗಿ ಒಂದು ಮಾತು ಹೇಳಿಮುಗಿಸುತ್ತೇನೆ ನಮ್ಮ ಮಂತ್ರಿಗಳು ಯಾವುದೇ ಕೆಲಸವನ್ನು ಬಡ್ಜೆಟ್ಟಿನಲ್ಲಿ ನಮೂದು ಮಾಡಿದ್ದಾರೋ ಅದನ್ನು ಸದಾ ತಮ್ಮ ಕಣ್ಣ ಮುಂದಿಟ್ಟುಕೊಂಡು ಒಂದು ವರ್ಷದೊಳಗಾಗಿ ಎಷ್ಟೆಷ್ಟಾಗಿದೆಯೆಂದು ಆಗಾಗ್ಗೆ ನೋಡುತ್ತಾ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೂ ಇದೇ ವರ್ಷ ಬಡ್ಜೆಟ್ಟಿನಲ್ಲಿ ಹಾಕಿದ ಕುಷ್ಟಗಿ ಹನುಮನಸಾಗರ ಗಂಜೇಂದ್ರಗಡ ರಸ್ತೆಗಳನ್ನು ತೀವ್ರ ಕಾರ್ಯ ಪ್ರಾರಂಭಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ನಮ್ಮ ಮಿತ್ರರು ಹೇಳಿದಹಾಗೆ ಈ ಬಡ್ಜೆಟ್ಟಿನಲ್ಲಿ ಆಗಲಿಲ್ಲ. ಮುಂದಿನ ಬಡ್ಜೆಟ್ಟಿನಲ್ಲಿ ಸೇರಿಸೋಣವೆಂದು ಮುಂದೆ ಹಾಕುವುದು ಸರಿಯಲ್ಲ. ಆದ್ದರಿಂದ ನಾನು ಮಂತ್ರಿಗಳಿಗೆ ಹೇಳುವುದಿಷ್ಟೆ. ರಸ್ತೆಯ ಸೌಕರ್ಯವನ್ನು ಕಲ್ಪಿಸುವುದು ಬಹಳ ಮಹತ್ವದ ಕರ್ತವ್ಯ. ತಾಲ್ಲೂಕಿನ ಅಭಿವೃದ್ಧಿಯ ದೃಷ್ಟಿಯಿಂದ, ಜಿಲ್ಲಾ ಅಭಿವೃದ್ಧಿಯ ದೃಷ್ಟಿಯಿಂದ ಈ ಕೆಲಸಗಳು ಅಗತ್ಯವಾದುವು. ಆದ್ದರಿಂದ ಹೈದರಾಬಾದ್ ಕರ್ಣಾಟಕಕ್ಕೆ ಈ ವಿಷಯದಲ್ಲಿ ಹೆಚ್ಚಿನ ಸ್ಥಾನ ಕೊಟ್ಟು ಕೆಲಸ ಮಾಡಿಸಿಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. MALLIKARJUNASWAMY (Malavalli).—Sir, I rise to support this Demand. At the very outset, I would like to say that the importance of the Public Works Department in an underdeveloped country like ours which has embarked upon loftier and laudable plans like the First Five-Year Plan and the Second Five-Year Plan, can hardly be over-exaggerated. In this connection I would like to say that our First Five Year Plan was not only an agricultural fundamentalism but many developmental projects were undertaken and lakhs and crores of rupees were entrusted to the department, to which they are to be entrusted; even now, the Second Five-Year Plan is also well on the way. But, as we know, this planning is much more than necessary and much more difficult to implement in backward countries than in advanced countries. I, therefore, say, this requires a strong, efficient and incorrupt administration. But, to-day, as we know, there is lack of efficient and incorrupt administration. If at all we want to realise the ideals and the objectives of our ambitious plans, the Public Works Department should play its role in a very befitting manner. In this connection I would like to say that we are lacking thise fficient and uncorrupt administration in our country, especially it is more so in our State. As we know, corruption, especially in the Public Works Department, has become the order of the day. I am pained to say this. If at all we want to realise the objectives of the welfare state, to build up a socialistic pattern of society, we must work with a socialist view. I am reminded about the saying of a Swedish King to one of his Ministers: 'If you are not a socialist, within 25 years, you have no heart; if you want to be a socialist even after 25 years, you have no head' Therefore, I say, we must put our heart to this problem. The success of

our plans invariably and ultimately depends upon the Public Works Department. As we know, the role of a Sub-Overseer is something like a king pin in the department. Right from the Sub-Overseer to the Executive Engineer, there is rampant corruption. We know that roads, buildings and bridges were built up in the olden days used to withstand the canon shot. But, now if there is small down-pour of rain, they give way; they cannot withstand even slight down-pour of rain. Even the metal roads are also of the same type. They will be all right in the morning, in the day time; but if there is rain in the night, the next day we see pits in the centre of the road. We pay lakhs of rupees for patch works. It is a collosal waste of public funds and nothing else if works are done in this way.

As we are experiencing food scarcity, minor irrigation works should be implemented and carried on still more vigourously and with more magnitude. In this connection I would like to say that to step up food production and tide over the food scarcity, tanks also should be restored.

I would like to say a word with regard to tender rules. Sir, as you know, the Scheduled Castes people are not allowed to run hotels; even if they do so they will not be encouraged by the general public. I, therefore, say that these Scheduled Caste people should be encouraged by way of giving small contracts and things like that. Then only we can think of bettering their economic lot. I request the Government at least to do this.

Our needs are many and unlimited and our resources are strictly limitted; I would like to say that we must so arrange them as to meet our urgent needs and apply our limited resources to realise the maximum benefit out of minimum cost, when we are not having a sound economic system. We must work it on the proper line.

Coming to the permanent planting programme contemplated by Sir M. Visvesvaraya, the nation builder engineer statesman, I would like to say that it should be implemented with block system. My friend Sri K. Puttaswamy has spoken on that sufficiently and so I do not want to dwell on that point at length.

I would like to say that in political science there is a phrase known as 'graft system'. We legislators representing various constituencies want to see that something is done to our constituencies, whether productive or unproductive and whether it is reasonable or unreasonable. Productive works should be taken up first. At the same time as a protective measure here and there some other works also should be taken up. In this way we must build up some permanent assets. Here our idea should not be of the type what is it after all our ancestry has done to us to do so much to the posterity?'.

Coming to the work of the Ramaswamy Channel, a comprehensive survey in the area between Mandya District and Mysore District should be taken up, improvements should be effected and water should be supplied even to the tail end.

I am very much pained to say that there is corruption in the Department. I referred to it only before. Once again I would like to lay great emphasis on the need to put down corruption. Be a chaprasi or Chief Secretary, if he is found corrupt he should be mercilessly weeded out. In this connection I recollect the bold step taken by Sir C. P. Ramaswamy Iyer ex-Dewan of Travancore. He conducted a survey and scrutinised the household assets of all employees and in this way he was able to trace the criminals who were guilty of corruption and he punished them all. Why does not the present Government also do the same thing? It should conduct a survey about the assets of the employees before their appointment and their present assets. In this way we can root out corruption This is the work of the Efficiency Audit Department.

Lastly, I would like to say that it is up to every educated man and woman, be he or she matriculate or under graduate, or double-graduate or triple-graduate, miner or Minister, proletarian parliamentarian, Grihastha or Sanyasi, that they should consider it as their second duty see that corruption is put

(SRI M. MALLIKARJUNASWAMY)

down at all costs. If we mind it, it is possible. We must re-educate the people for this purpose and the people must take up this problem very seriously. People may say that this is too deep a problem which cannot be solved. I do not agree with that view. If we sincerely mean it, we can see that corruption is suppressed.

With these remarks I support the demands before us. Thank you.

*ಶ್ರೀ ಆಲೂರು ಹನುಮಂತಪ್ಪ (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸ್ನೇಹಿತರುಗಳೆಲ್ಲಾ ಮರಾಮತ್ ಇಲಾಖೆಯ ಅನೇಕ ಕೆಲಸ ಕಾರ್ಯಗಳ ವಿಚಾರವಾಗಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ನಾನು ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ.

ಹಿಂದೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು, ಈ ಇಲಾಖೆಯ ಕೆಲಸ ಕಾರ್ಯಗಳು ಒಂದು ರೀತಿಯಲ್ಲಿ ನಡೆಯುತ್ತಿದ್ದವು. ಅರ್ಜಿಗಳನ್ನು ಕೊಡುವ ವಿಧಾನವಿತ್ತು. ಅವುಗಳು 3-4 ವರ್ಷಗಳವರೆಗೂ ಸಹ ತೀರ್ಮಾನವಾಗದೆ ಹಾಗೆ ಇರುತ್ತಿದ್ದವು. ಈಗ ಸುಮಾರು 8-10 ವರ್ಷಗಳಿಂದ, ನಮ್ಮ ಹಳ್ಳಿಗಾಡಿನ ಕೆಲಸಕಾರ್ಯಗಳ ದೃಷ್ಟಿಯಿಂದ, ತ್ವರಿತವಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದಾರೆ.

ಕೊಂಡಿದ್ದೇನೆ. ಅವುಗಳನ್ನು ಕಾರ್ಯಗತಮಾಡಲು ಎಷ್ಟುಮಟ್ಟಿಗೆ ಸಾಧ್ಯ, ಯಾವ ಯಾವ ಅಂತಸ್ತಿನಲ್ಲಿವೆ, ನಿಧಾನವಾಗಿದ್ದರೆ ಯಾವ ಕಾರಣದಿಂದ ಎಂಬ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡುತ್ತೇನೆಂದು ಒಂದೇ ಮಾತಿನಲ್ಲಿ ಭರವಸೆ ಕೊಡುತ್ತೇನೆ.

ಅನೇಕ ಸದಸ್ಯರು ಹೇಳಿದಹಾಗೆ ಈ ಇಲಾಖೆಯ ಕಾರ್ಯಕಲಾಪಗಳು ದೇಶದ ಹಿತಕ್ಕೆ ಬಹಳ ಅಗತ್ಯ. ಶ್ರೀ ದೇಶಾಯಿಯವರು ಹೇಳಿದಹಾಗೆ ಸಂಸ್ಥಾನದ ಆಯವ್ಯಯದ ಅಂದಾಜಿನಲ್ಲಿ ಸ್ವಲ್ಪ ಹೆಚ್ಚು ಕಡಮೆ ಅರ್ಧದಷ್ಟು ಹಣ ಈ ಇಲಾಖೆಯ ಕೆಲಸಗಳಿಗೇ ಬೇಕಾಗಿದೆ. ಇದು ಸುಮಾರು 23 ಕೋಟಿ ರೂಪಾಯಿ ಖರ್ಚುಮಾಡುವ ಇಲಾಖೆ. ಇದರಲ್ಲಿ ಸ್ವಲ್ಪ ಹೆಚ್ಚು ಕಡಮೆ ಅರ್ಧಭಾಗದಷ್ಟನ್ನು ಬಂಡವಾಳ ರೂಪವಾಗಿ ಖರ್ಚುಮಾಡಬೇಕಾಗುತ್ತದೆ. ಇನ್ನರ್ಧವನ್ನು ಸಂಸ್ಥಾನದ ಆದಾಯದಿಂದ ಬರತಕ್ಕ ಹಣದಿಂದ ಖರ್ಚುಮಾಡಬೇಕಾಗಿದೆ. ಇಷ್ಟು ಭಾರಿ ಹಣವನ್ನು ಖರ್ಚುಮಾಡುವ ಇಲಾಖೆಯನ್ನು ಕುರಿತು ದೇಶದ ಜವಾಬ್ದಾರಿ ಹೊತ್ತಿರುವ ಈ ಸಭೆಯ ಸದಸ್ಯರು ಕಳವಳ, ಆಸಕ್ತಿ ಮತ್ತು ಒತ್ತಾಯ ಪೂರ್ವಕವಾಗಿ ಅಭಿಪ್ರಾಯಗಳನ್ನು ಸೂಚನೆ ಮಾಡುವುದರಲ್ಲಿ ಆಶ್ಚರ್ಯವಿಲ್ಲ. ಇದು ಅಗತ್ಯ. ಸಾಮಾನ್ಯವಾಗಿ ಸ್ಥಳೀಯ ಕುಂದುಕೊರತೆಗಳನ್ನು, ಆಯಾ ಸ್ಥಳದಲ್ಲಿ ಆಗಬೇಕಾದ ಕಾರ್ಯಗಳು, ಎಂದರೆ ಕೆರೆ ರಿಪೇರಿ, ಕಟ್ಟೆ ಕಟ್ಟುವುದು, ರಸ್ತೆ ಹಾಕುವುದು, ರಸ್ತೆ ರಿಪೇರಿ ಮಾಡುವುದು, ರಸ್ತೆಗೆ ಟಾರು ಹಾಕುವುದು, ಕಾಸ್‌ವೆ, ಸೇತುವೆ ಹಾಕಬೇಕಾದುದು ಇಂಥ ವಿಷಯಗಳನ್ನೆಲ್ಲಾ ಕುರಿತು ವಿವರವಾಗಿ ಒಬ್ಬೊಬ್ಬರು ಸದಸ್ಯರೂ ಮಾಡಿರುವ ಸಲಹೆಗಳ ವಿಷಯವಾಗಿ ನಾನು ಚರ್ಚೆ ಮಾಡುವುದಿಲ್ಲ. ಏಕೆಂದರೆ, ಹತ್ತಾರು ವಾಕ್ಯಗಳಲ್ಲಿ ಸದಸ್ಯರು ಹೇಳಿರುವುದನ್ನು ಒಂದೊಂದು ವಾಕ್ಯದಲ್ಲಿ ಗುರುತು ಹಾಕಿಕೊಂಡಿದ್ದೇನೆ, ಅದೇ ಮೂವತ್ತು ಪುಟ ಆಗಿದೆ. ಇದಕ್ಕೆಲ್ಲ ಉತ್ತರ ಹೇಳಬೇಕೆಂದರೆ ಕೊನೆಯ ಪಕ್ಷ ಎರಡು ಗಂಟೆಗಳ ಕಾಲವಾದರೂ ಬೇಕಾಗುತ್ತದೆ. ಆದುದರಿಂದ ಈ ಗೋಜಿಗೆ ಹೋಗದೆ ಸಾಮಾನ್ಯ ವಿಷಯಗಳನ್ನು ಮಾತ್ರ ಕುರಿತು ಪ್ರಸ್ತಾವಿಸುತ್ತೇನೆ.

ಮೊದಲನೆಯದಾಗಿ, ಈ ಇಲಾಖೆಯ ಅಧಿಕಾರಿಗಳಲ್ಲಿ ಅತೃಪ್ತಿ ಅಸಮಾಧಾನವಿದೆ ; ಇದಕ್ಕೆ ಕಾರಣ ಸೀನಿಯಾರಿಟಿ ಪಟ್ಟಿ ಸಿದ್ಧಮಾಡಿಲ್ಲ ಮತ್ತು ಹಿಂದೆ ಹಂಗಾಮಿಯಾಗಿ ನೇಮಿಸಿಕೊಂಡ ಗ್ರ್ಯಾಜುಯೇಟ್ ಸೂಪರ್‌ವೈಜರುಗಳನ್ನು ಅಸಿಸ್ಟೆಂಟ್ ಇಂಜಿನಿಯರುಗಳಾಗಿ ಖಾಯಂ ಮಾಡದೇಯಿರುವುದು, ಇದರಿಂದ ಅನೇಕ ವರ್ಷಗಳಿಂದ ಕೆಲಸಗಳು ನಿಧಾನವಾಗಿವೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಇದು ಸರ್ಕಾರದ ಗಮನದಲ್ಲಿದೆ. ಈಗ 63 ಜನ ಗ್ರ್ಯಾಜುಯೇಟುಗಳು ಅಸಿಸ್ಟೆಂಟ್ ಇಂಜಿನಿಯರುಗಳ ಸ್ಥಾನದಲ್ಲಿದ್ದುಕೊಂಡು ಆ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದಾರೆ; ಇನ್ನೂರು ಸ್ಥಾನಗಳು ಖಾಲಿ ಇರುವಾಗ 63 ಜನರನ್ನು ಖಾಯಂ ಆಗಿ ನೇಮಿಸಿಕೊಳ್ಳುವುದಕ್ಕೆ ಏನು ಕಷ್ಟ ಎಂದು ಕೇಳಿದ್ದಾರೆ. ಸಾಮಾನ್ಯವಾಗಿ ಇದನ್ನು ನೋಡಿದರೆ ಇದರಲ್ಲಿ ಏನೂ ಕಷ್ಟವಿಲ್ಲವೆಂದು ಕಾಣುತ್ತದೆ. ಆದರೆ ಪ್ರಾಂತ ಪುನರ್ವಿಂಗಡಣೆಯಾದ ಮೇಲೆ ನಮ್ಮ ರಾಜ್ಯಕ್ಕೆ ಬೇರೆ ಬೇರೆ ರಾಜ್ಯಗಳಿಂದ ಬಂದ ನೌಕರರ ಸ್ಥಾನಮಾನಗಳನ್ನು ಯಾವ ರೀತಿ ಗೊತ್ತು ಮಾಡಬೇಕೆಂದು ಇಂಡಿಯಾ ಸರ್ಕಾರದವರು ಸ್ಥೂಲವಾಗಿ ಕೆಲವು ನಿಯಮಗಳನ್ನು ರಚಿಸಿದ್ದಾರೆ. ಯಾವ ಯಾವ ಪ್ರಾಂತದ ಅಧಿಕಾರಿಗಳು ಬೇರೆ ಪ್ರಾಂತದ ಯಾವ ಯಾವ ಅಧಿಕಾರಿಗಳಿಗೆ ಸಮಾನ ಎಂಬಿವೇ ವಿಷಯಗಳನ್ನೊಳಗೊಂಡ ಕೆಲವು ನಿಯಮಗಳನ್ನು ರಚಿಸಿದರು. ಇಂಟಿಗ್ರೇಷನ್ ಆಗುವುದಕ್ಕೆ ಮುಂಚೆ ಇಂಟರ್‌ಸ್ಟೇಟ್ ಮಿನಿಸ್ಟರ್ಸ್ ಕಮಿಟಿಯೊಂದು ಮಾಡಿ ಹೈದರಾಬಾದು, ಕೊಡಗು, ಬೊಂಬಾಯಿ, ಮೈಸೂರು ಈ ಸಂಸ್ಥಾನಗಳ ಪ್ರತಿನಿಧಿಗಳು ಸೇರಿ ಇಂಡಿಯಾ ಸರ್ಕಾರದವರು ಹಾಕಿದ ತತ್ವಗಳಿಗನುಸಾರವಾಗಿ ಹಂಗಾಮಿಯಾಗಿ ಒಂದು ಪಟ್ಟಿ ತಯಾರಿಸಿದರು. ಇದು ಈ ಹಿಂದೆಯೇ ಇದೇ ಸಭೆಯಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಆ ಪಟ್ಟಿಯನ್ನು ಆಯಾ ಇಲಾಖಾ ಸೆಕ್ರೆಟೇರಿಯಟ್‌ನಲ್ಲಿ ವಿಮರ್ಶೆ ಮಾಡಿದ್ದಾರೆ. ಇದೆಲ್ಲಾ ಆದಮೇಲೆ ಸ್ಥಾನಮಾನಗಳ ವಿಚಾರದಲ್ಲಿ ಅಧಿಕಾರಿಗಳ ತಕರಾರನ್ನು ಕೇಳಿದ್ದಾರೆ. ತಕರಾರು ವಿಮರ್ಶೆಮಾಡುವಾಗ ಮೈಸೂರಿನವರೇ ಇದ್ದರೆ ಅನ್ಯಾಯ ಮಾಡಿದರೆಂದು ಮಾತು ಬರಬಹುದು ಎಂದು ಇಂಡಿಯಾ ಸರ್ಕಾರದ ಅಧಿಕಾರಿಗಳನ್ನು ಕರೆಸಿ ವಿಮರ್ಶೆ ಮಾಡಿಸಲಾಯಿತು. ಆ ಅಧಿಕಾರಿಗಳು ವರದಿ ಒಪ್ಪಿಸುವುದಕ್ಕೆ ಮುಂಚೆ ತಕರಾರಿರುವ ಜನರನ್ನು ಸಹ ಭೇಟಿಮಾಡಿ ಅವರ ಅಭಿಪ್ರಾಯವನ್ನು ಕೇಳಿ ತಿಳಿದುಕೊಂಡಿದ್ದಾರೆ. ವರದಿ ಬರುವುದಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದು ಸಮಾಚಾರ ತಿಳಿದುಕೊಳ್ಳಬೇಕಾಗಿದೆ. 63 ಜನ ಸೂಪರ್‌ವೈಜರುಗಳು ಅಸಿಸ್ಟೆಂಟ್ ಇಂಜಿನಿಯರುಗಳಾಗಿದ್ದರು. ಅವರನ್ನು ಆ ಜಾಗದಲ್ಲೇ ಮುಂದುವರೆಸಿ ಆ ಸ್ಥಾನದ ಸೌಲಭ್ಯಗಳನ್ನೊದಗಿಸುವಂತೆ 1950ರಲ್ಲಿ ಸರ್ಕಾರಿ ಹುಕುಂ ಆಗಿತ್ತು. ಆದರ ಪ್ರಕಾರ ಅವರುಗಳಿಗೆ ತಕ್ಕ ಸ್ಥಾನಮಾನ ಕೊಟ್ಟಿದ್ದರೆ ಇವತ್ತು ಈಕ್ವೇಷನ್ ಆಫ್ ಪೋಸ್ಟ್ಸ್, ಸೀನಿಯಾರಿಟಿ, ನಿಗದಿಯಾಗುತ್ತಿರುವಾಗ ಅವರಿಗೆ ಉತ್ತಮ ಸ್ಥಾನ ದೊರೆಯುತ್ತಿತ್ತು. ಹಾಗೆ ಮಾಡದಿರುವುದರಿಂದ ಅವರಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಮುಖ್ಯವಾಗಿರುವ ಪ್ರಶ್ನೆ 'ರೆ', ಕೊಟ್ಟಿದ್ದರೆ ತೊಂದರೆಯಾಗುತಿರಲಿಲ್ಲ ಎಂಬುದು. ಕೊಟ್ಟಿದ್ದರೆ ತೊಂದರೆಯಾಗುತ್ತಿರಲಿಲ್ಲವೆಂದು ಹೇಳುತ್ತಾರೆ; ಕೊಡಲಿಲ್ಲ. "ಈ ದಿವಸ ಅದು ನಿಮ್ಮ ತಪ್ಪು, ನಾವೇನು ಮಾಡಬೇಕು ?" ಎಂಬ ವಾದವಿದೆ. ಅನ್ಯಾಯವಾಗಿರುವುದನ್ನು ಗಮನಕ್ಕೆ ತಂದಿದೆ. ವಿಷಯ ವಿಮರ್ಶೆಯಲ್ಲಿದೆ. ಹಿಂದೆ ಎಷ್ಟೋ ತಪ್ಪು ಮಾಡಿರುವುದನ್ನು ಈ ದಿವಸ ಸರಿ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಐದು ಭಾಗಗಳ ಅಧಿಕಾರಿಗಳ ಲಿಸ್ಟು ಮಾಡಿದ್ದಾರೆ. ಅದರಲ್ಲಿ ಅರ್ಧಭಾಗ ಮೈಸೂರಿನ ಅಧಿಕಾರಿಗಳೇ ಇದ್ದಾರೆ. ಅವರ ಪರವಾಗಿ ಒಬ್ಬ ಪ್ರತಿನಿಧಿಯಾದರೂ ಇಲ್ಲದಿದ್ದರೆ ಅವರಿಗೆ ನ್ಯಾಯ ಹೇಗೆ ದೊರೆಯುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಮೆಜಾರಿಟಿ, ಮೈನಾರಿಟಿ ಪ್ರಶ್ನೆಯಿಲ್ಲ. ಇಂಡಿಯಾ ಸರ್ಕಾರದವರು ಸ್ಥೂಲವಾಗಿ ಕೆಲವು ನಿಯಮಗಳನ್ನು ಹಾಕಿದ್ದಾರೆ. ಅದರಂತೆ ಮಾಡುವಾಗ ಲೋಪದೋಷ ಸರಿಪಡಿಸಿ ಮಾಡುವರೆಂಬ ನಿರೀಕ್ಷೆ ನಮಗಿದೆ. ನಮ್ಮ ಮುಂದಿರುವ ಅಂಕಿಅಂಶಗಳ ಪ್ರಕಾರ ವಿಮರ್ಶೆಮಾಡಿ ನಿರ್ಧಾರ ಮಾಡಬೇಕಾಗಿದೆ. ಇನ್ನೂ ತೀರ್ಮಾನವಾಗಿಲ್ಲದಿರುವಾಗ ಅನ್ಯಾಯವಾಗುತ್ತದೆಂದು ವಾದ ಮಾಡುವುದು ಸೂಕ್ತವಲ್ಲ. 63 ಜನ ಗ್ರ್ಯಾಜ್ಯುಯೇಟ್ಸ್ ಏನಿದ್ದಾರೆ ಅವರಿಗೆ ನ್ಯಾಯ ಒದಗಿಸಬೇಕೆಂಬ ದೃಷ್ಟಿ

ಯಿಂದಲೇ ಬೇಗ ತೀರ್ಮಾನವಾಗಿಲ್ಲ, ಪರ್ಯಾಲೋಚನೆಯಲ್ಲಿದೆ, ಇರುವ ಅಧಿಕಾರ ಉಪಯೋಗಿಸಿ ಏನಾದರೂ ತೀರ್ಮಾನ ಮಾಡಬೇಕಾಗುತ್ತದೆಯೇ ಎಂಬ ಅಂಶ ಸರ್ಕಾರ ಪರ್ಯಾಲೋಚನೆ ಮಾಡಬಹುದು.

ಶ್ರೀ ಕೆ. ಎಲ್. ನರಸಿಂಹಯ್ಯ.—1950ರಲ್ಲಿ 40 ಜನರನ್ನು ಖಾಯಂಮಾಡಿದರು. ಆಗಲೇ ಬಾಕಿಯವರನ್ನೂ ಖಾಯಂ ಮಾಡಿದ್ದರೆ ತೊಂದರೆಯೇ ಇರುತ್ತಿರಲಿಲ್ಲ. ಆಗ ಮಾಡದೆ ನಿಲ್ಲಿಸಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—1950ನೆಯ ಇಸವಿಯ ವಿಚಾರವನ್ನು ಈಗ ವಿಮರ್ಶೆಮಾಡಿದರೆ ಸಾರ್ಥಕವಾಗುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ವ್ಯವಸಾಯದ ಇಲಾಖೆಯಲ್ಲಿ ಇದೇ ರೀತಿ ತೊಂದರೆಯಾಗಿದ್ದವರಿಗೆ ಅನುಕೂಲ ಮಾಡಿದ್ದೀರಿ. ಅದೇ ರೀತಿಯಲ್ಲಿ ಈ ಸಂದರ್ಭದಲ್ಲೂ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.–ಇದು ಆ ರೀತಿಯಲ್ಲ. ಇದು ತೊಡಕಿನ ಪ್ರಶ್ನೆಯಾಗಿದೆ, ಸರ್ಕಾರದ ಪರ್ಯಾಲೋಚನೆಯಲ್ಲಿದೆ. ತಮಗೆ ಅನ್ಯಾಯವಾಗಿದೆಯೆಂದು ಅಧಿಕಾರಿಗಳು ಗಮನಕ್ಕೆ ತಂದರೆ, ಆ ಸಂಬಂಧವಾದ ಕಾಗದ ಕೈಗೆ ಬಂದರೆ, ತಕ್ಕ ಕ್ರಮ ಕೈಕೊಳ್ಳಲಾಗುತ್ತದೆ. ಯಾರಾರಿಗೋ ಅನ್ಯಾಯವಾಗಿದೆ. ಇಂಟಿಗ್ರೇಷನ್ ಆದಮೇಲೆ ಪ್ರಮೋಷನ್, ಸ್ಥಾನಮಾನಗಳು ಎಂಬ ಧೋರಣೆ ಬಂದಿದೆ. ಶ್ರೀ ನರಸಿಂಹಯ್ಯನವರು ಅಂತಹ ಮನೋಭಾವನೆಗೆ ತಕ್ಕಂತೆ ತಿಳಿವಳಿಕೆ ಹೇಳಬೇಕು ಎಂದು ಹೇಳಿದರು. ಸರ್ಕಾರದ ಸಂಗಡ ಆ ರೀತಿ ಚಾಲೆಂಜ್‌ಮಾಡುವ ಮನೋಭಾವನೆ ಬಂದಿದೆ. ಅದು ಇನ್ನೂ ನಿರ್ಧಾರವಾಗಿಲ್ಲ. ಆ ರೀತಿ ನಿರ್ಧಾರವಾಗಿಲ್ಲವೆಂದು ಅವರ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ. ನೀವು ಏನೇನು ಆರ್ಗ್ಯುಮೆಂಟನ್ನು ಹೇಳಿದ್ದೀರೋ ಅವನ್ನು ಅವರು ಬಂದು ಹೇಳಿದ್ದಾರೆ. ಅವುಗಳನ್ನು ಸರ್ಕಾರದವರು ಸಹಾನುಭೂತಿಯಿಂದ ವಿಮರ್ಶೆ ಮಾಡುತ್ತಾರೆ. ಹೀಗಿರುವಾಗ ಅಧಿಕಾರಿಗಳು ಆ ರೀತಿ ಸರ್ಕಾರದವರ ಮೇಲೆ ಜಿಗುಪ್ಸೆಮಾಡಿಕೊಂಡಿದ್ದಾರೆಂಬುದನ್ನು ನಾನು ಮಾತ್ರ ನಂಬುವುದಿಲ್ಲ. ಅವರು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆಂದು ಯಾರು ಹೇಳಿದರೂ ನಾನು ನಂಬುವವನಲ್ಲ. ಅನೇಕ ಸದಸ್ಯರು ಇಲಾಖೆಗಳಲ್ಲಿ ಕೆಲಸಕಾರ್ಯಗಳು ತುರ್ತಾಗಿ ನಡೆಯುವುದಕ್ಕೆ, ಚಟುವಟಿಕೆಯಿಂದ ನಡೆಯುವುದಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಅಧಿಕಾರಿಗಳಿಗೆ ಹೆಚ್ಚು ಕೆಲಸ, ಕೆಲವು ಅಧಿಕಾರಿಗಳಿಗೆ ಕಡಮೆ ಕೆಲಸ ಇರುವುದರಿಂದ ಅಧಿಕಾರಿಗಳಲ್ಲಿ ಸಮಾನತೆಯನ್ನುಂಟುಮಾಡುವ ವಿಷಯದಲ್ಲಿ ಅನೇಕ ಸಲಹೆಗಳನ್ನು ನೀಡಿದ್ದಾರೆ. ಈಗ ಒಂದು ರೀ-ಆರ್ಗನೈಜೇಷನ್ ಕಮಿಟಿ ಎಂದು ನೇಮಕಮಾಡಿದ್ದೇವೆ. ಅವರು ಜೂನ್‌ತಿಂಗಳಿನೊಳಗೆ ಒಂದು ವರದಿಯನ್ನು ಕೊಡುತ್ತಾರೆ. ಆ ಕಮಿಟಿಯಲ್ಲಿ ರಿಟೈರ್ಡ್ ಚೀಫ್ ಇಂಜನಿಯರುಗಳು ಸದಸ್ಯರಾಗಿದ್ದಾರೆ. ಅವರಲ್ಲೊಬ್ಬರು ಸೆಕ್ರೆಟರಿಗಳಾಗಿದ್ದಾರೆ. ಆ ಕಮಿಟಿಯಲ್ಲಿ ಅನೇಕ ವಿಷಯಗಳನ್ನು ವಿಮರ್ಶೆ ಮಾಡುತ್ತಾರೆ. ಮುಖ್ಯವಾಗಿ ಯಾವ್ಯಾವ ಅಧಿಕಾರಿಗೆ ಎಷ್ಟೆಷ್ಟು ಕೆಲಸವಿರಬೇಕು, ಎಷ್ಟೆಷ್ಟು ಅಧಿಕಾರ ಇರಬೇಕು, ಯಾವಯಾವ ಅಂತಸ್ತಿನಲ್ಲಿರಬೇಕು, ಎಷ್ಟೆಷ್ಟು ಲಕ್ಷ ರೂಪಾಯಿಗಳವರೆಗೆ ಅವರು ಖರ್ಚುಮಾಡುವುದಕ್ಕೆ ಅಧಿಕಾರವಿರಬೇಕು ಎಂಬ ವಿಷಯಗಳೆಲ್ಲವನ್ನೂ ಆ ಕಮಿಟಿಯಲ್ಲಿ ತೀರ್ಮಾನಿಸುತ್ತಾರೆ. ಶ್ರೀ ಹೆಗ್ಗಡೆಯವರು ಹೈಪವರ್ ಕಮಿಟಿ ಇರಬೇಕೆಂದು ಸಲಹೆ ಮಾಡಿದ್ದಾರೆ. ಸ್ಯಾನಿಟರಿ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಮತ್ತು ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿಗೆ ಚೀಫ್ ಇಂಜನಿಯರ್ ಬೇಕೆಂದು ಹೇಳಿದ್ದಾರೆ. ಮೈನರ್ ಇರ್ರಿಗೇಷನ್ ಮತ್ತು ಬಿಲ್ಡಿಂಗ್ಸ್‌ಗೆ ಚೀಫ್ ಇಂಜನಿಯರ್ ಬೇಕೆಂದು ಹೇಳಿದ್ದಾರೆ. ಒಬ್ಬೊಬ್ಬ ಚೀಫ್ ಇಂಜಿನಿಯರ್ ಯಾವ್ಯಾವ ಬಾಬಿಗೆ ಬೇಕೆಂಬ ಬಗ್ಗೆ ಸಂಪೂರ್ಣವಾಗಿ ವಿಮರ್ಶೆ ಮಾಡಿ ವರದಿ ಕಳುಹಿಸುತ್ತಾರೆ. ಅನೇಕ ಸ್ನೇಹಿತರೂ ಕೂಡ ಈ ಬಗ್ಗೆ ಇತರ ಸಲಹೆಗಳನ್ನೂ ಕೊಟ್ಟಿದ್ದಾರೆ. ಅವರು ಸೂಚಿಸಿರುವ ಸಲಹೆಗಳನ್ನು ತಮ್ಮ ಮುಂದಿಡಲಾಗಿದೆ. ಬರತಕ್ಕ ವರದಿಯ ಅಂಶಗಳನ್ನು ನೋಡಿ ಸೂಕ್ತ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳುತ್ತಾರೆಂದು ತಿಳಿಸುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಸದಸ್ಯರು ಅರ್ಜಿಕೊಟ್ಟು ಆರೀತಿ ಮಾಡಿ, ಈ ರೀತಿ ಮಾಡಿ, ಎಂದು ಹೇಳುತ್ತಾರೆ. ನಮ್ಮನ್ನು ಅವರ ಅರ್ಜಿಯನ್ನು ತರಿಸಿಕೊಂಡು ನೋಡುವುದಿಲ್ಲವೆಂದು ಹೇಳುತ್ತಾರೆ. ಸುಮಾರು ನಾಲ್ಕಾರು ತಿಂಗಳಿನಿಂದಲೂ ಬಂದಿರುವ ಅರ್ಜಿಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ವರದಿ ತರಿಸಿರುವುದನ್ನು ಯಾರಾದರೂ ನೋಡಿದರೆ ದೊಡ್ಡ ದೊಡ್ಡ ಭಾರತ ಬಂದ ಹಾಗೆ ಬರುತ್ತದೆ. ಇಲಾಖೆಗಳಿಂದ ವರದಿಗಳು ಬಡ್ಜೆಟ್ಟಿನಲ್ಲಿದ್ದಹಾಗೆ ಬರುತ್ತವೆ. ಹೆಸರುಗಳಿರುತ್ತವೆ, ಅಂಕಿ ಅಂಶಗಳಿರುತ್ತವೆ. ಮೂರು ತಿಂಗಳುಗಳಿಗೊಮ್ಮೆ 'ನ್ಯಾರೆಟಿವ್ ಫಾರಂ'ನಲ್ಲಿ ವಾಕ್ಯಗಳನ್ನು ಬರೆದು ಸ್ಥೂಲವಾಗಿ ವರದಿಯನ್ನು ಕಳುಹಿಸಬೇಕೆಂದು ಚೀಫ್ ಇಂಜಿನಿಯರಿಗೆ ತಿಳಿಸಿದ್ದೇನೆ. ಈಗ್ಗೆ ಮೂರು ನಾಲ್ಕು ತಿಂಗಳುಗಳಿಂದಲೂ ವರದಿಗಳು ಬರುತ್ತಿವೆ. ಆದ್ದರಿಂದ ನಾವು ಅರ್ಜಿಗಳನ್ನು ನೋಡುವುದಿಲ್ಲವೆಂದು ಹೇಳುವ ಮಾತು ಸರಿಯಲ್ಲ. ಇದು ನಾಲ್ಕಾರು ತಿಂಗಳುಗಳಿಂದಲೂ ಆಗುತ್ತಿರುವ ವ್ಯವಸ್ಥೆ. ಅದು ಅನೇಕರಿಗೆ ಗೊತ್ತಿಲ್ಲ. ಈ ರೀತಿಯಾದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆಂದು ಬಹಳ ನಮ್ರವಾಗಿ ಅರಿಕೆ ಮಾಡುತ್ತಿದ್ದೇನೆ.

ಇನ್ನೊಂದು ವಿಷಯವನ್ನು ಹೇಳಿದರು. ಎಲ್ಲೆಲ್ಲಿ ಕೆಲಸವಾಗಬೇಕೋ ಅಲ್ಲಿ ಅರ್ಜಿ ಕೊಡಬೇಕು ಎಂದು. ಆಗ ಹಾಗೆಯೇ ಆರ್ಡರ್ ಮಾಡುತ್ತೇವೆ. ಮನಸ್ಸು ಬಂದರೆ ಹೋಗುತ್ತೇವೆ. ಇಲ್ಲದೇ ಇದ್ದರೆ ಒಂದು ಸರ್ವೆ ಸರ್ಕಲ್ ಕ್ರಿಯೇಟ್‌ಮಾಡಿ ಆ ಕಾರ್ಯವನ್ನು ಜಾರಿಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ. ಏತನ್ಮಧ್ಯೆ 'ಸೂಮೋಟೋ' ಸರ್ವೆಮಾಡಬೇಕೆಂದಿದ್ದಾರೆ. ರಿ-ಆರ್ಗನೈಜೇಷನ್ ಕಮಿಟಿಯವರು ಆ ಬಗ್ಗೆ ಏನು ಸಲಹೆ ಕೊಡುತ್ತಾರೋ ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ. ಈ ಇಲಾಖೆಯನ್ನು ಯಾವ ರೀತಿ ವ್ಯವಸ್ಥೆಗೊಳಿಸಬೇಕೆಂದು ಅನೇಕ ತಜ್ಞರಿಂದ ಕೇಳುತ್ತಿದ್ದೇವೆ. ಆದರೆ ಅವರ ಬೆನ್ನು ಹಿಂದೆ ನಾವು ಬೇರೆಬೇರೆ ವಿಧಾನವನ್ನನುಸರಿಸಿಕೊಂಡು ಹೋಗುವುದು ಅವರಿಗೆ ಸರಿಯಾಗಿ ಕಾಣುವುದಿಲ್ಲ. ಅವರ ಸಲಹೆಗಳನ್ನು ಕಾಯಬೇಕು ಎಂಬ ದೃಷ್ಟಿ ಇದೆ. ಇನ್‌ವೆಸ್ಟಿಗೇಷನ್ನಿಗೆ ಒಂದು ಸರ್ಕಲ್ ಇರಬೇಕು. ಅಗತ್ಯವಿದ್ದರೆ ಎರಡು ಸರ್ಕಲ್‌ಗಳನ್ನು ಸ್ಥಾಪನೆ ಮಾಡಿ ಅವುಗಳ ಮುಖಾಂತರ ಕೆಲಸಗಳನ್ನುಮಾಡಬೇಕೆಂದು ಅಲೋಚನೆ ಇದೆ. ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ಏನೇನು ನೀರಾವರಿ ಕಾರ್ಯಗಳು ಸಾಧ್ಯವಿದೆ ಎಂಬುದರ investigation ಮಾಡಿ ಸರ್ವೆ ನಡೆಸಿ, ಎಸ್ಟಿಮೇಟು ತಯಾರಿಸಿ ಪುಸ್ತಕರೂಪದಲ್ಲಿ ಬರೆದು ಕಳಿಸುವುದಕ್ಕಾಗಿ ಹಾಗೂ normal ಮತ್ತು special division ಸ್ಯಾಂಕ್ಷನ್‌ಮಾಡಿ ಕೆಲಸ

(ಶ್ರೀ ಎಚ್. ಕೆ. ವೀರಣ್ಣಗೌಡ)

ಮಾಡಬೇಕು ಎಂದು ಉದ್ದೇಶವಿದೆ. ಹಳೇ ಮೈಸೂರಿನಲ್ಲಿಯೂ ನೀರಾವರಿ ಯೋಜನೆಗಳ ಬಗ್ಗೆ ಈಗಾಗಲೇ ಒಂದು ವ್ಯವಸ್ಥೆ ಇದೆ. ಹಳೇ ಮೈಸೂರಿನ ಬಗ್ಗೆ 50-52 ವರ್ಷಗಳ ಹಿಂದೆಯೇ ಈ ರೀತಿಯ ಸರ್ವೆ ಮತ್ತು ಅಂದಾಜುಗಳು ತಯಾರಿಸಲ್ಪಟ್ಟು ಅವು ಸಿದ್ಧವಾಗಿವೆ. ಕಾವೇರಿ ಮತ್ತು ಹೇಮಾವತಿ ನದಿಗಳ ನೀರಾವರಿ ಯೋಜನೆಗಳ ಬಗ್ಗೆ ಬರೆದು ಇಟ್ಟಿದ್ದಾರೆ. ಎಸ್ಟಿಮೇಟ್‌ಮಾಡಿ ಇಟ್ಟಿದ್ದಾರೆ. ಹಳೇಮೈಸೂರಿಗೆ ಸಂಬಂಧಪಟ್ಟಹಾಗೆ ಕೆಲಸಗಳನ್ನು ಈ ಪುಸ್ತಕ ತೆಗೆದುಕೊಂಡು ಈ ವಿಷಯ ಪುನರ್ ವಿಮರ್ಶೆಮಾಡಬೇಕಾಗಿದೆ. ಈಗಾಗಲೇ ಪುಸ್ತಕದಲ್ಲಿ ಕೊಟ್ಟಿರುವ ಹಾಗೆ ಆಯಾಯ ಸ್ಥಳಕ್ಕೆ ಹೋಗಿ ಕೆಲಸ ಕಾರ್ಯಗಳನ್ನು ಪುನರ್ ವಿಮರ್ಶಿಸಬೇಕಾಗಿದೆ. ಯಾಕೆಂದರೆ, ಈಗಾಗಲೇ ಅರ್ಧ ಶತಮಾನಕಾಲ ಕಳೆದು ಹೋಗಿದೆ, ಆದುದರಿಂದ ರೀಸರ್ವೆ ಮಾಡತಕ್ಕದ್ದು ಅಗತ್ಯವಿದೆ.

ಶ್ರೀ ಯು. ಎಂ. ಮಾದಪ್ಪ.—ಹಳೆಯ ಮೈಸೂರಿನಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಇಲಾಖೆಯಲ್ಲಿ ಸರ್ವೆ ಡಿಪಾರ್ಟ್‌ಮೆಂಟು ಒಂದು ಇದೆ ಅಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಂದಿರತಕ್ಕ ಅರ್ಜಿಗಳ ಪರಿಶೀಲನೆ ಮಾಡುವುದು, ಸ್ಪೆಷಲ್, ಮೇಜರ್, ಮೈನರ್ ನೀರಾವರಿ ಯೋಜನೆಗಳ ಕೆಲಸಗಳನ್ನು ಅವರೇ ಮಾಡುತ್ತಾರೆ. ಕೆಲಸ ಜಾಸ್ತಿಯಾಗಿರುವುದರಿಂದ ಈಗಿರತಕ್ಕ ಸಿಬ್ಬಂದಿ ಸಾಲದು, ಎಲ್ಲ ಕೆಲಸ ಸಾರೋದ್ಧಾರವಾಗಿ ನಡೆಯಬೇಕಾಗಿದೆ. ಇನ್ನು ಮುಂದೆ ಪುನರ್ ವ್ಯವಸ್ಥೆ ಮಾಡುವ ಬಗ್ಗೆ ಏರ್ಪಾಡು ಆಗಿದೆ. ಅರ್ಜಿಗಳ ಪ್ರಕಾರ ಕೆಲಸ ನಡೆಯದೇ ಇರಬಹುದು. ಎಲ್ಲ ಅರ್ಜಿಗಳ ಪರಿಶೀಲನೆಮಾಡತಕ್ಕ ಏರ್ಪಾಡು ಮಾಡಿದೆ. ಕೆಲವೊಂದು ಅಗತ್ಯವಿರುವ ಕೆಲಸ ಕಾರ್ಯಗಳ ಬಗ್ಗೆ note ಮಾಡಿಕೊಳ್ಳಲಾಗಿದೆ. ಸ್ವಲ್ಪ ಆಗತಕ್ಕ ಕೆಲಸ ನಿಧಾನವಾಗಿದೆ ಎಂದು ಹೇಳಬಹುದು, ಆದರೆ ಅದನ್ನು ನಿವಾರಿಸಲು ಯೋಚನೆ ಮಾಡುತ್ತಿದ್ದೇವೆ. ಈಗ ಇರತಕ್ಕಂಥ ಸಿಬ್ಬಂದಿ ನೋಡಿದರೆ ಆಗತಕ್ಕ ಕೆಲಸ ಜಾಸ್ತಿಯಾಗಿರುವದರಿಂದ ಅವುಗಳಲ್ಲಿಯ ಅಂತರ ಜಾಸ್ತಿಯಾಗಿದೆ. ಒಂದು ತಿದ್ದುಪಡಿ ಮಸೂದೆಯನ್ನು ತಂದು ಮರಾಮತ್ ಇಲಾಖೆಯ ಪುನರ್ ವ್ಯವಸ್ಥೆಯ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಇನ್ನು ಸಾಮಾನ್ಯವಾಗಿ ಮರಾಮತ್ ಇಲಾಖೆಯ ಬಗ್ಗೆ ಏನು ಟೀಕೆ ಮಾಡಬಹುದು, ಯಾವಯಾವ ಆಕ್ಷೇಪಣೆಗಳು ಬರ ಬಹುದು ಎಂಬುದನ್ನು ಊಹೆಮಾಡಬಹುದು. ಅವು ನನಗೂ ಗೊತ್ತಿವೆ. ಆಕ್ಷೇಪಣೆಗಳೆಲ್ಲವನ್ನೂ ಪೂರ್ವಭಾವಿಯಾಗಿ ನಿರೀಕ್ಷಣೆ ಮಾಡಿಯೇ ಕಾರ್ಯಕ್ರಮ ಕೈಕೊಳ್ಳಲಾಗುತ್ತಿದೆ. ಎಲ್ಲರನ್ನೂ ಸಮಾಧಾನಗೊಳಿಸುವುದು ಸಾಧ್ಯವಿಲ್ಲ. ಆಡಳಿತೆಯ ಜವಾಬ್ದಾರಿ ಸಂಸ್ಥೆಯ ಮೇಲೆ ಇದೆ. ಈ ಕೆಲಸ ಕಾರ್ಯಗಳು ನೆರವೇರಬೇಕಾದರೆ ಅನೇಕ ಅಡಚಣೆ ತೊಂದರೆಗಳು ಇವೆ. ಹಣದ ಅನುಕೂಲತೆಯು ಮುಖ್ಯವಾಗಿಬೇಕು. ಯಾವ ಕೆಲಸ ಪ್ರಾಮುಖ್ಯವಾಗಿದೆ ಅತ್ಯಗತ್ಯವಾಗಿದೆ ಎಂಬುದನ್ನು ಗಮನಕ್ಕೆ ತರುವುದು ಅವಶ್ಯ. ಈ ಬಗ್ಗೆ ವಿವರವಾಗಿ ಒಂದು ದೊಡ್ಡ ಪಟ್ಟಿಯನ್ನೇ ತಯಾರಿಸಲಾಗಿದೆ. ಅದರ ಗೋಜಿಗೆ ಈಗ ನಾನು ಹೋಗುವದಿಲ್ಲ. 1957-58ನೇ ಸಾಲಿನಲ್ಲಿ ಸ್ವಲ್ಪಹಣ ಖರ್ಚಾಗದೆ ನಿಂತು ಹೋಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ West coast road ಸುಲುವಾಗಿ ಇಂಡಿಯಾ ಸರಕಾರದಿಂದ ದೊರೆತ ಹಣ ಪೂರ್ತಿಯಾಗಿ ಖರ್ಚು ಆಗಲಿಲ್ಲ. ಈ ರಸ್ತೆಗಾಗಿ ಒಂದು ಕೋಟಿ ರೂಪಾಯಿ ಹಣವನ್ನು ತೋರಿಸಲಾಗಿತ್ತು. ಆದರೆ ಈ ಹಣ ನಮಗೆ ಬರಲಿಲ್ಲ. ಒಟ್ಟಿಗೆ ಖರ್ಚಾಗದೆ ಉಳಿದ ಹಣದಲ್ಲಿ ಈ ಒಂದು ಕೋಟಿರೂಪಾಯಿ ತೆಗೆದು ಹಾಕಿದರೆ, ಲಾಪ್ಸ್ ಆದುದು ಬಹಳ ಕಡಮೆಯಾಗಿದೆ. ಈಗಾಗಲೇ ಯಾವಯಾವ ಕೆಲಸ ಎಷ್ಟೆಷ್ಟು ಆಗಿದೆ ಎಂಬುದನ್ನು ಚೀಫ್ ಇಂಜಿನೀಯರು, ಸೂಪರಿಂಟೆಂಡಿಂಗ್ ಇಂಜಿನಿಯರು ವಿಮರ್ಶೆ ಮಾಡಿದ್ದಾರೆ.

ಯಾರೋ ಒಬ್ಬ ಸದಸ್ಯರು ಈ ಕೆಲಸ ಎಷ್ಟುಮಟ್ಟಿಗೆ ಆಗಿದೆ ಎಂದು ಕೇಳಿದರು. ಕೆಲವು ಕಡೆಯಿಂದ ಕಳೆದ ವರ್ಷ ಮಾರ್ಚಿ ಅಖೈರ್‌ವರೆಗೂ ಪೂರ್ತಿಯಾಗಿ ಬಂದಿದೆ. ಇನ್ನು ಅನೇಕ ಕಡೆಯಿಂದ ಮಾರ್ಚಿ ತಿಂಗಳ ಲೆಕ್ಕ ಬಂದಿಲ್ಲ ಅದನ್ನು ಅಂದಾಜು ಮಾಡಿ ಹೇಳಿರುತ್ತಾರೆ. ಇನ್ನೊಂದು ಮಾತು ಹೇಳುತ್ತೇನೆ. 1957-58ರ actuals ಬೇಕು ಎಂದರೆ ಇನ್ನು 2-3 ತಿಂಗಳು ಬೇಕಾಗುತ್ತದೆ. ಆದ್ದರಿಂದ ಈಗ ನಾನು ಈ ಸಭೆಯ ಮುಂದೆ ತಮ್ಮ ಗಮನಕ್ಕೆ ತರುವುದು ಮತ್ತು ಸಮಜಾಯಿಷಿ ಕೊಡುವುದು ಏನೆಂದರೆ, ಕೇಳಿರತಕ್ಕ ಪ್ರಶ್ನೆಗಳಿಗೆ ಉತ್ತರ ಹೇಳುವುದೆಷ್ಟೋ ಅಷ್ಟೆ. ಈಗ ಇಲ್ಲಿ ಆಗಿರತಕ್ಕ ಚರ್ಚೆ ಮಾತುಕತೆ ನೋಡಿದ್ದರಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಶೇಕಡ 90 ರಿಂದ 97ರವರೆಗೂ ಹಣ ಖರ್ಚುಮಾಡಿದೆ, ಕೆಲವು ಸಂದರ್ಭದಲ್ಲಿ ಶೇಕಡ 10ರಷ್ಟು ಲ್ಯಾಪ್ಸ್ ಆಗಿದೆ. ಕೆಲವು ಸಂದರ್ಭದಲ್ಲಿ ಕೇವಲ ಮೂರರಷ್ಟು ಲ್ಯಾಪ್ಸ್ ಆಗಿದೆ. ಸಿವಿಲ್ ವರ್ಕ್ಸ್‌ಗೆ ಪೂರ್ತಿ ಸಿಕ್ಕಿಲ್ಲ, ಇರಿಗೇಷನ್ ಪ್ರಾಪರ್ ತೆಗೆದುಕೊಂಡು ಸ್ಥೂಲವಾಗಿ ಹೇಳುತ್ತಾ ಇದ್ದೇನೆ. ಎಂದರೆ ಯಾವ ಭಾಗದಲ್ಲೂ ಸಿವಿಲ್‌ವರ್ಕ್ಸ್ ಆಗಲಿ ಮೇಜರ್ ಇರಿಗೇಷನ್ ಆಗಲಿ, ಮೈನರ್ ಇರಿಗೇಷನ್ ಆಗಲೀ, ರೋಡ್ಸ್ ಆಗಲೀ ಶೇಕಡ 90 ರಷ್ಟು ಹಣ ಖರ್ಚಾಗಿದೆ, ಶೇಕಡ 10ಕ್ಕಿಂತ ಹೆಚ್ಚಾಗಿ ಲ್ಯಾಪ್ಸ್ ಆಗಿಲ್ಲ ಎಂದು ನನ್ನ ಮನಸ್ಸಿಗೆ ನಿರ್ಧಾರವಾಗಿದೆ.

Sri U. M. MADAPPA.—Including charged amount ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು, ಎಲ್ಲಾ ಒಟ್ಟಿಗೆ ಹೇಳುತ್ತಾ ಇರುವುದು.

ಇನ್ನು ನಿಧಾನವಾಗತಕ್ಕ ಕೆಲವು ಕಾರಣಗಳು ಇವೆ. ಅವು ತಮಗೂ ಗೊತ್ತಿದೆ. ಕೆಲವು ಸಂದರ್ಭದಲ್ಲಿ ಕೆಲವು ಸ್ನೇಹಿತರು ಆಕ್ಷೇಪಣೆ ಮಾಡಿದರು. ಅದು ನನ್ನ ಗಮನಕ್ಕೂ ಬಂದಿದೆ. ಈ ವಿಷಯ ಹಿಂದೆಯೇ ಹೇಳಿದ್ದೇನೆ. ಮತ್ತೆ ಪುನಃ ಅದನ್ನು ಪ್ರಸ್ತಾಪಮಾಡುವುದಕ್ಕೆ ಇಷ್ಟಪಡುವುದಿಲ್ಲ. ಹಿಂದೆ ನಮಗೆ ಏನು ಕಷ್ಟ ಇದೆ, ಕೆಲಸಮಾಡುವುದಕ್ಕೆ ಏನು ಸ್ವತಂತ್ರ್ಯಕೊಡಬೇಕು ಎನ್ನುವುದನ್ನು ಹೇಳಿದೆ. ಅದನ್ನು ಕೆಲವು ಸ್ನೇಹಿತರು ಅಪಾರ್ಥವಾಗಿ ಭಾವಿಸಿದರು ಎಂದು ಕಾಣುತ್ತದೆ. ಒಬ್ಬಿಬ್ಬರು ನೀವು ಹೇಳುವುದು, ನೀವು ಜವಾಬು ಕೊಡುವುದು ನೋಡಿ ನಮ್ಮ ದೃಷ್ಟಿ ಎಲ್ಲಾ ತೆಂಗಿನ ಮರದಷ್ಟು ಎತ್ತರ ಹೋಗಿತ್ತು ಕಡೆಯಲ್ಲಿ ಕೈಬಿಟ್ಟಿದ್ದೀರಿ ಎಂದು ಹೇಳಿದರು. ನಿಮ್ಮ ಜೊತೆಗೆ ನಮ್ಮನ್ನೂ ಎಳೆದುಕೊಂಡು ಕೆಳಗೆ ಬಿದ್ದಿರಿ ಎಂದು ಹೇಳಿದರು. ಅದನ್ನು ಯೋಚನೆ ಮಾಡಿದೆ. ನಾನು ತಪ್ಪು ಮಾಡಿದ್ದೇನೋ ಏನೋ, ಯಾರಾದರೂ ವ್ಯಕ್ತಿಯನ್ನು ಕುರಿತು ಹೇಳಿದೆನೇನೋ ಎಂದು ನನಗೆ ಅನಿಸಿತು. ಇವತ್ತು ಅನೇಕರಿಗೆ ಹೇಳಿದ್ದೇನೆ. ಹಾಸನ ಜಿಲ್ಲೆಯವರಿಗೂ ಹೇಳಿದ್ದೇನೆ. ಕೆಲವು ವ್ಯಕ್ತಿಗಳ ಪ್ರಭಾವದಿಂದ ಆಗಬೇಕಾದ ಕೆಲಸ ಆಗದೇ ಯಾವುದೋ ಒಂದು ಕೆಲಸ ಎಸ್ಟಿಮೇಟ್ ಇಲ್ಲ, ಪ್ಲಾನ್ ಇಲ್ಲ

ಬಡ್ಜೆಟ್‌ನಲ್ಲಿ ಬಂದಿದೆ, ಅದು ಹೇಗೆ ಬಂತು ಎಂದು ವಿಮರ್ಶೆಮಾಡಿದೆ. ವಿಮರ್ಶೆಮಾಡಿ ನೋಡಿಕೊಂಡು ಮನದಟ್ಟುಮಾಡಿಕೊಂಡಿದ್ದೇನೆ. ಉದ್ದೇಶ ಪೂರ್ವಕವಾಗಿ ಸೇರಿಸಿಲ್ಲ. ಅದಕ್ಕೆ ಮಂಜೂರಾತಿ ದೊರೆತಿದೆ. ಆದರೆ ಪ್ಲಾನ್‌ಮಾಡಿಲ್ಲ, ಎಸ್ಟಿಮೇಟ್‌ಮಾಡಿಲ್ಲ. ಆ ದೃಷ್ಟಿಯಿಂದ ಅದನ್ನು ಒಪ್ಪಿಕೊಳ್ಳುತ್ತೇನೆ. ಹೀಗೆ ಕೆಲವು ಸಂದರ್ಭದಲ್ಲಿ ಯಾವುದಾದರೂ ಪ್ರಭಾವಕ್ಕೆ ಒಳಗಾಗಿದ್ದರೆ—ಕೆಲವು ಅಧಿಕಾರಿಗಳು ಆ ರೀತಿ ಮಾಡಿದ್ದರೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಹೀಗೆ ಕೆಲವು ಕಡೆ ಅಧಿಕಾರಿಗಳ ತಪ್ಪಿನಿಂದ ಸ್ಯಾಂಕ್ಷನ್ಡ್ ವರ್ಕ್ಸ್ ಕೂಡ ಎಸ್ಟಿಮೇಟ್ ಆಗದೇ ನಿಧಾನವಾಗಿದೆ. ಮತ್ತು ಎಸ್ಟಿಮೇಟ್ ಮಾಡುವುದರಲ್ಲೂ ಸಹ ತಪ್ಪಾಗಿರುತ್ತದೆ. ಅದರಿಂದ ನಿಧಾನವಾಗುತ್ತದೆ. ಒಂದು ಕಡೆ ಸೇತುವೆಗೆ ತರಾತುರಿ ಮಾಡಿ 25 ಸಾವಿರ ರೂಪಾಯಿನ ಎಸ್ಟಿಮೇಟ್ ಮಾಡಿದ್ದರು. ಇವತ್ತಿನ ದಿವಸ 75 ಸಾವಿರ ರೂಪಾಯಿ ಆಗುತ್ತದೆ. ರಿವೈಸ್‌ಮಾಡಬೇಡಿ ಎಂದರೆ ಅದು ಹೇಗೆ ಆಗುತ್ತದೆ? ರಿವೈಸ್‌ಮಾಡದಿದ್ದರೆ ಕಂಟ್ರಾಕ್ಟರುಗಳು ಹಿಂದೆ ಯಾವರೇಟ್ ಇತ್ತೋ ಆ ರೇಟಿನಲ್ಲಿ ಕೆಲಸಮಾಡಲು ಒಪ್ಪುವುದಿಲ್ಲ. ತಕರಾರು ಹಾಕುತ್ತಾರೆ. ಕೆಲಸ ನಿಧಾನವಾಗುತ್ತದೆ. ತರಾತುರಿಯಾಗಿ ಕಡಮೆ ಎಸ್ಟಿಮೇಟ್ ಮಾಡಿ ಕೆಲಸ ಮುಂದುವರಿಯದೆ ಇರುವ ಅನೇಕ ನಿದರ್ಶನಗಳು ಇವೆ. ಆದ್ದರಿಂದ ಕೆಲವು ಸಂದರ್ಭಗಳಲ್ಲಿ ಎಸ್ಟಿಮೇಟ್ ರಿವೈಸ್ ಮಾಡಬೇಕಾಗುತ್ತದೆ, ಮತ್ತು ಪುನರ್ವಿಮರ್ಶೆ ಮಾಡಬೇಕಾಗುತ್ತದೆ. ಆದ್ದರಿಂದ ಸ್ವಲ್ಪ ನಿಧಾನವಾಗುವುದಕ್ಕೆ ಇದೂ ಒಂದು ಕಾರಣ ಎಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳಬೇಕಾಗಿದೆ.

ಇನ್ನು ಈ ಸಿಬ್ಬಂದಿಯ ನೇಮಕ, ಪ್ರಮೋಷನ್, ಅವರ ಸಂಬಳ ಸಾರಿಗೆ ವಿಷಯದಲ್ಲಿ 200 ವೇಕೆನ್ಸಿಗಳು ಖಾಲಿ ಇದ್ದಾಗ 63 ಜನ ಅಸಿಸ್ಟೆಂಟ್ ಇಂಜಿನಿಯರುಗಳನ್ನು ಖಾಯಂ ಮಾಡಲು ಸರ್ಕಾರದವರಿಗೇನು ತೊಂದರೆ ಇತ್ತು ಎಂಬುದಾಗಿ ಅನೇಕ ವಿಚಾರಗಳನ್ನೆತ್ತಿದ್ದಾರೆ. ಈ ಬಗ್ಗೆ ನಾನಾಗಲೇ ಉತ್ತರ ಎಷ್ಟೋವೇಳೆ ಹೇಳಿದ್ದೇನೆ. ನಮ್ಮ ದೇಶದಲ್ಲಿ ಈ ನೌಕರವರ್ಗದ ಸಂಬಳ ಸಾರಿಗೆಗಳು ಹಿಂದೆ ಬಹಳ ಕಡಮೆಯಾಗಿತ್ತು. ಬೊಂಬಾಯಿ ಸರ್ಕಾರದವರು ಇವರಿಗೆ 120 ರೂಪಾಯಿಗಳ ಸಂಬಳ ಷುರುವಿನಲ್ಲೇ ಕೊಡುತ್ತಾರೆ. ಅವರಿಗೆ ಆ ಗ್ರೇಡಿನಲ್ಲಿ ಆಗಲೇ ಒಂದು ಎರಡು ವರ್ಷ ಸರ್ವೀಸಾಗಿದೆ. ಅಂಥವರನ್ನು ನಾವೀಗ ಏನು ಮಾಡಬೇಕು ? ಮೊದಲು ಈ ಇಲಾಖೆಗೆ ಪ್ರೊಬೇಷನರುಗಳನ್ನು 150 ರೂಪಾಯುಗಳ ವೇತನದ ಮೇಲೆ ತೆಗೆದುಕೊಳ್ಳಲಾಗುತ್ತಿದ್ದಿತು. ಆಗ ಆ ಪ್ರೊಬೆಷನರಿ ಪೀರಿಯಡ್ ಎರಡು ವರ್ಷಗಳಿತ್ತು. ಇತ್ತೀಚೆಗೆ ಅದನ್ನು ಒಂದು ವರ್ಷಕ್ಕೆ ಇಳಿಸಿದರು. ಪುನಃ ಆ ಅವಧಿಯನ್ನು ಆರು ತಿಂಗಳಿಗೆ ಇಳಿಸಿ ಆ ಗ್ರೇಡಿನಲ್ಲಿ ಕೆಲವರನ್ನು ಅವರು ಕನ್‌ಫರ್‌ಮಾಡಿ ಕಳುಹಿಸಿದ್ದಾರೆ. ಇನ್ನು ಕೆಲವರು ಆ ಪ್ರೊಬೇಷನರಿ ಪೀರಿಯಡ್ಡನ್ನು ಮುಗಿಸುವುದರಲ್ಲಿದ್ದಾರೆ. ಮತ್ತೆ ಕೆಲವರಿಗೆ ಈ ಗ್ರೇಡಿನಲ್ಲಿ ಪ್ರಮೋಷನ್ ಸಿಕ್ಕಿದೆ. ಸರ್ಕಾರದವರು ಈಗ ಈ ಪ್ರತಿಯೊಂದು ವಿಚಾರಗಳನ್ನು ವಿಮರ್ಶೆ ಮಾಡುತ್ತಿದ್ದಾರೆ. ನಮ್ಮ ಹಳೇ ಮೈಸೂರಿನ ನೌಕರವರ್ಗದ ಬಗ್ಗೆ ಇವರ ಸಂಬಳ ಸಾರಿಗೆಗಳ ವಿಚಾರದಲ್ಲಿ ಸರ್ಕಾರದವರು ಬಹಳ ಔದಾರ್ಯವನ್ನು ತೋರಿಸಿರುತ್ತಾರೆ. ಆದರೆ ಈ ಸನ್ನಿವೇಶದಲ್ಲಿ ಕೆಲವು ವಿಚಾರಗಳನ್ನು ನಾವೊಂದುವೇಳೆ ಒಪ್ಪಿಕೊಂಡರೂ ಅಕೌಂಟೆಂಟ್ ಜನರಲ್‌ರವರು ಅಂಥದಕ್ಕೆ ಒಪ್ಪುತ್ತಿಲ್ಲ. ಹೀಗೆಲ್ಲ ನಾನಾ ತೊಂದರೆಗಳಿರುತ್ತವೆ. ಸರಿಯಾದ ಕಾರಣಗಳಿಲ್ಲದೆ ಏಕಾಏಕಿ ಯಾವುದನ್ನು ಮಾಡುವುದಕ್ಕೂ ಶಕ್ಯವಿಲ್ಲ. ಇನ್ನು ಈ ಲೆಕ್ಕಗಳನ್ನಿಡಿತಕ್ಕ ವಿಚಾರದಲ್ಲಿ ಸರಿಯಾದ ತಿಳುವಳಿಕೆಯನ್ನು ಕೊಡತಕ್ಕ ಬಗ್ಗೆ ನಮ್ಮ ನೌಕರವರ್ಗದಲ್ಲಿ ಕೆಲವರಿಗೆ ಅಕೌಂಟೆಂಟ್ ಜನರಲ್‌ರವರ ಆಫೀಸಿನಲ್ಲಿ ಟ್ರೈನಿಂಗ್ ಪಡೆಯತಕ್ಕ ಬಗ್ಗೆ ವ್ಯವಸ್ಥೆಮಾಡಿದ್ದೇವೆ. ಹೀಗೆಲ್ಲ ಕೆಲಕೆಲವು ಕಾರಣಗಳಿಂದ ಎಲ್ಲೋ ಕೆಲವು ಸಣ್ಣ ಪುಟ್ಟ ವಿಚಾರಗಳಲ್ಲಿ ಸ್ವಲ್ಪ ನಿಧಾನವಾಗಿರಬಹುದು. ಅಷ್ಟು ಶಿವಾಯಿ ಕೆಲವು ಮಾನ್ಯ ಸದಸ್ಯರು ಹೇಳಿರತಕ್ಕ ರೀತಿಯಲ್ಲಿ ತಡವಾಗಿದೆ ಎಂಬ ಅಂಶವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅನೇಕ ವಿಚಾರಗಳಲ್ಲಿ ಅಕೌಂಟೆಂಟ್ ಜನರಲ್‌ರವರಿಂದ ತಗಾದೆ ಬರುತ್ತದೆ. ನಾವು ಸುಮ್ಮನಿದ್ದರೆ ಅವರು ಸುಮ್ಮನಿರುವುದಿಲ್ಲ, ಆಗಿಂದಾಗ್ಗೆ ರಿಮೈಂಡರುಗಳನ್ನು ಕಳುಹಿಸುತ್ತಿರುತ್ತಾರೆ. ಹೀಗೆ ಕೆಲವು ಅನಿವಾರ್ಯಗಳಿಂದ ಈ ಬಗ್ಗೆ ಕೆಲವು ವಿಚಾರಗಳಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸ್ವಲ್ಪ ತಡವಾಗಿದೆಯೆಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಮೈದಾಳ ಕೆರೆಯ ಕಮಿಟಿ ತೀರ್ಮಾನವೇನಾಯಿತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೈದಾಳ ಕೆರೆ ವಿಚಾರದಲ್ಲಿ ನಾನೇ ಸ್ವತಃ ಅಲ್ಲಿಗೆ ಹೋಗಿ ಅದನ್ನೆಲ್ಲ ವಿಚಾರಮಾಡಿ ನೋಡಿದ್ದೇನೆ. ಅನೇಕರು ಆ ಕೆರೆ ನೀರಿನಿಂದ ಜಮೀನು ಸಾಗುವಳಿಮಾಡಿಕೊಂಡು ಬರುತ್ತಿದ್ದಾರೆ. ಈಗ ಆ ಕೆರೆಯ ನೀರನ್ನು ತುಮಕೂರು ಟೌನಿಗೆ ಸರಬರಾಯಿ ಮಾಡುತ್ತಿರುವುದರಿಂದ ಕೆಲವು ತುದಿಯ ಜಮೀನುಗಳಿಗೆ ಬಹಳ ತೊಂದರೆಯಾಗಿದೆಯೆಂಬ ಸುದ್ದಿಕೇಳತ್ತಿದ್ದೇನೆ. ಆದುದರಿಂದ ಈ ವಿಚಾರದಲ್ಲಿ ನಾನು ಆಫ್‌ಹ್ಯಾಂಡೆಡ್' ಆಗಿ ಏನು ಹೇಳುವುದಕ್ಕೂ ಆಗುವುದಿಲ್ಲ. ಇದೇ ಸಂದರ್ಭದಲ್ಲಿ ನಾನು ಮಾನ್ಯ ಸದಸ್ಯರ ಗಮನಕ್ಕೆ ಮತ್ತೊಂದು ವಿಚಾರ ತರಬೇಕೆಂದಿದ್ದೇನೆ. ಅದೇನೆಂದರೆ, ಕೆರೆ, ಕಟ್ಟೆ, ಕಾಲುವೆ, ನಾಲೆ, ರಸ್ತೆ, ಸೇತುವೆ ಇತ್ಯಾದಿ ಬಾಬುಗಳಿಗೆ ಜಮೀನನ್ನು ಅಕ್ವಯಿರ್ ಮಾಡಿಕೊಳ್ಳತಕ್ಕ ವಿಚಾರದಲ್ಲಿ ಕೆಲ ಕೆಲವು ಕಡೆ ಕೆಲವು ಪ್ರಭಾವಶಾಲಿಗಳು ಸೇರಿಕೊಂಡು ಅವರ ಜಮೀನು ಹೋಗಿಬಿಡುತ್ತದಲ್ಲ ಎಂದು ನಾನಾ ರೀತಿ ತಕರಾರುಗಳನ್ನು ತಂದೊಡ್ಡುತ್ತಾರೆ. ಜಮೀನು ಅಕ್ವಯಿರ್ ಮಾಡಿಕೊಳ್ಳಲು ಅಕ್ವಿಜಿಷನ್ ಆಕ್ಟ್‌ನಲ್ಲಿ 17ನೆಯ ಸೆಕ್ಷನ್ ಪ್ರಕಾರ ಅವಕಾಶವಿದೆ. ಆದಾಗ್ಗೂ ಅನೇಕರು ಹೈಕೋರ್ಟಿಗೆ ರಿಟ್ ಹಾಕುವ ಮಟ್ಟಕ್ಕೂ ಹೋಗಿದ್ದಾರೆ. ಆ ತೀರ್ಮಾನವಾದನಂತರವೂ ಮತ್ತೆರಡು ರೂಪಾಯಿನ ಸ್ಟ್ಯಾಂಪ್ ಹಾಕಿ ತಕರಾರು ಹಾಕಿದ್ದಾರೆ. ಹೀಗೆ ಒಂದಲ್ಲ ಅನೇಕ ಕಾರಣಗಳಿಂದ ಈ ವಿಚಾರದಲ್ಲಿ ಸ್ವಲ್ಪ ನಿಧಾನವಾಗುತ್ತದೆ. ಇನ್ನು ಕೆಲಸಗಳನ್ನು ಟೆಂಡರ್ ಮೂಲಕ ಕೊಡಬಾರದು, ಪೀಸ್‌ವರ್ಕ್ ಮೂಲಕ ಕೊಡಿ ಎಂದು ಕೆಲವರು ಹೇಳುತ್ತಾರೆ. ಆದರೆ ಈ ವಿಚಾರದಲ್ಲಿ ನಾವೇ ಸರ್ವಾಧಿಕಾರಿಗಳೆಂಬ ರೀತಿಯಲ್ಲಿ ವರ್ತಿಸಲು ಸಾಧ್ಯವಿಲ್ಲ. ಕೆಲವು ಫಾರ್ಮಾಲಿಸ್‌ಗಳನ್ನು ಆಚರಿಸದೆ ನಾವು ಅನುಮತಿಕೊಟ್ಟರೂ, ಈ ವಿಚಾರದಲ್ಲಿ ಫೈನಾನ್‌ಷಿಯಲ್ ಇಲಾಖೆಯವರು ಒಪ್ಪುವುದಿಲ್ಲ. ಅವರೊಪ್ಪಿದರೂ ಅಕೌಂಟೆಂಟ್ ಜನರಲ್‌ರವರು ಒಪ್ಪುವುದಿಲ್ಲ. ಆದುದರಿಂದ ದೊಡ್ಡ ದೊಡ್ಡ ಕೆಲಸಗಳಲ್ಲಿ ನಾವು ಆ ರೀತಿ ಮಾಡುವುದಕ್ಕಾಗುವುದಿಲ್ಲ. ಕೆಲವು ಸಣ್ಣ ಪುಟ್ಟ ಕೆಲಸಗಳಾದರೆ ಕೆಲವು ಕಡೆ ಅವು ಪೀಸ್‌ವರ್ಕ್ ಮೂಲಕ ಚೆನ್ನಾಗಿ ನಡೆಯಬಹುದು.

(ಶ್ರೀ ಎಚ್. ಕೆ. ವೀರಣ್ಣಗೌಡ)

ಆದರೆ ಹಾಗೆ ಪ್ರತಿಯೊಂದು ಬಾಬಿನಲ್ಲೂ ನಡೆಯುವುದಕ್ಕೆ ಅಕೌಂಟೆಂಟ್ ಜನರಲ್‌ರವರು ಒಪ್ಪುವುದಿಲ್ಲ. ಕೆಲವು ವೇಳೆ ಷೆಡ್ಯೂಲ್ ರೇಟಿಗಿಂತ ಕೆಲಸ ಕಡಮೆ ಆಗಬಹುದು.

ಶ್ರೀ ಬಿ. ಡಿ. ಜತ್ತಿ (ಜಮಖಂಡಿ).—ಹಳೆಯ ಮೈಸೂರು ಪ್ರದೇಶದಲ್ಲಿ ಹಾಗಿರಬಹುದು. ಕೆಲವು ಹೊಸ ಪ್ರದೇಶದಲ್ಲಿ ಅದು ಚೆನ್ನಾಗಿ ನಡೆಯುತ್ತಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದೇ ವಿಚಾರವನ್ನೇ ನಾನು ಹೇಳುತ್ತಿದ್ದೇನೆ. ಒಂದೊಂದು ಕಡೆ ಇದು ಒಂದೊಂದು ರೀತಿಯಲ್ಲಿರುತ್ತದೆ. ಎಲ್ಲ ಪ್ರದೇಶಕ್ಕೂ ಒಂದೇ ರೂಲನ್ನು ಅನ್ವಯಿಸಿದಲ್ಲಿ ಕೆಲವು ಭಾಗಕ್ಕೆ ಅನುಕೂಲವಾಗಬಹುದು; ಕೆಲವು ಭಾಗಕ್ಕೆ ಅನಾನುಕೂಲವಾಗಬಹುದು. ಹೀಗೆ ನಾನು ಕೇವಲ ಇರತಕ್ಕ ವಿಚಾರಗಳನ್ನು ತಿಳಿಸುತ್ತಿದ್ದೇನೆಯೇ ಹೊರತು ಈ ಬಗ್ಗೆ ವಾದವನ್ನೇನೂ ಮಾಡುತ್ತಿಲ್ಲ.

7 P.M.

ಮತ್ತು ಇನ್ನೂ ಕೆಲವು ಸಂದರ್ಭಗಳಲ್ಲಿ ಕಂಟ್ರಾಕ್ಟರುಗಳು ಇಲ್ಲದಿರುವ ಕಡೆಗಳಲ್ಲಿ ಪೀಸ್‌ವರ್ಕನ್ನು ಮಾಡದೆ ಗತ್ಯಂತರವಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಟೆಂಡರನ್ನು ಕರೆಯದೇ ಪರ್ಸೆಂಟೇಜಿನ ಮೇಲೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಈ ಸಲಹೆಯನ್ನು ನೀವೇನೋ ಮಾಡಿದ್ದೀರಿ. ಎಷ್ಟರಮಟ್ಟಿಗೆ ಸಾಧ್ಯವೋ ಅದನ್ನು ನಾನು ಇಂಜಿನೀಯರುಗಳನ್ನು ಕೇಳಿ ಪರಿಶೀಲಿಸಬೇಕು.

ಹೀಗೆ ಅನೇಕ ಕಾರ್ಯ ನಿರ್ವಹಣೆ ಮಾಡುವುದರಲ್ಲಿ ಈ ಕೆಲವು ಕಾರಣಗಳಿಂದ ಕೆಲಸ ನಿಧಾನವಾಗುತ್ತಿದೆ. ಇದನ್ನು ಸರಿಪಡಿಸಲು ಅದಷ್ಟು ಪ್ರಯತ್ನ ಮಾಡುತ್ತೇವೆ ಎಂದು ತಮ್ಮಲ್ಲಿ ಬಹಳ ವಿನಯದಿಂದ ಹೇಳಿಕೊಳ್ಳಬೇಕಾಗಿದೆ.

ಇನ್ನು ಲಂಚದ ವಿಚಾರವಾಗಿ ಅನೇಕರು ಹೇಳಿದರು. ಎಲ್ಲ ಶಾಖೆಯಲ್ಲಿಯೂ ಇಲ್ಲದಷ್ಟು ಲಂಚ ಇಲ್ಲಿದೆ ಎಂದು ಹೇಳಿದರು. ಆದರೆ ಇಷ್ಟೇ ಇದೆ ಎಂದು ವಾದ ಮಾಡಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಹಿಂದೆ ಇದ್ದಷ್ಟು ಲಂಚ ಈಗ ಇಲ್ಲ ಎಂದು ಹೇಳಬಹುದು. ಅದಕ್ಕೆ ಕಾರಣ ಈಗ ಬರತಕ್ಕ ವಿದ್ಯಾವಂತರು ಸ್ವಲ್ಪ ದೇಶಾಭಿಮಾನದಿಂದ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಪೂರ್ತಿಯಾಗಿ ಇಲ್ಲವೇ ಇಲ್ಲ ಎಂದು ನಾನು ಧೈರ್ಯದಿಂದ ಹೇಳಲಾರೆ. ಇದನ್ನು ಸರ್ಕಾರದ ಗಮನಕ್ಕೆ ತಂದಾಗ ಅನೇಕ ಜನರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಕೆಲವರಿಗೆ ಪ್ರಮೋಷನ್ನನ್ನು ನಿಲ್ಲಿಸಿದೆ. ಕೆಲವರಿಗೆ ಬೇರೆ ರೀತಿಯಾದ ಶಿಕ್ಷೆಯನ್ನು ವಿಧಿಸಲಾಗಿದೆ. ಇದರಲ್ಲಿ one-way traffic ಏನೂ ಇಲ್ಲ. ಲಂಚ ಕೊಡುವುದೇ ಇಲ್ಲ ಎಂತಲೂ ಹೇಳುವುದಕ್ಕಾಗುವುದಿಲ್ಲ. ಕೆಲವರಿಗೆ ಲಂಚ ಕೊಟ್ಟರೆ ಅವರ ಕೆಲಸ ಬೇಗ ಆಗಲಿ ಎನ್ನುವ ಭಾವನೆಯಿಂದ ಕೊಡುತ್ತೇವೆಂದು ಹೇಳುವವರೂ ಇದ್ದಾರೆ. ಇನ್ನು ಕೆಲವು ಕಡೆ ಲಂಚ ಕೊಡದಿದ್ದರೂ ಬಹಳವಾದ ಲಂಚವನ್ನು ಕೊಡುತ್ತಿದ್ದೇವೆಂದು ಸುಮ್ಮನೆ false report ಕಳುಹಿಸುತ್ತಾರೆ ಎಂದು ಹೇಳುತ್ತಾರೆ. ಹೀಗೆ ಈ ಲಂಚದಲ್ಲಿ ಎರಡು ಕೈಗಳು ಇರಲೇಬೇಕು. ಸಾಮಾನ್ಯವಾಗಿ ನಮ್ಮ ಪ್ರತಿನಿಧಿಗಳು ಇದರಲ್ಲಿ "Moral Standard" ಎಂದು ಸ್ವಲ್ಪ ಜಾಸ್ತಿಯಾಗಿ ಹೇಳುತ್ತಾರೆ. ಒಟ್ಟಿನಲ್ಲಿ ಇರತಕ್ಕ ಅಂಶವನ್ನು ನಾವು ಒಪ್ಪಿಕೊಳ್ಳುತ್ತೇವೆ. ಸುಮ್ಮನೆ ಮುಗುಂ ಆಗಿ ಯಾರನ್ನೂ ಶಿಕ್ಷೆ ಮಾಡುವುದಕ್ಕೆ ಆಗುವುದಿಲ್ಲ, ಮಾನ್ಯ ಸ್ನೇಹಿತರು ಹೇಳಿದ ಹಾಗೆ ಕೆಲವು ಸಂದರ್ಭಗಳಿವೆ. ಈಗ ಮಾನ್ಯ ಸ್ನೇಹಿತರಾದ ಶ್ರೀ ರೇವಣ್ಣಸಿದ್ಧಪ್ಪನವರು ಹೇಳಿದಂತಹ ಜಾಗದಲ್ಲಿ ಅಲ್ಲಿ ವಿಚಾರಣೆ ನಡೆಸಿ ಅಲ್ಲಿನ ಅಧಿಕಾರಿಗಳನ್ನು ಈಗಾಗಲೇ ಸಸ್ಪೆಂಡು ಮಾಡಲಾಗಿದೆ. ಹಾಗೆ ನಮ್ಮ ಮಾನ್ಯ ಶ್ರೀ ಜಿ. ಎನ್. ಪುಟ್ಟಣ್ಣನವರು ನನ್ನ ಗಮನಕ್ಕೆ ಕೆಲವು ವಿಷಯಗಳನ್ನು ತಂದರು. ಅದರಲ್ಲಿ ಅರ್ಧಭಾಗ ಸತ್ಯಾಂಶದಿಂದ ಕೂಡಿದೆ ಎಂದು ತಿಳಿದು ಬಂದಿದೆ. ಅದನ್ನು ಇನ್ನೂ ವಿಮರ್ಶೆ ಮಾಡುವುದು ಉಳಿದಿದೆ. ಹೀಗೆ ವಿಚಾರ ಮಾಡುತ್ತಿದ್ದೇವೆ. ಹಿಂದೆ ಮೂಕರ್ಜಿಗಳನ್ನು ವಿಚಾರಿಸುತ್ತಿರಲಿಲ್ಲ. ಆದರೆ ನಾನು ಬಂದ ಮೇಲೆ ಯಾವ ಅರ್ಜಿಗಳಾದರೂ ಸರಿ, ಅದು ಟೈಪಾಗಿರಲಿ, ಇಲ್ಲದಿರಲಿ, ಮೂಕರ್ಜಿಯಾಗಿರಲಿ ಎಲ್ಲವನ್ನೂ ಕೂಲಂಕಷವಾಗಿ ವಿಮರ್ಶೆ ಮಾಡದೆ ಇರುವುದಿಲ್ಲ. ಈ ರೀತಿ ಕೆಲಸ ಮಾಡುತ್ತಿದ್ದೇವೆ. ಹೀಗೆ ಆಫೀಸಿನಲ್ಲಿ ಕೆಲಸ ಮಾಡುವವರು ತಕ್ಕಮಟ್ಟಿಗೆ ಬುದ್ಧಿವಂತಿಕೆಯಿಂದ ಮಾಡುತ್ತಿದ್ದಾರೆ. ಅವರೇನೂ ಅಷ್ಟು ದಡ್ಡರೇನೂ ಅಲ್ಲ. ಅದರೂ ಇದನ್ನು ಕಂಡು ಹಿಡಿಯುವುದು ಕಷ್ಟ. ಅನೇಕ ದಾರಿಗಳಿಂದ ಪತ್ತೆ ಹಚ್ಚಿ ಕೆಲಸ ಮಾಡಲಾಗುತ್ತಿದೆ. ಸರಕಾರದವರು ಯಾರ ಮೇಲೆಯೂ ದಾಕ್ಷಿಣ್ಯವನ್ನು ತೋರಿಸದೆ ತುಂಬ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ನಾನು ಇಲ್ಲಿ ಹೇಳುತ್ತೇನೆ.

ಇನ್ನು ಡೆವಲಪ್‌ಮೆಂಟ್ ಕೆಲಸಗಳು ನಿಧಾನವಾಗುತ್ತಿದೆ ಕೆಲಸವಾಗುತ್ತಿಲ್ಲ ಎಂದು ಹೇಳಿದರು. ಈ ವರ್ಷ ಎಷ್ಟು ಕೆಲಸವಾಗಿದೆ, ಸಾಲಿನಿಂದ ಸಾಲಿಗೆ ಮಾಡಿರುವ ಕೆಲಸಗಳ ಅಂಕಿಅಂಶಗಳಿಂದ ಎಷ್ಟು ಮೈಲಿಗಳ ರೋಡು ಆಗಿದೆ, ಹೋದ ವರ್ಷ ಎಷ್ಟು ಆಗಿತ್ತು ಮತ್ತು ಇನ್ನು ಮುಂದೆ ಎಷ್ಟು ಕೆಲಸ ಮಾಡಬೇಕಾಗಿದೆ ಎನ್ನುವ ರಿಪೋರ್ಟು ಬಂದಿದೆ. ಅದನ್ನು ಇಲ್ಲಿ ಹೇಳಲು ಅದು ಒಂದು ದೊಡ್ಡ ಪಟ್ಟಿಯೇ ಆಗುತ್ತದೆ. ಅದರಿಂದ ನನ್ನ ಮನಸ್ಸಿಗೆ ಸರಿಯಾಗಿ ಕೆಲಸ ನಡೆಯುತ್ತಿದೆ ಎನ್ನುವುದು ಖಚಿತವಾಗಿದೆ. ಇದರ ಪ್ರಕಾರ ನೋಡಿದರೆ ಕೆಲಸವೇನೂ ನಿಧಾನವಾಗಿಲ್ಲ. ನಾವು ನಿರೀಕ್ಷೆಮಾಡಿದ್ದಕ್ಕಿಂತ ಹೆಚ್ಚು ಕೆಲಸ ನಡೆದಿದೆ ಎನ್ನುವುದನ್ನು ತೋರಿಸಲು ಒಂದು ನಿದರ್ಶನ ಕೊಡುತ್ತೇನೆ. 1-11-56ರವರೆಗೆ 99,700 ಪತ್ರಗಳನ್ನು ಪರಿಶೀಲನೆ ಮಾಡಿದೆ ಸುಮಾರು ಒಂದು ಲಕ್ಷ ಪತ್ರಗಳು 31-3-58ರವರಿಗೆ ಬಂದವು. ಅವುಗಳನ್ನೆಲ್ಲ ಸರ್ಕಾರ ಗಮನ ಕೊಟ್ಟು ತನಿಖೆ ಮಾಡಲು ತೊಡಗಿದೆ. ಅಲ್ಲದೆ ಈ ಕಾಗದ ಪತ್ರಗಳಲ್ಲಿ ಎಷ್ಟೋ ಕಡೆ ರಸ್ತೆಗಳಿಲ್ಲ, ಸೇತುವೆಗಳಿಲ್ಲ, ಎಷ್ಟೋ ಕಡೆ ಕೆರೆಗಳು ರಿಪೇರಿಯಾಗಿಲ್ಲ ಎಂಬುದಾಗಿ ಇವೆ. ಈ ಪ್ರಕಾರ ಎಷ್ಟೋ ವಿಚಾರಗಳಿರುವುದನ್ನು ಸರ್ಕಾರದವರು ಮನವರಿಕೆ ಮಾಡಿಕೊಂಡಿದ್ದಾರೆ. ಆದರೆ ಇದರಿಂದ ಕೆಲಸವೇನೂ ನಿಧಾನವಾಗಿಲ್ಲ. ಆದರೂ ಎಷ್ಟು ಆಗಬೇಕು ಎಂದು ಇದರೊಳಗೆ ಇದೆಯೋ ಅಷ್ಟು ದೂರ ಹೋಗಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಕೆಲವು ಕಾರಣಗಳಿವೆ.

ಇನ್ನು ಪ್ರಾಮುಖ್ಯವಾದ ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದಕ್ಕೆ ಉತ್ತರ ಹೇಳಿ ಮುಗಿಸಬೇಕೆಂದು ಇದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೇಂದ್ರ ಸರ್ಕಾರದ ಗ್ರಾಂಟನ್ನು ಉಪಯೋಗಿಸಿಕೊಂಡು ಸಂಸ್ಥಾನ ಸರ್ಕಾರದ ಗ್ರಾಂಟನ್ನು ಉಳಿಸಿಕೊಳ್ಳುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—State Government Grant, Central Government Grant ಎಂದು ಬೇರೆ ಬೇರೆ ಇಲ್ಲ. ಕೇಂದ್ರ ಸರ್ಕಾರದವರು ಕೊಡುವುದನ್ನು consolidated ಫಂಡಿಗೆ ತೆಗೆದುಕೊಂಡು ಆಮೇಲೆ ಬೇರೆ ಬೇರೆ ಲೆಕ್ಕಕ್ಕೆ ಖರ್ಚು ಹಾಕುತ್ತೇವೆ. ಬೇರೆ ಕೊಟ್ಟಿರುವುದಿಲ್ಲ. ಅವರು ಕೊಡುವ ಆರು ಕೋಟಿ ರೂಪಾಯಿಗಳನ್ನು ನಮ್ಮಲ್ಲಿ ಉತ್ಪತ್ತಿ ಎಂದು ತೋರಿಸಿದ್ದೇವೆ.

ಹಣವನ್ನು ಹಂಚುವುದರಲ್ಲಿ ವ್ಯತ್ಯಾಸವಾಗಿದೆ ಎಂದು ಹೇಳಿದರು ಇದನ್ನು ಕಾರಣವಿಲ್ಲದೆ ಹೇಳಿದರು ಎಂದು ತಿಳಿಸಬೇಕಾಗಿದೆ. ತಾಲ್ಲೂಕುವಾರು ಮತ್ತು ಜಿಲ್ಲಾವಾರು ಹಂಚುವಾಗ ಸರ್ಕಾರದ ಅಂತಸ್ತಿನಲ್ಲಿ ಮಾಡುವುದಿಲ್ಲ. ನಾವು ಹಣವನ್ನು ಒಟ್ಟಿಗೇ ಕೊಡುತ್ತೇವೆ. ಅದನ್ನು break up ಮಾಡಿ ಚೀಫ್ ಇಂಜಿನಿಯರು ಬೇರೆ ಬೇರೆ ಸರ್ಕಲ್‌ಗಳಿಗೆ ಕೊಡುತ್ತಾರೆ. ಅಲ್ಲಿಂದ ಡಿವಿಷನ್‌ಗಳಿಗೆ ಕೊಡುತ್ತಾರೆ, ಡಿವಿಷನ್‌ಗಳಿಂದ ಸಬ್ ಡಿವಿಷನ್‌ಗಳಿಗೆ ಕೊಡುತ್ತಾರೆ. ಹಣವನ್ನು ಎಲ್ಲ ತಾಲ್ಲೂಕುಗಳಿಗೂ ಸಮವಾಗಿ ಹಂಚಬೇಕು ಎಂದರೆ ಕೆಲವು ಕಡೆಗಳಲ್ಲಿ ಕೆಲಸವಿರಬಹುದು, ಕೆಲವು ಕಡೆ ಇಲ್ಲದೆ ಇರಬಹುದು.

ಶ್ರೀ ಯು. ಎಂ. ಮಾದಪ್ಪ.—Unsanctioned works ಎಂದು lumpsum grant ಕೊಟ್ಟಿದ್ದೀರಿ. ಇದರಲ್ಲಿ ವ್ಯತ್ಯಾಸವಾಗುತ್ತದೆ. ಆದುದರಿಂದ ಸ್ಯಾಂಕ್ಷನ್ ಆದ ಕೆಲಸಗಳಿಗೆ ಮಾತ್ರ ಹಣವನ್ನು ಒದಗಿಸಬೇಕು.

ಶ್ರೀ ಕೆ. ಎಲ್. ನರಸಿಂಹಯ್ಯ.—ಎಕ್ಸಿಕ್ಯೂಟಿವ್ ಇಂಜಿನಿಯರುಗಳು ದೊಡ್ಡ ದೊಡ್ಡವರು ಹೋದರೆ ಹೆದರಿಕೊಳ್ಳುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲರೂ ಹಾಗೆ ಮಾಡುತ್ತಾರೆಂದು ಒಪ್ಪಿಕೊಳ್ಳುವುದಿಲ್ಲ. ಅಧಿಕಾರಿಗಳು ದಾಕ್ಷಿಣ್ಯಕ್ಕೆ ಒಳಗಾಗಬೇಕಾಗಿಲ್ಲ. ಇದ್ದರೆ ಈ ಊರು, ಹೋದರೆ ಮುಂದಿನ ಊರು, ಆದ್ದರಿಂದ ಅವರು ಏಕೆ ಹೆದರಬೇಕು, ಸಾಧ್ಯವಾದಮಟ್ಟಿಗೆ ಪ್ರಭಾವ ಬೀರುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡೋಣ.

ಮಾದಪ್ಪನವರು ಹೇಳಿದ ವಿಚಾರದಲ್ಲಿ Nature of work ಮೇಲೆ ಎಲ್ಲ ಅವಲಂಬಿಸುತ್ತದೆಂದು ಅಂದುಕೊಂಡಿದ್ದೇನೆ.

ಶ್ರೀಮಾನ್ ಲಿಂಗಾರೆಡ್ಡಿಯವರು ಮೈನರ್ ಇರಿಗೇಷನ್ ಬಗ್ಗೆ ಹೇಳಿದರು. ಇದಕ್ಕೆ ಒಂದು ಪ್ರೋಗ್ರಾಂ ಇದೆ. ಸ್ಪೆಷಲ್ ಸಿಬ್ಬಂದಿ ಕೊಟ್ಟಿದ್ದೇವೆ. ಸ್ಪೆಷಲ್ ಸಿಬ್ಬಂದಿಯನ್ನು ಈ ಕೆಲಸಕ್ಕಾಗಿ ನೇಮಿಸಿದ ಮೇಲೂ ಸಹ ಸ್ವಲ್ಪ ನಿಧಾನವಾಗಿದೆ. ಎಲ್ಲೆಲ್ಲಿ ಕೆಲಸವಾಗುವ ಅಗತ್ಯವಿದೆ ಎಂದು ನೋಡಿಕೊಂಡು ಆರ್ಡರ್ ಮಾಡಿದರೆ ಕೆಲಸಮಾಡಲು ಆಗುವುದಿಲ್ಲ. ಫೈನಾನ್ಸ್ ಇಲಾಖೆಗೆ ಹೋಗಬೇಕು. ಎಲ್ಲರೂ ಒಪ್ಪಿಕೊಂಡಮೇಲೆ ನಮ್ಮ ಹತ್ತಿರ ಬರುತ್ತದೆ. ಅದರಿಂದ ಸ್ವಲ್ಪ ನಿಧಾನವಾಗುತ್ತದೆ. ಸರ್ಕಾರದ ಅಂತಸ್ತಿನಲ್ಲಿ ಸ್ಪೆಷಲ್ ಸಿಬ್ಬಂದಿಯನ್ನು ಮಂಜೂರು ಮಾಡಿದ್ದೇವೆ. ಆದರೆ ಕೆಲವುಕಡೆ ಆಸಾಮಿಗಳು ಹೋಗಿ ಕೆಲಸದಮೇಲೆ ಹಾಜರಾಗಲು ರಿಪೋರ್ಟ್ ಮಾಡಿಕೊಂಡಿಲ್ಲವೆಂದು ತಿಳಿದುಬಂದಿದೆ. ಸಿಬ್ಬಂದಿಯನ್ನು ಹೆಚ್ಚುಮಾಡಬೇಕು, ಹಣ ಲ್ಯಾಪ್ಸ್ ಆಗಿದೆ ಎಂದು ಹೇಳುವುದು ಸರಿಯಲ್ಲ. ಜೂನ್ ತಿಂಗಳ ಆಖೈರುವರೆಗೂ ಮಳೆಗಾಲ ಹೆಚ್ಚಾಗಿರುವುದಿಲ್ಲವಾದ್ದರಿಂದ ಕಡಮೆ ಹಣ ಖರ್ಚಾದರೆ ಅಂಥ ಸಂದರ್ಭಗಳಲ್ಲಿ ಉಳಿದಿರುವ ಹಣವನ್ನು ಮುಂದಕ್ಕೆ ಖರ್ಚುಮಾಡುವುದಕ್ಕೆ ಅವಕಾಶ ಕೊಡಿ. ಐವತ್ತು ಲಕ್ಷ ರೂಪಾಯಿಗಳನ್ನೂ ಜೂನ್ ಆಖೈರಿನೊಳಗಾಗಿ ಖರ್ಚುಮಾಡಲು ಪ್ರಯತ್ನ ಮಾಡುತ್ತೇವೆ. ಹಣ ಲ್ಯಾಪ್ಸ್ ಆಗುವುದಿಲ್ಲ. ಜೂನ್ ತಿಂಗಳಿನಿಂದೀಚೆಗೆ ಒಟ್ಟು ಎರಡು ಕೋಟಿ ರೂಪಾಯಿಗಳನ್ನು ಮೈನರ್ ಇರಿಗೇಷನ್ ಕೆಲಸಗಳಿಗೆ ಖರ್ಚುಮಾಡಬೇಕು ಎಂದು ಪ್ರೋಗ್ರಾಂ ಹಾಕಿಕೊಂಡಿದ್ದೇವೆ, ಮತ್ತು ಆ ಪ್ರಕಾರ ಮಾಡುತ್ತಿದ್ದೇವೆಂದು ಶ್ರೀಮಾನ್ ಲಿಂಗಾರೆಡ್ಡಿಯವರಿಗೆ ಭರವಸೆಯನ್ನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಮಾಗಡಿ ತಾಲ್ಲೂಕಿನ ವಿಚಾರದಲ್ಲಿ ಶ್ರೀಮಾನ್ ಟಿ. ಡಿ. ಮಾರಣ್ಣನವರು, ಮಿರ್ಜಾ ಸಾಹೇಬರ ಕಾಲದಿಂದ ಕೆಲಸ ನಡೆದಿಲ್ಲವೆಂದು ಹೇಳಿದರು. ಹಿಂದೆ ಇಷ್ಟು ಪರ್ಸೆಂಟ್ ಆದಾಯ ಬರಬೇಕು ಎಂದು ನಿಯಮವನ್ನು ಹಾಕಿಕೊಂಡಿದ್ದರು. ಅದರ ಪ್ರಕಾರ ಬಡ್ಡಿ ಗಿಟ್ಟಿದರೆ ಮಾತ್ರ ಕೆಲಸವನ್ನು ತೆಗೆದುಕೊಳ್ಳುತ್ತಿದ್ದರು. ಹಣದ ಅಭಾವವಿತ್ತು. ಸಾಲ ಸಿಕ್ಕುತ್ತಿರಲಿಲ್ಲ. ಈಗ ಸಾಲವಾದರೂ ಸಿಕ್ಕುತ್ತದೆ. ಕೆಲವುವೇಳೆ Remunerative ಆಗಿರಲಿ, Unremunerative ಆಗಿರಲಿ, ಒತ್ತಾಯದಿಂದ ಕಟ್ಟಿಸಬೇಕಾಗುತ್ತದೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ವಿನಾ ಸಣ್ಣ ಸಣ್ಣ ಪ್ರಾಜೆಕ್ಟ್‌ಗಳಲ್ಲಿ ಶೇಕಡಾ 2 ರಂತೆ ಬಂದರೂ ಸಾಕು, Productive Work ಎಂದು ತೆಗೆದುಕೊಳ್ಳಬೇಕು ಎನ್ನುವ ನೀತಿಯನ್ನು ಸರ್ಕಾರ ಅನುಸರಿಸುತ್ತಿರುತ್ತದೆ.

ಶ್ರೀ ಬಿ. ವಿ. ದೇಸಾಯಿ.—Remunerative ಆಗಿರುವುದು Unremunerative ಆಗುತ್ತದೆ. ಮತ್ತು Unremunerative ಆಗಿರುವುದು Remunerative ಆಗುತ್ತದೆ. ಇದರ ಬಗ್ಗೆ ಏನಾದರೂ ನೀತಿ ಇದೆಯೇ ಎಂದನ್ನಿಸುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಕಷ್ಟವಾಗುವುದಿಲ್ಲ. ಬಡ್ಜೆಟ್ಟಿನಿಂದಲೇ ಅದು ಗೊತ್ತಾಗುತ್ತದೆ. ಆದ್ದರಿಂದ ಮಾರಣ್ಣನವರು ಹೇಳಿದ್ದನ್ನು ಎರಡು ಸಾರಿ drop ಮಾಡಿದರೂ ಮತ್ತೆ ವಿಮರ್ಶೆ ಮಾಡಿ ನೋಡೋಣವೆಂದು ಇಟ್ಟುಕೊಂಡಿದ್ದೇವೆ. ಅದು Scarcity Area. ಮಳೆಗಾಲದಲ್ಲಿ ಬಹಳ ಕಷ್ಟ. ಈ ದೃಷ್ಟಿಯಿಂದ ಅದನ್ನು Protective Works ಎಂದೇಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ನೋಡುತ್ತೇವೆ.

Desilting of tanks ವಿಚಾರದಲ್ಲಿ ಶ್ರೀಮಾನ್ ಹನುಮಂತಪ್ಪನವರು ಮತ್ತು ಮುಕ್ಕಣ್ಣಪ್ಪನವರು ಒಂದು ಅಭಿಪ್ರಾಯ ಹೇಳಿದರು. Desilting ಪ್ರಯೋಜನವಿಲ್ಲವೆಂದು ಗೊತ್ತಾಗಿದೆ. ರೈತರೇ ಸಾಮಾನ್ಯವಾಗಿ ಗೋಡು, ಮಣ್ಣು—ಹೊಡೆಸುತ್ತಿರುತ್ತಾರೆ. ಸರ್ಕಾರದವರು ಸ್ವಲ್ಪ ಉತ್ತೇಜನ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳಿದರು. ನೋಡೋಣ. ಬುಲ್‌ಡೋಸರ್‌ನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬೇಗ ಸಾಗಿಸುವುದಕ್ಕಾಗುವುದಿಲ್ಲ. ಆಯಾ ಕೆರೆಯ ಅವಶ್ಯಕತೆ ನೋಡಿಕೊಂಡು. . . . .

ಒಬ್ಬ ಸದಸ್ಯರು.—ವರ್ಷೇ ವರ್ಷೇ ರೈತರು ತಮ್ಮ ಫೈಕೆ ತಾವೇ ಗೋಡು ಗೊಬ್ಬರ ರೂಪದಲ್ಲಿ ಕೆರೆಯ ಮಣ್ಣನ್ನು ಉಪಯೋಗಿಸುತ್ತಿರುತ್ತಾರೆ. ಒಂದೆರಡು ಸಾವಿರ ರೂಪಾಯಿಗಳ ಗೋಡು ಈ ರೀತಿ ಸಾಗುತ್ತಿರುತ್ತದೆ. ಸರ್ಕಾರದವರು 10,000 ರೂಪಾಯಿ

(ಒಬ್ಬ ಸದಸ್ಯರು)

ಗಳನ್ನು ಕೊಟ್ಟರೂ ವರ್ಷೇ ವರ್ಷೇ ಎಷ್ಟು ತೆಗೆಯುತ್ತಾರೋ ಅಷ್ಟೇ ತೆಗೆಯುತ್ತಾರೆಯೇ ಹೊರತು ಅದಕ್ಕಿಂತ ಹೆಚ್ಚಿಗೆ ತೆಗೆಯುವುದಿಲ್ಲ. ಆದ್ದರಿಂದ Desiltingಗೆ ಈ ರೀತಿ ಹೆಚ್ಚಿಗೆ ಹಣ ಉಪಯೋಗಿಸುವುದು ವ್ಯರ್ಥವೆಂದು ಹೇಳುತ್ತೇನೆ. ಅಲ್ಲದೆ, Desiltingಗೆಂದು 50 ಅಧಿಕಾರಿಗಳು ಹೋದರೆ, ಅವರಿಗೆ T.A. ಕೊಡುವುದು, ಅವರು ಮಾಡತಕ್ಕ ಕೆಲಸ ಪರಿಗಣಿಸಿದರೆ ಯಾವ Engineer ಕೂಡ Desilting ಮಾಡಬೇಕೆಂದು ಹೇಳಲಾರರು.

ಶ್ರೀ ಎಚ್. ಕೆ. ವೀರಣ್ಣಗೌಡ.—Desilting ಮಾಡಕೂಡದೆಂದು ಸರ್ಕಾರದವರೇ ತೀರ್ಮಾನಮಾಡಿದ್ದಾರೆ. ಈಗೇನೋ ನಾಗಮಂಗಲದಲ್ಲಿ ಮಾಡುತ್ತಿದ್ದಾರೆಂದು ಹೇಳಿದರು. ಈ ವಿಚಾರದಲ್ಲಿ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಈಗ ಸರ್ಕಾರದಲ್ಲಿ Desilting ಮಾಡಬೇಕೆಂಬ ನೀತಿಯೇನೂ ಇಲ್ಲ. ಶ್ರೀಮಾನ್ ಘಟ್ಟಸ್ವಾಮಿಯವರು, Low Level Canal ನ್ನು ರಿಪೇರಿ ಮಾಡಬೇಕೆಂದು ಹೇಳಿದರು. ಇದನ್ನು ಯೋಚನೆ ಮಾಡುತ್ತೇವೆ. C.D.S. ಚಾನಲ್ ಒಟ್ಟು ಪ್ರಶ್ನೆ ಕೂಡ ಇದೆ. ಕ್ರಮೇಣ ಒಂದು ದೊಡ್ಡ Programme ಹಾಕಿಕೊಂಡು ಇದನ್ನೆಲ್ಲಾ ಮಾಡಬೇಕಾಗುತ್ತದೆ.

ಮದ್ರಾಸಿಗೂ ಮತ್ತು ಮೈಸೂರಿಗೂ ಆಗಿರುವ ಒಪ್ಪಂದದ ವಿಷಯದಲ್ಲಿ ಕಣ್ಣುಮುಚ್ಚಿಕೊಂಡು ಕುಳಿತಿದ್ದಾರೆಂದು ಹೇಳಿದರು, ಹಾಗೇನಿಲ್ಲ. ಮದ್ರಾಸ್ ಸರ್ಕಾರದವರು ಒಪ್ಪಿದ್ದರೂ ಅವರು ಉತ್ತರ ಕೊಡುವುದರಲ್ಲಿ ಹಿಂದು ಮುಂದು ನೋಡುತ್ತಿದ್ದಾರೆ. ಇತ್ತೀಚೆಗೆ ಪತ್ರವ್ಯವಹಾರ ನಡೆಸಿ revise ಮಾಡಬೇಕೆಂದು ಹೇಳುತ್ತಿದ್ದೇವೆ. ಅವರಿಗೆ ಇದು ಅಷ್ಟು ಪ್ರಯೋಜನಕಾರಿಯಾಗಿಲ್ಲದಿರುವುದರಿಂದ ಅವರು ಉದಾಸೀನರಾಗಿದ್ದಾರೆ. ಆದ್ದರಿಂದ ಒಳ್ಳೆಯ ಮಾತಿನಿಂದ ಜೊತೆಯಲ್ಲಿ ಸೇರಿ ಪರಿಹಾರಮಾಡಿಕೊಳ್ಳುವುದು ಯೋಚನೆಯಲ್ಲಿದೆ.

ಆಮೇಲೆ ಅವರು ಕೇಳಿದರು. ಕಾವೇರಿಯ Valley ಯಲ್ಲಿ ಹೆಚ್ಚಿಗೆ ಮಾಡುವುದಕ್ಕೆ ಅವಕಾಶವಿದೆ, ಆಬಗ್ಗೆ ಏನು ಮಾಡಿದ್ದೀರಿ ಎಂದು ಕೇಳಿದರು. ಆ ಬಗ್ಗೆಯೂ ಕಾರ್ಯಕ್ರಮ ಕೈಕೊಂಡಿದ್ದೇವೆ. ನುಗು ರಿಸರ್ವಾಯಿರ್, ಕಪಿಲಾ ರಿಸರ್ವಾಯಿರ್ ವಿಚಾರ ಪ್ರಸ್ತಾಪಿಸಿದರು. ನುಗು ರಿಸರ್ವಾಯರ್ ಕೈಕೆಳಗೆ 1,10,000 ಎಕರೆಗಳನ್ನು ಕೈಕೊಳ್ಳುವ ಯೋಚನೆಯಿದೆ. ವಿಶ್ವೇಶ್ವರಯ್ಯ ನಾಲಾವನ್ನೂ ಮಿತವ್ಯಯದಿಂದ ಉಪಯೋಗಿಸಿದರೆ ಇನ್ನೂ ಹೆಚ್ಚಿಗೆ ಮಾಡಬಹುದೆಂದು ಹೇಳಿದರು. ಅಲ್ಲಲ್ಲಿ Pick-up Channel ಗಳನ್ನು ಮಾಡುವುದರಿಂದ ಇನ್ನೂ ಹತ್ತಿಪ್ಪತ್ತು ಸಾವಿರ ಎಕರೆಗಳನ್ನು ಮಾಡುವುದಕ್ಕೆ ಅವಕಾಶವಿದೆ. ಮುಂಚೆ ಮುಂಚೆ, ಆ ರೈತರು ಕಂದಾಯ, ಕಂಟ್ರಿಬ್ಯೂಷನ್, ಪ್ಲಾನ್, ಸಿಸ್ಟಮ್ಮು—ಎಲ್ಲವನ್ನೂ ವಿರೋಧಿಸಿದರು. ನಾನೇ ಕಾಲುನಡಗೆಯಲ್ಲಿ ಒಂದು ಚಳವಳಿ ನಡೆಸಿದ್ದೆ. ಆ ಕಾಲದಲ್ಲಿ ನೀತಿ ನಿಯಮವಿಲ್ಲದೆ ಯದ್ವಾ ತದ್ವಾ ನೀರು ಕೊಟ್ಟರು. ಅದನ್ನು ಒಂದು ಹತೋಟಿಗೆ ತರಬೇಕಾದರೆ ಬಹಳ ಕಷ್ಟವಾಯಿತು. 25 ವರ್ಷಗಳ ಹಿಂದೆ 1931ನೆಯ ಇಸವಿಯಿಂದ ರೈತರ ಅನುಭವ ತೆಗೆದುಕೊಂಡಿದೆ. ಆ ಮಾತು ಸತ್ಯವಾಗಿದೆ. ಪುಸ್ತಕದ ಕಾನೂನು ಸರಿಯಾಗಿಲ್ಲವೆಂದು ಮನವರಿಕೆಯಾಗಿದೆ. ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಪ್ಲಾನಿಂಗ್ ಪ್ರೋಗ್ರಾಮ್ ವಿಚಾರ ಹೇಳಿ, 25 ವರ್ಷದಿಂದ ಕಬ್ಬು ಬೆಳೆದು ಸಕ್ಕರೆ ಕಂಪನಿಗೆ ಕೊಡುತ್ತಿದ್ದಾರೆಂದು ಹೇಳಿದರು. ಈಗ ಒಂದು ಹೊಸ ವ್ಯವಸ್ಥೆ ಬಂದಿದೆ; ಬಾಕಿಯವರಿಗೆಲ್ಲಾ ತಪ್ಪಿಸಿ ಎಂದು ಬಂದಿದೆ. ನಾನು ಮಂತ್ರಿಯಾಗುವುದಕ್ಕೆ ಮುಂಚೆಯೇ, ಮತ್ತೆ ಪಾದಯಾತ್ರೆಮಾಡಬೇಕಾದೀತು ಎಂದುಎಚ್ಚರಿಕೆ ಕೊಟ್ಟೆ. ಶ್ರೀ ಮಂಜಪ್ಪನವರು ಮಿನಿಸ್ಟರ್ ಆಗಿದ್ದಾಗ ಜಾರಿಗೆ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ. ನಾನು ಮಿನಿಸ್ಟರ್ ಆದಾಗ್ಯೆ ಪಾಯಿದೆ ಮುಗಿಯುತ್ತಾ ಬಂದಿತು. ಈ ವಿಷಯವನ್ನು ಬೋರ್ಡಿಗೆ ಕಳುಹಿಸಿದ್ದಾರೆ. ಇದು ತೀರ್ಮಾನವಾಗಿ, ಜೋನ್ ಮಾಡಿ, ಒಬ್ಬೊಬ್ಬರಿಗೆ ನೀರು ಕೊಡುವುದನ್ನು ನಿಲ್ಲಿಸಿ, ನೀರು ಇರುವಹಾಗೆ ಮಾಡಿದರೆ, ಟೇಲ್ ಎಂಡ್ ಲ್ಯಾಂಡ್‌ಗಳ ತನಕ ಬರುತ್ತದೆ. ಸರ್ಕಾರದವರು ಇದನ್ನು ಪರೀಕ್ಷಾರ್ಥವಾಗಿ ನೋಡುತ್ತಾರೆ. 20-30 ವರ್ಷಗಳಿಂದಲೂ ಅನೇಕ ರೀತಿಯ ಕಮಿಟಿಗಳಾಗಿವೆ. ನಾನೂ ಸಹ ಎರಡು ಮೂರು ಕಮಿಟಿಗಳಲ್ಲಿ ಸದಸ್ಯನಾಗಿ ಸಲಹೆ ಕೊಟ್ಟಿದ್ದೇನೆ. ಅದಕ್ಕೋಸ್ಕರ ಪ್ಲಾನಿಂಗ್ ಪ್ರೋಗ್ರಾಂ ಕಮಿಟಿಯವರು ತೀರ್ಮಾನ ಮಾಡಿ, ಕಮಿಟಿಯವರ ಸಲಹೆಯನ್ನು ಒಪ್ಪಿಕೊಂಡಿದ್ದಾರೆ. ಅದರಲ್ಲಿ ತಿದ್ದುಪಾಟುಗಳನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡುತ್ತೇನೆ.

ಶ್ರೀಮತಿ ಬಸವರಾಜೇಶ್ವರಿಯವರು ಮಾ ನಾಡುತ್ತಾ ರಾಯಚೂರ್‌ವರೆಗೂ ರಸ್ತೆಯನ್ನು ಆಸ್ ಫಾಲ್ಟ್ ಮಾಡುವ ಬಗ್ಗೆ ಕೇಳಿದ್ದಾರೆ. ನಾನು ಗುರ್ತು ಮಾಡಿಕೊಂಡಿದ್ದೇನೆ. ಶ್ರೀ ವೀರಪ್ಪನವರು ಮಾಡಿದ ಸಲಹೆಯನ್ನೂ ಗುರ್ತು ಹಾಕಿಕೊಂಡಿದ್ದೇನೆ ; ವಿಮರ್ಶೆ ಮಾಡಿ ನೋಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಎಂಟು ನೂರು ಕೋಟಿ ರೂಪಾಯಿಯ ಕೆಲಸ ಯಾವುದು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಂಟು ನೂರು ಕೋಟಿ ರೂಪಾಯಿಯಲ್ಲ. ಎಂಟೂವರೆ ಕೋಟಿ ರೂಪಾಯಿಯೋ, ಎಂಟೂವರೆ ಲಕ್ಷ ರೂಪಾಯಿಯೋ ಇರಬೇಕು. ಎರಡನೆಯ ಪ್ಲಾನಿನಲ್ಲಿ ಸೇರಿಸುವುದಕ್ಕೆ ಆಗುವುದಿಲ್ಲ. ಮೂರನೆಯ ಪ್ಲಾನಿಗೆ ಸೇರಿಸುವುದಕ್ಕೆ ಏರ್ಪಾಡು ಮಾಡಿದ್ದಾರೆ. ಅದಕ್ಕೆ ತಕರಾರು ಇತ್ತು. ಕನ್ನಂಬಾಡಿ, ತುಂಗಭದ್ರ ಅಣೆಕಟ್ಟುಗಳನ್ನು ಕಟ್ಟಬೇಕಾದರೂ ಸಹ ತಕರಾರು ಇದ್ದೀತು. ಬರಗಾಲದಲ್ಲಿ ಪ್ರಯೋಜನವಾಗುತ್ತದೆಂದು ಸರ್ಕಾರದವರು ಮನಗಂಡಿದ್ದಾರೆ. ಇದಕ್ಕೆ ಇಂಡಿಯಾ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಮೂರನೆಯ ಪ್ಲಾನಿನೊಳಗೆ ಇದನ್ನು ಸೇರಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಸರ್ಕಾರ ಮಾಡುತ್ತದೆ. ಶ್ರೀ ದೇಶಾಯಿಯವರು ಈ ಖಾತೆಗೆ ಇನ್ನೊಬ್ಬ ಮಂತ್ರಿಗಳು ಅಗತ್ಯವೆಂದು ಹೇಳಿದ್ದಾರೆ, ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಸೂಚಿಸುವುದಕ್ಕಾಗುವುದಿಲ್ಲ. . . .

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಚಿಕ್ಕನಾಯಕನಹಳ್ಳಿಯ ಹತ್ತಿರ ಮ್ಯಾಂಗನೀಸ್ ಗಣಿಗಳನ್ನು ತೋಡಿ ಬಿಟ್ಟು ದೊಡ್ಡ ದೊಡ್ಡ ಹಳ್ಳಗಳಾಗಿ ಅಲ್ಲಿ ನೀರು ತುಂಬುತ್ತಿದೆ, ಅದರ ವಿಚಾರ ಏನೂ ಹೇಳಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಅನೇಕ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀ ದೀನದಯಾಳು ನಾಯ್ಡುರವರು ಬೆಂಗಳೂರಿನಲ್ಲಿ ಕೆಲವು ರಸ್ತೆಗಳನ್ನು ನ್ಯಾಷನಲ್ ಹೈವೇಸ್ ಎಂದು ಮಾಡಿ ಮೈಸೂರ್ ರೋಡ್‌ಗಳನ್ನು ಸರ್ಕಾರ ಏಕೆ ವಹಿಸಿಕೊಳ್ಳಬಾರದೆಂದು ಸೂಚಿಸಿದರು. ಮೈಸೂರಿನಲ್ಲಿ ಹಾಗೆ ಮಾಡಿದ್ದಾರೆ, ಇಲ್ಲಿ ಏಕೆ ಹಾಗೆ ಮಾಡಬಾರ

ದೆಂದು ಕೇಳಿದರು. ಇದನ್ನು ಸರ್ಕಾರದಲ್ಲಿ ಯೋಚನೆ ಮಾಡಬೇಕು. ಮೈಸೂರು ನಗರದಲ್ಲಿರುವ ಊಟಿ ರಸ್ತೆ ಹೀಗಾಗಿದೆ, ಹಾಗೆಯೇ ಬೆಂಗಳೂರು ನಗರದಲ್ಲಿರುವ ಮದ್ರಾಸು—ಕನ್ನಾನೂರು ರಸ್ತೆಯನ್ನು ಏಕೆ ಮಾಡ ಬಾರದೆಂದು ಕೇಳುತ್ತಾರೆ. ಇದನ್ನು ಸರ್ಕಾರ ವಿಮರ್ಶೆ ಮಾಡಬೇಕಾಗುತ್ತದೆ. ಕಾರ್ಪೊರೇಷನ್ ಕಟ್ಟಡದ ವಿಚಾರವನ್ನೂ ಅವರು ಹೇಳಿದರು. ಕಾರ್ಪೊರೇಷನ್‌ನವರು ಹಣವನ್ನೊದಗಿಸಿ ಪ್ರಯತ್ನ ಪಟ್ಟರೆ ಸರ್ಕಾರ ಕಟ್ಟಿಸಿಕೊಡುತ್ತಾರೆ.

Sri V. P. DEENADAYALU NAIDU.—You must take a bold step.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಣವನ್ನೊದಗಿಸುವವರು ಯಾರು ?

Sri V. P. DEENADAYALU NAIDU.—They have asked only for a loan ; they have not asked for any grant.

Sri H. K. VEERANNA GOWDH.—It is up to them to expedite the matter with the Government and press. . . . .

Sri V. P. DEENADAYALU NAIDU.—Last time, there was a provision for rupees six lakhs for the same building, and then the formalities were incomplete. Now, formalities are complete, but there is no provision.

Sri H. K. VEERANNA GOWDH.—Perhaps they did not renew their request.

Sri V. P. DEENADAYALU NAIDU.—Now, resolutions have been passed. There is an omission. I just bring it to your notice.

Sri H. K VEERANNA GOWDH.—That is all right. ಇನ್ನು ನಗರದ ನೀರು ಸರಬರಾಯಿ ಯೋಜನೆಯ ವಿಚಾರ ಹೇಳಿದ್ದಾರೆ. ಈಗಾಗಲೇ ಈ ಸಭೆಯಲ್ಲಿ ಎರಡು ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಮೂವತ್ತು ಅಂಗುಲದ ಪೈಪುಗಳನ್ನು ಹಾಕಬೇಕೆಂದು ಯೋಜನೆ ಮಾಡಿ ಇಂಡಿಯಾ ಸರ್ಕಾರಕ್ಕೆ ಕಳುಹಿಸಿದ್ದೇವೆ. ಭದ್ರಾವತಿಯಲ್ಲಿ ಆ ಪೈಪುಗಳನ್ನು ತಯಾರು ಮಾಡಬೇಕು.

ಇನ್ನು ಜೋಡಿ ಕೆರೆಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದಿಂದ ಚೀಫ್ ಸೆಕ್ರೆಟರಿಯವರ ಮೂಲಕ ಒಂದು ಸರ್ಕ್ಯುಲರ್ ಹೊರಡಿಸಬೇಕೆಂದು ಕಾಣುತ್ತದೆ. ನಾನೇನಾದರೂ ಬಹಿರಂಗವಾಗಿ ಹೇಳಬೇಕಾದರೆ ನನ್ನ ಸ್ವಂತ ಜವಾಬ್ದಾರಿಯ ಮೇಲೆ ಹೇಳುವುದಿಲ್ಲ. ನನ್ನ ಸಹೋದ್ಯೋಗಿಗಳನ್ನು ಕೇಳಿ, ಅವರ ಅಭಿಪ್ರಾಯ ಪಡೆದು ಹೇಳುತ್ತೇನೆ. ಈ ಸಂಬಂಧದಲ್ಲಿಯೂ ಕೇಳಿದ್ದೇನೆ. ಅವರು ಅನುಮತಿ ಕೊಟ್ಟಿದ್ದಾರೆ. ಈಹೊತ್ತು ದೇಶದಲ್ಲಿ ಆಹಾರ ಹೆಚ್ಚಾಗಿ ಬೆಳೆಯಬೇಕಾಗಿದೆ. ಜೋಡಿದಾರರು ವೆಚ್ಚವನ್ನು ಕೊಡಬೇಕೆಂದು ಹೇಳಿದರು. ಅವರು ಕೊಡುವುದು ಅಥವಾ ಬಿಡುವುದು ಬೇರೆ ಮಾತು. ಅದು ಕಾನೂನಿನ ಪ್ರಶ್ನೆ. ಆದಕಾರಣ ಬಹುಶಃ ಸರ್ಕಾರದಿಂದ ಒಂದು ಆಜ್ಞೆಯನ್ನು ಹೊರಡಿಸಬೇಕೆಂದು ಕಾಣುತ್ತದೆ. ಇದನ್ನು ಪರಿಶೀಲನೆ ಮಾಡುತ್ತೇನೆ.

Sri F. X. DENIS PINTO.—What about the Gangoli Project ?

Sri H. K. VEERANNA GOWDH.—That will be expedited.

ಶ್ರೀ ಕೆ. ಎಲ್. ನರಸಿಂಹಯ್ಯ.—ಜೋಡಿ ಹುಲಿಕುಂಟೆಗೆ ರೈತರು ಮುಚ್ಚಳಿಕೆ ಕೂಡ ಬರೆದು ಕೊಟ್ಟಿದ್ದಾರೆ, ಏಕೆ ಅದನ್ನು ತೆಗೆದುಕೊಳ್ಳಬಾರದು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇರಿಗೇಷನ್ ಆಕ್ಟ್ ಪ್ರಕಾರ ಮುಚ್ಚಳಿಕೆ ತೆಗೆದುಕೊಳ್ಳಬೇಕಾಗಿಲ್ಲ. ಇರಿಗೇಷನ್ ಆಕ್ಟ್ ಸಂಬಂಧವಾಗಿ ಶ್ರೀ ಬಿ. ರಾಚಯ್ಯನವರು ಒಂದು ಸಲಹೆ ಮಾಡಿದ್ದಾರೆ. ಅದಕ್ಕಾಗಿ ಕೃತಜ್ಞತೆಯನ್ನರ್ಪಿಸುತ್ತೇನೆ. ಬೇರೆ ಬೇರೆ ಕಡೆ ಬೇರೆ ಬೇರೆ ವಾಟರ್ ರೇಟ್ ಇದೆ, ಅದಕ್ಕೆ ಕಾರಣವಿದೆ. ಹೆಚ್ಚು ಗ್ರಾಂಟು ಕೊಡಬೇಕು, ನಮ್ಮ ಸಂಸ್ಥಾನದ ಆದಾಯ ಹೆಚ್ಚಿಸಬೇಕು ಎಂದು ಪ್ಲಾನಿಂಗ್ ಕಮಿಷನ್‌ನಲ್ಲಿ ಒತ್ತಾಯ ಮಾಡಿ ಸುಮಾರು ಒಂದು ಕೋಟಿ ರೂಪಾಯಿ ಹೆಚ್ಚಿಸಬೇಕೆಂದು ಹೇಳಿದ್ದೇವೆ. ವಾಟರ್ ರೇಟ್‌ನಲ್ಲಿರುವ ವ್ಯತ್ಯಾಸ ಸರಿಪಡಿಸಬೇಕಾದದ್ದು ಅವಶ್ಯಕ. ಕೆಲವು ಕಡೆ 60 ರೂಪಾಯಿಗಳಿಂದ 120 ರೂಪಾಯಿಗಳವರೆಗಿದೆ, ಮತ್ತೆ ಕೆಲವು ಕಡೆ 10 ರೂಪಾಯಿಗಳಿದೆ. ಆದ್ದರಿಂದ ಇದನ್ನು ಸರಿಸಮ ಮಾಡಬೇಕು, ಈ ಬಗ್ಗೆ ಇರಿಗೇಷನ್ ಆಕ್ಟಿಗೆ ಈ ಅಧಿವೇಶನದಲ್ಲಿ ತಿದ್ದುಪಡಿ ತರಬೇಕು ಎಂದು ತೀರ್ಮಾನವಾಗಿದೆ. ಅದು ನಿಮ್ಮ ಮುಂದೆ ಬರುತ್ತದೆ. ಆಗ ವಾಟರ್‌ರೇಟನ್ನು ಸರಿಯಾಗಿ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ದಕ್ಷಿಣ ಕನಡಾದಲ್ಲಿ ಮೈನರ್ ಇರಿಗೇಷನ್ ಕೆಲಸ ತೆಗೆದುಕೊಳ್ಳುವ ಯೋಚನೆಯಿದೆಯೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ವಿಮರ್ಶೆ ಮಾಡಿ ಸಾಧ್ಯವಾದಷ್ಟು ಕೈಕೊಳ್ಳುತ್ತೇವೆ. ಸಣ್ಣದಾದರೆ ಸ್ಪೆಷಲ್ ಇರಿಗೇಷನ್ ಸ್ಕೀಂನಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯ.

Sri V. P. DEENADAYALU NAIDU.—Apart from big schemes there are the West Coast Road, Corporation Building, etc. Is the present staff sufficient ? Is there no need to have more Engineers ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಿಬ್ಬಂದಿ ಇಲ್ಲದಿರುವುದು ಒಂದು ಕಾರಣ; ಸಂಬಳ ಕಡಮೆಯೆಂದು ಅನೇಕರು ಬರುವುದಿಲ್ಲ. ಈಗ ಪರೀಕ್ಷೆಗಳಲ್ಲಿ ತೇರ್ಗಡೆಯಾದವರು ಬರುತ್ತಾರೆಯೇ ಎಂದು ಕಾದು ನೋಡಬೇಕು. ಟೆಕ್ನಿಕಲ್ ಕಾಲೇಜುಗಳಿಗೆ ಬರುವವರನ್ನು ಒಂದು ಷರತ್ತಿನ ಮೇಲೆ ಸೇರಿಸಿಕೊಳ್ಳಬೇಕೆಂಬ ಸಲಹೆ ಇದೆ. ಆದರೆ ರಾಜ್ಯಾಂಗದ ಪ್ರಕಾರ ಆ ರೀತಿ ಮಾಡಲು ಅವಕಾಶವಿದೆಯೇ ಎಂದು ನೋಡಬೇಕು. ಕೆಲವರು ಬರುವುದಿಲ್ಲವಾದ್ದರಿಂದ ಇಂಜಿನಿಯರಿಂಗ್ ಕಾಲೇಜಿಗೆ ಬರುವವರು ಐದು ವರ್ಷ ನಮ್ಮ ಸರ್ಕಾರದಲ್ಲಿ ಸರ್ವ್ ಮಾಡುತ್ತೇವೆಂದು ಒಪ್ಪಿಕೊಂಡರೆ ಮಾತ್ರ ಕಾಲೇಜಿಗೆ ಅವರನ್ನು ಸೇರಿಸಿಕೊಳ್ಳಬೇಕು, ಇಲ್ಲದಿದ್ದರೆ ಅವಕಾಶ ಕೊಡಬಾರದು ಎಂದು ಹೇಳುತ್ತಾರೆ. ರಾಜ್ಯಾಂಗದ ಪ್ರಕಾರ ಈ ರೀತಿ ನಿರ್ಬಂಧ ಮಾಡಲು ಸಾಧ್ಯವೇ ಎಂದು ನೋಡಬೇಕು. ಸಿಬ್ಬಂದಿ ಸಾಲುವುದಿಲ್ಲವೆಂಬುದನ್ನು ಒಪ್ಪುತ್ತೇನೆ.

ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಸಿವಿಲ್ ಡಿವಿಜನ್ ವಿಚಾರ ಹೇಳಿದರು. ಈಗ ಎಲೆಕ್ಟ್ರಿಕಲ್

(ಶ್ರೀ ಎಚ್. ಕೆ. ವೀರಣ್ಣಗೌಡ)

ಡಿವಿಜನ್ ಇಲ್ಲ, ಎಲ್ಲಾ ಕೆಲಸವನ್ನೂ ಎಲೆಕ್ಟ್ರಿಸಿಟಿ ಬೋರ್ಡ್ ಮಾಡುತ್ತದೆ. ಸರ್ಕಾರ ಬೋರ್ಡಿನಿಂದ ಕೆಲಸ ತೆಗೆದುಕೊಂಡರೂ ಮುಂಚೆ ಅಡ್ವಾನ್ಸ್ ಕೊಡಬೇಕು, ಕೆಲಸ ಪೂರ್ಣವಾಗಿ ಆದಮೇಲೆ ವಾಪಸು ಕೊಡುತ್ತಾರೆ. ಈಗ ಪ್ರತ್ಯೇಕವಾಗಿ ಎಲೆಕ್ಟ್ರಿಕಲ್ ಡಿವಿಜನ್ ಮಾಡುವ ಅಗತ್ಯವಿಲ್ಲ. ಆ ಡಿವಿಜನ್ ಕೆಲಸ ಎಲೆಕ್ಟ್ರಿಸಿಟಿ ಬೋರ್ಡಿನವರು ನೋಡಿಕೊಳ್ಳುತ್ತಾರೆ. ಪೋಲೀಸು ಕಟ್ಟಡವಾಗಲಿ, ವಿದ್ಯಾ ಖಾತೆ ಕಟ್ಟಡವಾಗಲಿ ಅಥವಾ ಬೇರೆಯಾವುದೇ ಆಗಲಿ ಆಗಬೇಕಾದರೆ ಹಣ ಕೊಡಬೇಕಾಗುತ್ತದೆ, ಕೊಟ್ಟರೆ ಕೆಲಸವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ತೊಂದರೆಯಾಗಲಾರದು.

ಇನ್ನು ವರ್ಕ್ ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ವಿಚಾರ ಹೇಳಬೇಕಾಗಿದೆ. ಅವರಿಗೆ ಡಿ. ಎ. ಏಕೆ ಕೊಟ್ಟಿಲ್ಲ ಎಂದು ಕೇಳಿದರು. ಅದನ್ನು ಕೊಡುತ್ತಿದೆ. ಈಚೆಗೆ ಡಿ. ಎ. ದರ ಹೆಚ್ಚಿಸಿದೆವು. ಅದರಂತೆ ಈ ಸಿಬ್ಬಂದಿಗೆ ಹೆಚ್ಚಿಸಿಲ್ಲ. ಅದನ್ನು ಹೆಚ್ಚಿಸಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಡಿ. ಎ. ದರ ಅವರಿಗೆ ಹೆಚ್ಚಿಸಲಾಗುತ್ತದೆ. ಬೆಂಗಳೂರು ಸಿಟಿ ವಾಟರ್ ಸಪ್ಲೈ ಡಿವಿಜನ್‌ನಲ್ಲಿರುವ ವರ್ಕ್ ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್‌ನವರು ಸಾರೋದ್ಧಾರವಾಗಿರಬೇಕಾದ್ದರಿಂದ ಅವರನ್ನು ಖಾಯಂ ಮಾಡಿದ್ದೇವೆ. ಎಲ್ಲೆಲ್ಲಿ ವರ್ಕ್ ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ಇದೆಯೋ ಅಲ್ಲಿ ಸಾರೋದ್ಧಾರವಾಗಿ ಕೆಲಸ ನಡೆಯುವುದಾದರೆ ಅದನ್ನು ಖಾಯಂ ಮಾಡಬೇಕೆಂದು ವಿಮರ್ಶೆ ಮಾಡುತ್ತಿದೆ. ಈಗ ವರ್ಕ್ ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟಿಗೆ ಬಾಕಿಯವರಿಗೆ ಕೊಟ್ಟ ಹಾಗೆ ಡಿ. ಎ. ದರ ಹೆಚ್ಚಿಸುವುದಕ್ಕೆ ಅವಕಾಶವಿದೆ.

7-30 P.M.

ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹೇಳಿದ ಕೆಲವು ಸಲಹೆಗಳನ್ನು ತೀರ್ಮಾನ ಮಾಡುವುದಕ್ಕೆ ಸ್ವಲ್ಪ ತಕರಾರು ಇದೆ. ಅನೇಕ ಕೆಲಸಗಳನ್ನು ರೈತರೇ ಮಾಡುತ್ತಿದ್ದಾರೆ. ಕೆಲವು ಕೆಲಸಗಳನ್ನು ಸರ್ಕಾರ ಮಾಡಿಸಬೇಕಾದ ಅಗತ್ಯವಿದೆ.

ಇನ್ನೊಂದು ವಿಷಯ ಅವರು ಟಿ. ಬಿ. ವಿಚಾರವನ್ನು ಹೇಳಿದರು. ಟಿ. ಬಿ.ಯಿಂದ ಹೆಚ್ಚಿಗೆ ಸಂಪಾದನೆ ಬಂದರೆ ಸರ್ಕಾರದವರು ಏತಕ್ಕೆ ಹಿಂದುಮುಂದು ನೋಡಬೇಕು? ಅದನ್ನು ಖಂಡಿತವಾಗಿ ಅಪ್-ಗ್ರೇಡ್ ಮಾಡಬೇಕಾಗುತ್ತದೆ. ಶ್ರೀಮತಿ ನಾಗರತ್ನಮ್ಮನವರೇ ಒಂದು ಸಾರಿ ಮಹಾರಾಣಿಯವರನ್ನು ಆ ಟಿ.ಬಿ. ಗೆ ಕರೆಸಿದ್ದರು. ನಾನು ಅಲ್ಲಿಗೆ ಹೋಗಿದ್ದೆ. ಬಂಡೀಪುರ, ಊಟಿ ಮಾರ್ಗವಾಗಿ ಹೋಗುವವರು ಈ ಟಿ.ಬಿ.ಗೆ ಬಂದು ಕೆಲವು ಕಾಲ ಇಳಿದುಕೊಂಡಿದ್ದು ಹೋಗುತ್ತಾರೆ. ಮಹಾರಾಜರು ಮಹಾರಾಣಿಯವರು ಇಲ್ಲಿ ಬಂದು ಇಳಿದುಕೊಳ್ಳುತ್ತಾರೆ. ಈ ಟಿ. ಬಿ. ಇರುವ ರಸ್ತೆ ಬಹಳ ಪ್ರಾಮುಖ್ಯವಾದ ರಸ್ತೆ. ಎಲ್ಲರೂ ಬಂದು ಇಲ್ಲಿ ಇಳಿದುಕೊಳ್ಳುವುದಕ್ಕೆ ಅವಕಾಶವುಂಟು. ಆದ್ದರಿಂದ ಈ ಟಿ. ಬಿ.ಯನ್ನು ಅಪ್-ಗ್ರೇಡ್ ಮಾಡಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಇನ್ನು ವಾಟರ್ ಸಪ್ಲೈ ವಿಚಾರ ಹೇಳಿದರು, ದುಡ್ಡು ಕೊಟ್ಟಿದ್ದೇವೆ ಕೆಲಸವನ್ನು ಎಕ್ಸ್‌ಪಡೇಟ್ ಮಾಡಿಸಬೇಕು ಎಂದು. ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ನಡೆದ ಒಂದು ಕಾನ್‌ಫರೆನ್ಸಿಗೆ ನಾನು ಹೋಗಿದ್ದೆ. ಅಲ್ಲಿ ಈ ವಿಚಾರದಲ್ಲಿ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅದನ್ನು ಇನ್‌ವೆಸ್ಟಿಗೇಟ್ ಮಾಡಿ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಕೆರೆಗಳ ರಿಪೇರಿ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು. 1,800 ಕೆರೆಗಳ ರಿಪೇರಿಯನ್ನು ಒಂದು ಜಿಲ್ಲೆಯೊಳಗೆ ಎರಡು ವರ್ಷಗಳೊಳಗೆ ಮಾಡುವುದಕ್ಕಾಗುವುದಿಲ್ಲ. ಪ್ರೈಯಾರಿಟಿ ಬೇಸಿಸ್‌ಮೇಲೆ ಮಾಡಬಹುದು. 1,800 ಕೆರೆಗಳಲ್ಲಿ 300-400 ಕೆರೆಗಳು ಅಬ್ಯಾಂಡನ್ ಆಗಿವೆಯೆಂದು ನಾನು ಹೇಳುತ್ತೇನೆ. ಮುಖ್ಯವಾಗಿ ಆ ರೀತಿ ಕೆರೆಗಳ ರಿಪೇರಿ ಕೆಲಸ ಮಾಡಬೇಕಾದರೆ, ಒಂದು ಜಿಲ್ಲೆಗೆ ಇನ್‌ವೆಸ್ಟಿಗೇಷನ್ ಸರ್ವೆ ಮಾಡುವುದಕ್ಕೆ ಎಷ್ಟು ಸಿಬ್ಬಂದಿ ಬೇಕೆಂಬುದನ್ನು ನೋಡಿ ಮಾಡಬೇಕು. ನೂರಾರು ವರ್ಷಗಳಿಂದ ಮಾಡಿದೆ ಬಿಟ್ಟುಕೊಂಡು ಬಂದಿರುವ ಕೆಲಸವನ್ನು ಸುಮಾರು 10 ವರ್ಷಗಳಲ್ಲಿ ಸರ್ಕಾರದವರು ಮಾಡಲಿಲ್ಲವೆಂದು ಹೇಳಿದರೆ ಅದು ನ್ಯಾಯವಲ್ಲ. ಸ್ವರಾಜ್ಯ ಬಂದರೆ ಈ ರೀತಿಯಲ್ಲಾ ಆಗುತ್ತದೆ. ಏನೂ ಕೆಲಸವಾಗಲಿಲ್ಲವೆಂದು ಆತುರ ಪಡುವುದು ಸ್ವಾಭಾವಿಕ. ಏನಾದರೂ ಒಂದು ಕೆಲಸವನ್ನು ಕೈಹಿಡಿದಾಗ ಬರತಕ್ಕ ಅಡಚಣೆ, ಅಡ್ಡಿ ಆತಂಕಗಳನ್ನು ನೋಡಿಕೊಂಡು ಮಾಡಬೇಕು. ಎಲ್ಲಾ ಅಂಶಗಳನ್ನೂ ವಿಮರ್ಶೆ ಮಾಡಿ ಕೆರೆಗಳ ರಿಪೇರಿ ಕೆಲಸವನ್ನು ಕೈಗೊಳ್ಳಬೇಕು. ನಾವು ವಾಟರ್ ರೇಟ್ ತೆಗೆದುಕೊಂಡಿರುವುದರಿಂದ, ರಿಪೇರಿ ಕೆಲಸವನ್ನು ಮಾಡಿಸಿಕೊಡಬೇಕು. ಆದರೆ ಸಾವಿರಾರು ಕೆರೆಗಳ ರಿಪೇರಿಯನ್ನು ಒಂದು ಜಿಲ್ಲೆಯಲ್ಲಿ ಮಾಡಿಸಿ ಎಂದು ಹೇಳುವುದು ಬಹಳ ಕಷ್ಟ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪೌರಸಭೆಗಳ ಕೆಲಸ ಕಾರ್ಯಗಳ ವಿಚಾರದಲ್ಲಿ ಸರ್ಕಾರದವರಿಗೆ ಸ್ಟೆಪ್ ಮದರ್ಲಿ ಫೀಲಿಂಗ್ ಏಕೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಏಕಮುಖವಾದ ಮಾರ್ಗವಲ್ಲ. ಪೌರಸಭೆಗಳು ಒಂದೊಂದು ಸಾರಿ ಕೌಂಟರ್ ಸ್ಟೈನ್ ಮಾಡುವುದಿಲ್ಲ. ನಮ್ಮ ಕೋಟಾ ಕೊಡುವುದಿಲ್ಲ. ನಿಧಾನ ಮಾಡುತ್ತಾರೆ. ಸರ್ಕಾರದವರು ಕೇಂದ್ರ ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು ಅವರಿಗೆ ಕೊಡಬೇಕು. ಅದಕ್ಕೆ ಸರ್ಕಾರದವರು ಸ್ಟೆಪ್ ಮದರ್ಲಿ ಫೀಲಿಂಗ್ ತೋರಿಸುತ್ತಾರೆಂದು ಹೇಳಿದರೆ ಹೇಗೆ? ನಾನು ಆ ಮಾತನ್ನು ಒಪ್ಪಿಕೊಳ್ಳುವುದಿಲ್ಲ. ಪೌರಸಭೆಯವರೇ ಆಗಲಿ, ಯಾರೇ ಆಗಲಿ, ಎಲ್ಲರೂ ಮೈಸೂರು ಸಂಸ್ಥಾನಕ್ಕೆ ಸೇರಿದವರೇ. ಚಿಕ್ಕನಾಯಕನ ಹಳ್ಳಿಯೂ ಒಂದೇ, ಬೆಂಗಳೂರುಸಿಟಿಯೂ ಒಂದೇ. ನಮ್ಮೂರು ಸಹ ಒಂದೇ.

Sri B. V. DESAI.—What about underground drainage schemes for Mangalore ?

Sri H. K. VEERANNA GOWDH.—Now there is plenty of water ; there is no difficulty.

Sri C. J. MUCKANNAPPA.—May I know about providing conveyance to the Assistant Engineer ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕನ್‌ವೇಯನ್ಸ್ ಸಲುವಾಗಿ ಜೀಪ್ ಕೊಡಬೇಕೆಂದು ಇದೆ. ಈಗ ಒಂದೊಂದು ಡಿವಿಜನ್ನಿಗೆ ಒಂದು ಇದೆ. ತುರ್ತಿಗೆ

ಹಂಗಾಮಿ ಏರ್ಪಾಡು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಸೀತಾರಾಮರಾವ್ ಅವರು ಭದ್ರಾವತಿಯಲ್ಲಿ ಎರಡು ಸೇತುವೆಗಳನ್ನು ಮಾಡುವುದು ಅಗತ್ಯವಾಗಿದೆ ಎಂದು ಹೇಳಿದರು. ಈ ಎರಡನೆಯ ಸೇತುವೆ ಅಗತ್ಯವಾಗಿರುವುದರಿಂದ ಅದನ್ನು ಕಟ್ಟುವದಕ್ಕಾಗಿ ಪ್ರಯತ್ನ ಮಾಡಲಾಗುವುದು. ಕಬ್ಬಿನ ಮೇಲಿನ ಸುಂಕದಿಂದ ಮತ್ತು ಮುನಿಸಿಪಾಲಿಟಿ ಕೊಡತಕ್ಕ ಹಣದಿಂದ ಸೇತುವೆ ನಿರ್ಮಿಸಲಾಗುವುದು. ಈ ರಸ್ತೆಯನ್ನು deviate ಮಾಡುವುದು ಅಗತ್ಯವಾಗಿದೆ.

ಅಂಜನಾಪುರ ಕೆರೆಯ ಪ್ರದೇಶದಲ್ಲಿ ಮಳೆಗಾಲದಲ್ಲಿ 1,500 ಎಕರೆ ಭೂಮಿ ಮುಳುಗಡೆಯಾಗುತ್ತದೆ. ಮಳೆಗಾಲದಲ್ಲಿ ಎಷ್ಟು ಭೂಮಿ ಮುಳುಗಡೆಯಾಗುತ್ತದೆಯೋ ಅಷ್ಟು ಪ್ರದೇಶವನ್ನು ಕಾಯಂ ಮುಳುಗಡೆ ಮಾಡಿ ಕೋಡಿಯನ್ನು ಎತ್ತರಿಸಿ 20-25 ಸಾವಿರ ಎಕರೆ ಭೂಮಿಗೆ ನೀರಾವರಿ ಸಾಗುವಳಿಯಾಗುವುದಕ್ಕೆ ಅವಕಾಶವಿದೆ. ನಾಲಾ ತೆಗೆಯಬೇಕಾಗಿದೆ. ಅಗತ್ಯವಿರುವ ರಿಪೇರಿ ಮಾಡಿ ಕೋಡಿ ಎತ್ತರಿಸಬೇಕಾಗಿದೆ. ಅದರ ಬಗ್ಗೆ ತೀವ್ರ ಪರಿಶೀಲನೆ ಮಾಡುತ್ತಿದ್ದೇವೆ. ಅಂಜನಾಪುರ ಕೋಡಿ ಅಚ್ಚುಕಟ್ಟು ಭಾಗದಲ್ಲಿ 1,500 ಎಕರೆ ಭೂಮಿ ಮುಳುಗಡೆಯಾಗುವುದಾದರೆ 20-25 ಸಾವಿರ ಎಕರೆ ಭೂಮಿಗೆ ನೀರಾವರಿ ಉಪಯೋಗವಾಗುವದರಿಂದ ತೀವ್ರ ಯೋಚನೆ ಮಾಡುತ್ತಿದ್ದೇವೆ.

ಸಾಮಾನ್ಯವಾಗಿ ಎಲ್ಲ ಸ್ನೇಹಿತರೂ ಸೂಚಿಸಿದ ಮುಖ್ಯ ಮುಖ್ಯ ಅಂಶಗಳಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಈ ಮೊದಲೇ ಹೇಳಿದ ಹಾಗೆ ಆಯಾಯ ಭಾಗದ ಸದಸ್ಯರು ಸೂಚಿಸಿದ ಕುಂದು ಕೊರತೆಗಳ ಪಟ್ಟಿ ಮಾಡಿ ಗುರುತು ಹಾಕಿಕೊಂಡಿದ್ದೇನೆ. ಪ್ರತಿಯೊಬ್ಬ ಸದಸ್ಯರೂ ತಿಳಿಸಿದ ಪ್ರತಿಯೊಂದು ಕೆಲಸದ ಬಗ್ಗೆಯೂ ಈಗ ವಿವರ ಹೇಳುವುದು ಅಗುವುದಿಲ್ಲ. ಇಂಡಿಯಾ ಸರ್ಕಾರದವರು ಹಣದ ಸಹಾಯ ಮಾಡುತ್ತಿರುವುದರಿಂದ ಹಣದ ಅಭಾವ ಬರುವುದಿಲ್ಲ, ಹಣದ ಅಭಾವಕ್ಕಾಗಿ ಕೆಲಸ ನಿಲ್ಲಿಸಲಾಗವುದಿಲ್ಲ. ಕೆಲಸ ಕಾರ್ಯಗಳನ್ನು ಮಾಡಿಸುತ್ತೇವೆ.

ಇನ್ನು ಘಟಪ್ರಭಾ ಯೋಜನೆಯ ಬಗ್ಗೆ ಹೇಳಬೇಕೆಂದಿದ್ದೇನೆ. ಹಡಗಲಿ ಹತ್ತಿರ ಮುಳುಗಡೆಯಾಗುವ ಭೂಮಿ ಬೊಂಬಾಯಿ ರಾಜ್ಯದ ಕೊಲ್ಲಾಪುರ ಜಿಲ್ಲೆಗೆ ಸಂಬಂಧಪಟ್ಟದ್ದಾಗಿದೆ. ಈ ಮುಳುಗಡೆಯಾಗುವ ಭೂಮಿಯ ಸಲುವಾಗಿ ಬೊಂಬಾಯಿ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸುತ್ತಿದ್ದೇವೆ. ಮೈಸೂರು ರಾಜ್ಯದಲ್ಲಿಯೇ ಬೇರೆ ಕಡೆಗೆ ಈ ಯೋಜನೆಯನ್ನು ತೆಗೆದುಕೊಳ್ಳುವುದು ಸಾಧ್ಯವಿದೆಯೇ ಎಂಬುದನ್ನು ವಿಮರ್ಶೆಮಾಡಿ ನೋಡಲಾಗುವುದು. ಈ ಬಗ್ಗೆ ಯೋಜನೆಮಾಡಿ ಕಾರ್ಯ ಮಾಡುತ್ತೇವೆ. ಆದ್ದರಿಂದಲೇ ಕಡಮೆ ಹಣ ಅದಕ್ಕೆ ತೋರಿಸಿದೆ. ಮತ್ತು ತುಂಗಭದ್ರಾ ಹೈಲೆವಲ್ ಕೆನಾಲ್‌ಗೆ ಎಷ್ಟು ಕಮ್ಮಿ ಎಂದು ಕೇಳಿದರೂಕೂಡ ಇಂಡಿಯಾ ಸರ್ಕಾರದವರು ಕೊಡುತ್ತಾರೆಯೋ ಇಲ್ಲವೋ ಅನುಮಾನಾಸ್ಪದವಾಗಿದೆ. ಅದರ ಮೇಲೆ ಅದು ಡಿಪೆಂಡ್ ಆಗುತ್ತದೆ. ಒಪ್ಪಿಗೆಕೊಟ್ಟರೆ ಹಣವೊದಗಿಸುತ್ತೇವೆ.

ಕಡೆಯದಾಗಿ ಮಾನ್ಯಸದಸ್ಯರು ಹೇಳಿರತಕ್ಕ ಅನೇಕ ಅಂಶಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಎಷ್ಟು ಅಗತ್ಯವೋ ಅಷ್ಟೂ ಕೆಲಸಗಳನ್ನು ಮಾಡುತ್ತಾರೆ ಎಂದು ಹೇಳಿ ಅವರು ಕೊಟ್ಟಿರತಕ್ಕ ಸಲಹೆಗಳಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾನ್ಯಸದಸ್ಯರು ಒಬ್ಬೊಬ್ಬರು ಒಂದೆರಡು ವಿಚಾರ ಹೇಳಿದ್ದಾರೆ ಅಷ್ಟೆ. ವಾಟರ್ ಸಪ್ಲೈ ವಿಚಾರದಲ್ಲಿ ರಾಮಯ್ಯನವರು ಬಳ್ಳಾರಿಯಂಥಾ ದೊಡ್ಡ ಸಿಟಿನಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ ಎಂದು ಹೇಳಿದರು. ಅದು ಗೊತ್ತಿದೆ. ಅದಕ್ಕೆ ಒಂದು ಎಸ್ಟಿಮೇಟು ತಯಾರು ಮಾಡಿದ್ದಾರೆ. 20 ಲಕ್ಷ ರೂಪಾಯಿನ ಎಸ್ಟಿಮೇಟ್ ಇದೆ. ಅದು ಒಂದು ತಲೆಗೆ ಸುಮಾರು 40 ಗ್ಯಾಲನ್ ಕೊಡಬಹುದೆಂದು ಅಂದಾಜಾಗಿದೆ. ಆದರೆ ಹಣದ ಅಭಾವದಿಂದ ಕಾರ್ಯಗತ ಮಾಡುವುದಕ್ಕಾಗುವುದಿಲ್ಲ ಎಂದು ತಿಳಿದು ಬಂತು. ರಿವೈಸ್ಡ್ ಎಸ್ಟಿಮೇಟ್ 65 ಲಕ್ಷ ರೂಪಾಯಿಗೆ ಬಂದಿದೆ. ಆದಷ್ಟು ಬೇಗ ಮಂಜೂರು ಮಾಡಲಿಕ್ಕೆ ಮುಂದೆ ಪ್ರಯತ್ನ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು ರಸ್ತೆಯ ವಿಚಾರದಲ್ಲಿ ಅಲಾಟ್‌ಮೆಂಟ್ ಬಹಳ ಕಡಮೆ ಇದೆ, ಎಲ್ಲಕಡೆಯೂ ಸಮರ್ಪಕವಾಗಿ ಹಂಚಬೇಕೆಂದು ಹೇಳಿದರು. ಆರೀತಿ ಮಾಡುತ್ತಾ ಇರುವುದರಲ್ಲಿ ಅನುಮಾನವೇ ಇಲ್ಲ. ಡಿಸ್ಟ್ರಿಕ್ಟ್‌ಬೋರ್ಡ್ ರಸ್ತೆಗೆ ಈಗ ಕೊಡತಕ್ಕ ಮೈಲೇಜ್ ಗ್ರಾಂಟ್ 200 ರೂಪಾಯಿ ಇದೆ, ಜಾಸ್ತಿ ಕೊಡಬೇಕೆಂದು ಹೇಳಿದ್ದಾರೆ. ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟು ಪ್ರಯತ್ನ ಮಾಡುತ್ತೇವೆ.

ಲೋಕಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಈ ವರ್ಷ 45 ಲಕ್ಷ ರೂಪಾಯಿ ಒದಗಿಸಿರುವುದನ್ನು ಎಲ್ಲಾ ಕಡೆಗೂ ಆದಷ್ಟುಮಟ್ಟಿಗೆ ಸಮರ್ಪಕವಾಗಿ ಹಂಚುತ್ತೇವೆ ಎಂದು ಹೇಳುತ್ತೇನೆ.

ಕುಮಾರ ಗೌಡರು ವಿಜಾಪುರ ಡಿಸ್ಟ್ರಿಕ್ಟ್‌ನ ಹಳ್ಳಿಗಳಲ್ಲಿ ರತಕ್ಕ ಕುಡಿಯುವ ನೀರಿನ ಅಭಾವದ ವಿಚಾರ ಹೇಳಿದರು 200 ಮನೆ ಇದ್ದು, 500 ಜನಸಂಖ್ಯೆ ಇದ್ದರೂಸಹ ಕುಡಿಯುವ ನೀರಿನ ಬಾವಿಗಳನ್ನು ತೆಗೆಸಬೇಕೆಂದು ಹೇಳುತ್ತಾರೆ. ಸರ್ಕಾರದವರ ಉದ್ದೇಶವಾದರೂ ಇದೇ. ಹಳೆಯ ಮೈಸೂರಿನಲ್ಲಿ ತಮಗೆ ಗೊತ್ತಿರುವ ಹಾಗೆ 150-200 ಮನೆ ಇದ್ದರೆ ಬಾವಿ ಏರ್ಪಡಿಸುತ್ತಾ ಇದ್ದೇವೆ. ಜನಸಂಖ್ಯೆ ಆಧಾರವಾಗಲಿ, 200 ಮನೆ ಇರಬೇಕೆಂಬುದಾಗಲಿ ಮುಖ್ಯವಲ್ಲ. ಹಣ ಇರುವುದರಲ್ಲಿ ಜನಗಳಿಗೆ ನೀರು ಒದಗಿಸಬೇಕು ಎಂಬುದೇ ನಮ್ಮ ಉದ್ದೇಶ.

ತಾಳೀಕೋಟೆ ವಾಟರ್ ಸಪ್ಲೈ ವಿಚಾರ ಹೇಳಿದರು. ಅದಕ್ಕೆ ಒಂದು ಯೋಜನೆ ಮಂಜೂರಾಗಿದೆ. ಆರ್ಡರ್ ಇಷ್ಯು ಆಗಿದೆ. 4 ಲಕ್ಷ 3 ಸಾವಿರ ರೂಪಾಯಿಗೆ ಎಸ್ಟಿಮೇಟ್ ಆಗಿದೆ, ಅದರಲ್ಲಿ ಅರ್ಧಭಾಗ ಹಿಂದಿನ ಬೊಂಬಾಯಿ ಸರ್ಕಾರದವರು ಕೊಡಬೇಕಾಗುತ್ತದೆ. ಇನ್ನುಳಿದದ್ದರಲ್ಲಿ ಅರ್ಧಭಾಗ ಗ್ರಾಂಟ್ ಕೊಡಬೇಕೆಂದು ಮಂಜೂರಾಗಿದೆ.

ಶ್ರೀಮಾನ್ ರೇವಣ್ಣಸಿದ್ದಪ್ಪನವರು ಒಂದು ವಿಷಯ ಹೇಳಿದರು. ಅದನ್ನು ಪರಿಶೀಲನೆಮಾಡಿದೆ. ಅದನ್ನು ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಈಗಾಗಲೆ ಒಂದುರಸ್ತೆ 6 ಮೈಲಿ ಉದ್ದದ್ದು ಇದೆ. ಇನ್ನೊಂದು ರಸ್ತೆ ಮಾಡಿ ಎಂದು ಹೇಳುತ್ತಾರೆ. ಅದಕ್ಕೆ 10 ಸಾವಿರ ರೂಪಾಯಿಗೆ ಮೇಲ್ಪಟ್ಟು ಅಂದಾಜಾಗುತ್ತದೆ. ಸಾಕಷ್ಟು ಹಣ ಒದಗಿಸುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹಳ್ಳಿಯವರು ಮೂರು ಸಾವಿರ ರೂಪಾಯಿ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿ ನೋಡ ಬೇಕಾಗುತ್ತದೆ. ಇನ್ನು ನಮ್ಮ ಕೆಲವು ಮಾನ್ಯ ಸದಸ್ಯರು ನೀರಿನ ವಿಚಾರ ಪ್ರಸ್ತಾಪಿಸಿದ್ದಾರೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂ ಎಂಬುದೊಂದು ಯೋಜನೆಯಿದೆ. ಅದರ ಜೊತೆಗೆ ನಮ್ಮ ಸರ್ಕಾರದ ಯೋಜನೆ ಬೇರೆಇದೆ. ಈ ಯೋಜನೆಗಳ ಮೂಲಕ ಸಾಧ್ಯವಾದಷ್ಟು ಕಡೆಗಳಲ್ಲಿ ಈ ಕೆಲಸವನ್ನು ಬೇಗ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆಂದು ನಾನು ಮಾನ್ಯ ಸದಸ್ಯರುಗಳಿಗೆ ಭರವಸೆ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The question is:

"That a sum not exceeding Rs. 91,72,000 be granted to the Government to defray the charges which will come in course of payment during the year ending 31st day of March 1959, in respect of 'Other Revenue Expenditure financed from Ordinary Revenues'."

The motion was adopted.

Mr. SPEAKER.—The question is:

"That a sum not exceeding Rs. 9,01,92,600 be granted to the Government to defray the charges which will come in course of payment during the year ending 31st day of March 1959, in respect of 'Civil Works'."

The motion was adopted.

Mr. SPEAKER.—The question is:

"That a sum not exceeding Rs. 85,68,000 be granted to the Government to defray the charges which will come in course of payment during the year ending 31st day of March 1959, in respect of 'I.N.E. & D. Works (Commercial)—Working Expenses'."

The motion was adopted.

Mr. SPEAKER.—The question is:

"That a sum not exceeding Rs. 6,31,90,600 be granted to the Government to defray the charges which will come in course of payment during the year ending 31st day of March 1959, in respect of 'Construction of Irrigation, Navigation, Embankment and Drainage Works (Commercial)'."

The motion was adopted.

Mr. SPEAKER.—The question is:

"That a sum not exceeding Rs. 1,20,52,000 be granted to the Government to defray the charges which will come in course of payment during the year ending 31st day of March 1959, in respect of 'Construction of I. N. E. & D. Works—Non-Commercial'."

The motion was adopted.

Mr. SPEAKER.—The question is:

"That a sum not exceeding Rs. 59,83,000 be granted to the Government to defray the charges which will come in course of payment during the year ending 31st day of March 1959 in respect of 'Capital Outlay on Improvement of Public Health'."

The motion was adopted.

Mr. SPEAKER.—The question is:

"That a sum not exceeding Rs. 33,00,000 be granted to the Government to defray the charges which will come in course of payment during the year ending 31st day March 1959, in respect of 'Appropriation to Irrigation and Power Development Fund'."

The motion was adopted.

Mr. SPEAKER.—The question is:

"That a sum not exceeding Rs. 4,04,45,800 be granted to the Government to defray the charges which will come in course of payment during the year ending 31st day of March 1959, in respect of 'Capital Account of Civil Works Outside the Revenue Account'."

The motion was adopted.

MR. SPEAKER.—The question is:

"That a sum not exceeding Rs. 37,37,500 be granted to the Government to defray the charges which will come in course of payment during the year ending 31st day of March 1959, in respect of 'Capital Account of Other Works outside the Revenue Account'."

The motion was adopted.

MR. SPEAKER.—The House will now rise and meet on Tuesday at 1 P.M.

The House adjourned at Fifty Minutes past Seven of the Clock to meet again at One of the Clock on Tuesday, the 22nd April 1958.

WD 1065—900—GPB—7-10-1958